ಏಪ್ರಿಲ್ 20, 2025
40ನೇ ವರ್ಷದಲ್ಲಿ
www.facebook.com/firstcrimenewspaper/
ಸ್ಥಾಪಕ ಸಂಪಾದಕ : ದಿ||ಎಂ. ಮಲ್ಲಿಕಾರ್ಜುನಯ್ಯ

# ಪೊಲೀಸ್ ನ್ಯೂಸ್

1981
ಪರಿಶೋಧನೆ, ಪತ್ತೇದಾರಿಕೆ ಮತ್ತು ರೋಚಕ ಸುದ್ದಿಗಳ ಸಚಿತ್ರ ಕನ್ನಡ ವಾರಪತ್ರಿಕೆ
ಬೆಲೆ : ₹20/-

## ಇಸ್ಪೀಟ್ ಅಡ್ಡಾದಲ್ಲಿ 'ಹಫ್ತಾ' ವಸೂಲಿ!






# ರೌಡಿ ನೇಪಾಳಿ ಮಂಜ ಕಗ್ಗೊಲೆ!

## ಲೇಡಿ ಸಿಂಗಂಗೆ ಎನ್‌ಕೌಂಟರ್ ಆದ ಕಾಮುಕ!





## ಪತಿಯನ್ನು ಕೊಲ್ಲಿಸಿ ಹೆಣದ ಮುಂದೆ ಗೋಳಾಡಿದ ಮಳ್ಳಿ!

## ಜೀವನಾಂಶ ಕೇಳಿದ್ದಕ್ಕೆ ಮೊದಲ ಹೆಂಡ್ತಿಗೆ ಮಚ್ಚಿನೇಟು!

## ಹಾಡಹಗಲೇ ಅಟ್ಟಾಡಿಸಿ ಕೊಲೆಗೈದ ಹಂತಕರಿಗೆ ಜೀವಾವಧಿ ಶಿಕ್ಷೆ

# ಐದು ವರ್ಷದ ಬಾಲಕಿ ಕೊಲೆ ಮಾಡಿದ್ದ ಆರೋಪಿ ಪೊಲೀಸ್ ಎನ್‌ಕೌಂಟರ್‌ಗೆ ಬಲಿ!



ಐದು ವರ್ಷದ ಮಗುವಿನ ಅತ್ಯಾಚಾರಕ್ಕೆ ಯತ್ನಿಸಿ ಕೊಲೆ ಮಾಡಿದ ಬಿಹಾರ ಮೂಲದ ಆರೋಪಿ ಬಿಹಾರದ ರಕ್ಷಿತ್ ಕ್ರಾಂತಿ ಹುಬ್ಬಳ್ಳಿ ಪೊಲೀಸರ ಎನ್‌ಕೌಂಟರ್‌ಗೆ ಬಲಿಯಾಗಿದ್ದಾನೆ.

ಬಿಹಾರದ ಪಟನಾ ಮೂಲದ ರಿತೇಶ್‌ಕುಮಾರ್ (35) ಎನ್‌ಕೌಂಟರ್‌ಗೆ ಬಲಿಯಾದ ಆರೋಪಿ. ಆರೋಪಿಯನ್ನು ವಶಕ್ಕೆ ಪಡೆದು ಆತ ವಾಸಿಸುತ್ತಿದ್ದ ಸ್ಥಳಕ್ಕೆ ಕರೆದೊಯ್ದು ವಿಚಾರಣೆ ನಡೆಸುವ ವೇಳೆ ಪೊಲೀಸ್ ಸಿಬ್ಬಂದಿ ಮೇಲೆ ಕಲ್ಲಿನಿಂದ ಹಲ್ಲೆ ನಡೆಸಿ ಪರಾರಿಯಾಗಲು ಯತ್ನಿಸಿದ್ದಾನೆ. ಪೊಲೀಸರು ಆತ್ಮ ರಕ್ಷಣೆಗೆ ಪಿಎಸ್‌ಐ ಅನ್ನಪೂರ್ಣ ಆರ್.ಎಂ. ಎನ್‌ಕೌಂಟರ್ ಮಾಡಿದ್ದಾರೆ.



ಮೊದಲು ಮೂರು ಸುತ್ತು ಗಾಳಿಯಲ್ಲಿ ಗುಂಡು ಹಾರಿಸಿ ಎಚ್ಚರಿಸಿದ್ದಾರೆ. ಆದರೂ ಆರೋಪಿ ತಪ್ಪಿಸಿಕೊಳ್ಳಲು ಯತ್ನಿಸಿದಾಗ ಕಾಲಿಗೆ ಗುಂಡು ಹೊಡೆದಿದ್ದಾರೆ. ನಂತರ ಗುಂಡು ಹಾರಿಸಿದಾಗ ಬೆನ್ನಿಗೆ ಗುಂಡು ತಗಲಿ ಗಂಭೀರವಾಗಿ ಗಾಯಗೊಂಡಿದ್ದ. ಚಿಕಿತ್ಸೆಗೆ ಕೆಎಂಸಿಆರ್‌ಐ



ಆಸ್ಪತ್ರೆ ಕರೆತಂದಿದ್ದಾಗ ವೈದ್ಯರು ಮೃತ ಪಟ್ಟಿರುವುದಾಗಿ ಹೇಳಿದರು ಎಂದು ಹುಬ್ಬಳ್ಳಿ-ಧಾರವಾಡ ಪೊಲೀಸ್ ಆಯುಕ್ತ ಎನ್. ಶಶಿಕುಮಾರ್ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು

ಭಾನುವಾರ ಬೆಳಿಗ್ಗೆ 5 ವರ್ಷದ ಬಾಲಕಿಗೆ ಬಾಲಕಿಗೆ ತಿಂಡಿ ತಿನಿಸುಗಳನ್ನು ನೀಡುವುದಾಗಿ ಪುಸಲಾಯಿಸಿ ವ್ಯಕ್ತಿಯೊಬ್ಬ ಕರೆದುಕೊಂಡು ಹೋಗಿದ್ದಾನೆ. ಅಲ್ಲಿಂದ ಆಕೆಯನ್ನು ಪಾಳು ಮನೆಗೆ ಕರೆದೊಯ್ಯಿದು ಅಸಭ್ಯ ವರ್ತನೆ ಮಾಡಿದ್ದಾನೆ. ಬಾಲಕಿ ಕಿರುಚಿದಾಗ ಆಕೆಯನ್ನು ಕೊಲೆ ಮಾಡಿದ್ದಾನೆ. 10 ಗಂಟೆ ಸುಮಾರಿಗೆ ಐದು ವರ್ಷದ ಮಗು ನಾಪತ್ತೆಯಾದ ಕುರಿತು ಪ್ರಕರಣ ದಾಖಲಾಗಿತ್ತು. ನಂತರ, ಮಗು ನಾಪತ್ತೆಯಾದ ಸ್ಥಳದ ಎದುರಿರುವ ಶೆಡ್‌ನಲ್ಲಿ ಮೃತದೇಹ ಪತ್ತೆಯಾಗಿತ್ತು. ಸಿಸಿಟಿವಿ ಕ್ಯಾಮೆರಾ ದೃಶ್ಯಾವಳಿ ಹಾಗೂ ಸ್ಥಳೀಯರು ನೀಡಿದ ಮಾಹಿತಿ ಆಧರಿಸಿ ಬಿಹಾರ ಮೂಲದ ವ್ಯಕ್ತಿಯನ್ನು ಪೊಲೀಸರು ವಶಕ್ಕೆ ಪಡೆದಿದ್ದರು.

ಆರೋಪಿಯು ಹುಬ್ಬಳ್ಳಿಯಲ್ಲೂ ಕೆಲಸ ಮಾಡುತ್ತ, ತಾರಿಹಾಳ ಸೇತುವೆ ಬಳಿಯ ಹಳೇ ಶೆಡ್‌ನಲ್ಲಿ ವಾಸಿಸುತ್ತಿರುವುದಾಗಿ ತಿಳಿಸಿದ್ದ. ಅವನ ಜೊತೆ ಯಾರಿದ್ದಾರೆಂದು ತಿಳಿದುಕೊಳ್ಳಲು, ಅವನನ್ನು ಸ್ಥಳಕ್ಕೆ ಕರೆದುಕೊಂಡು ಹೋದಾಗ ಎನ್‌ಕೌಂಟರ್ ನಡೆದಿದೆ.

**ಎನ್‌ಕೌಂಟರ್‌ಗೆ ಶ್ಲಾಘನೆ**

ಐದು ವರ್ಷದ ಬಾಲಕಿ ಕೊಲೆ ಮಾಡಿದ ಬಿಹಾರ ಮೂಲದ ವ್ಯಕ್ತಿಯನ್ನು ಅರೆಸ್ಟ್ ಮಾಡಲು ಪೊಲೀಸರು ಹರಸಾಹಸ ಪಟ್ಟಿದ್ದು ಆ ವೇಳೆ ಇವರ ಮೇಲೆ ಅಟ್ಯಾಕ್ ಮಾಡಿದಾಗ ಪೊಲೀಸರು ಎನ್‌ಕೌಂಟರ್ ಮಾಡಿದ್ದಾರೆ. ಹೇಯಕೃತ್ಯ ಎಸಗಿದ ಆರೋಪಿ ಪೊಲೀಸರ ಮೇಲೂ ಹಲ್ಲೆಗೆ ಯತ್ನಿಸಿದ್ದಾನೆ. ಆಗ ಆತ್ಮರಕ್ಷಣೆಗಾಗಿ ಮಹಿಳಾ ಪಿಎಸ್‌ಐ ಎನ್‌ಕೌಂಟರ್ ಮಾಡಿರುವುದು ಶ್ಲಾಘನೀಯ ಎಂದು ಶಾಸಕ ಪ್ರಸಾದ ಅಬ್ಬಯ್ಯ ತಿಳಿಸಿದ್ದಾರೆ.

**ಠಾಣೆಯ ಮುಂಭಾಗ ದಿನವಿಡೀ ಪ್ರತಿಭಟನೆ**

ಅಶೋಕನಗರ ಪೊಲೀಸ್ ಠಾಣೆ ಎದುರು ವಿಜಯ ನಗರ, ಆದರ್ಶನಗರ, ಸಂತೋಷನಗರ, ಮಾಧವನಗರ, ಚಾಮುಂಡೇಶ್ವರಿ ಕಾಲೋನಿ, ದೇವಾಂಗಪೇಟೆ ಹಾಗೂ ಸುತ್ತಮುತ್ತಲಿನ ನಿವಾಸಿಗಳು ಭಾನುವಾರ ಪ್ರತಿಭಟನೆ ನಡೆಸಿದರು. ಠಾಣೆ ಎದುರು ಸ್ವಯಂ ಪ್ರೇರಿತವಾಗಿ ಸ್ಥಳೀಯ ನಿವಾಸಿಗಳು ಪಾಲಿಕೆ ಸದಸ್ಯ ಸಂತೋಷ ಚವ್ಹಾಣ, ಬಿಜೆಪಿ ಮುಖಂಡರಾದ ಸಿದ್ದು ಮೊಗಲಿಶೆಟ್ಟರ, ಈಶ್ವರಗೌಡ ಪಾಟೀಲ ನೇತೃತ್ವದಲ್ಲಿ ಪ್ರತಿಭಟನೆ ನಡೆಸಿ ಪೊಲೀಸರ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಅಲ್ಲದೇ, ಆರೋಪಿ ವಿರುದ್ಧ ಪ್ರಕರಣ ದಾಖಲಿಸಿ ಕಾನೂನು ಪ್ರಕ್ರಿಯೆ ನಡೆಸುವ ಬದಲು ನಮ್ಮೆದುರಿಗೇ ಗುಂಡು ಹೊಡೆದು ಕೊಲ್ಲಬೇಕು. ನಿಮ್ಮಿಂದ ಆಗದಿದ್ದರೆ, ಅವನನ್ನು ನಮಗೆ ಒಪ್ಪಿಸಿ, ನಾವು ತಕ್ಕ ಶಿಕ್ಷೆ ನೀಡುತ್ತೇವೆ ಎಂದು ಪಟ್ಟು ಹಿಡಿದರು. ಇದಕ್ಕೂ ಪೂರ್ವದಲ್ಲಿ ಪೊಲೀಸ್ ಕಮಿಷನರ್ ಹಾಗೂ ಪೊಲೀಸ್ ಅಧಿಕಾರಿಗಳು ಪ್ರತಿಭಟನಾಕಾರರ ಮನವೊಲಿಸುವ ಪ್ರಯತ್ನಗಳು ವಿಫಲವಾದವು.

**ಪಿಎಸ್‌ಐ ಅನ್ನಪೂರ್ಣಗೆ ಮೆಚ್ಚುಗೆಯ ಮಹಾಪೂರ; ಯಾರೀ ಲೇಡಿ ಸಿಂಗಂ?**

ಹುಬ್ಬಳ್ಳಿಯ ಬಾಲಕಿಯ ಹತ್ಯೆ ಆರೋಪಿಯನ್ನು ಎನ್‌ಕೌಂಟರ್ ಪ್ರಕರಣ ಸದ್ಯ ದೇಶಾದ್ಯಂತ ಸಾಕಷ್ಟು ಚರ್ಚೆ ಆಗುತ್ತಿದೆ. ಗಟ್ಟಿಗಿತ್ತಿ ಪಿಎಸ್‌ಐ ಅನ್ನಪೂರ್ಣ ಮಾಡಿದ ಸಾಹಸಕ್ಕೆ ಎಲ್ಲೆಡೆ ಅಭಿನಂದನೆಗಳ ಮಹಾಪೂರವೇ ಹರಿದು ಬರುತ್ತಿದೆ. ಆರೋಪಿಯ ಕತೆ ಮುಗಿಸಿದ ಈ ಲೇಡಿ ಪಿಎಸ್‌ಐ ಯಾರು ಎಂದು ಜನರು ತಲೆಕೆಡಿಸಿಕೊಂಡಿದ್ದಾರೆ. ಅದಕ್ಕೆ ಉತ್ತರ ಇಲ್ಲಿದೆ.



ಪಿಎಸ್‌ಐ ಅನ್ನಪೂರ್ಣ

ಏನೂ ಅರಿಯದ 5 ವರ್ಷದ ಪುಟ್ಟ ಕಂದನನ್ನು ಅತ್ಯಾಚಾರ ಮಾಡಿ ಕೊಲೆ ಪ್ರಕರಣ ಜನರನ್ನು ಸಾಕಷ್ಟು ಘಾಸಿಗೊಳಿಸಿತ್ತು. ಹುಬ್ಬಳ್ಳಿ ಜನರು ಆರೋಪಿ ರಿತೇಶ್ ನನ್ನು ತಮ್ಮ ಕೈಗೊಪ್ಪಿಸುವಂತೆ ಒತ್ತಾಯಿಸಿದ್ದರು. ಬಳಿಕ ಸ್ಥಳ ಪರಿಶೀಲನೆ ವೇಳೆ ಪೊಲೀಸರ ಮೇಲೆಯೇ ದಾಳಿಗೆ ಮುಂದಾದ ಆರೋಪಿಗೆ ಪಿಎಸ್‌ಐ ಅನ್ನಪೂರ್ಣ ಗುಂಡು ಹಾರಿಸಿದ್ದರು. ಯಾವಾಗ ಅನ್ನಪೂರ್ಣ ಅಂತಿಮ ತೀರ್ಪು ನೀಡಿದರೋ ಜನರು ಬಹುಪರಾಕ್ ಕೂಗಿದರು. ಹಾಗಾದರೆ ಈ ಲೇಡಿ ಸಿಂಗಂ ಅನ್ನಪೂರ್ಣ ಯಾರು ಗೊತ್ತಾ?



ಕಮೀಷನರ್ ಎನ್. ಶಶಿಕುಮಾರ್

ಬಾಲಕಿಯ ಹತ್ಯೆ ಆರೋಪಿಯ ಎನ್ಕೌಂಟರ್ ಪ್ರಕರಣ ಇದೀಗ ದೇಶಾದ್ಯಂತ ಚರ್ಚೆಯಾಗುತ್ತಿದೆ. ಮಹಿಳಾ ಪಿಎಸ್‌ಐ, ಲೇಡಿ ಸಿಂಗಂ ಅನ್ನಪೂರ್ಣಗೆ ಮೆಚ್ಚುಗೆಯ ಮಹಾಪೂರವೇ ಹರಿದುಬರುತ್ತಿದೆ.

ಅನ್ನಪೂರ್ಣ ಆರ್.ಮುಕ್ಕಣ್ಣವರ ಎಂಎಸ್ಸಿ ಪದವೀಧರೆ. 2018ನೇ ಬ್ಯಾಚ್‌ನ ಪೊಲೀಸ್ ಅಧಿಕಾರಿ. ಹುಟ್ಟಿದ್ದು ಬೆಳಗಾವಿ ಜಿಲ್ಲೆ ಗೋಕಾಕ್ ತಾಲೂಕಿನ ಗುಜನಟ್ಟಿ ಗ್ರಾಮದಲ್ಲಿ.

ಧಾರವಾಡ ಕೃಷಿ ವಿಶ್ವವಿದ್ಯಾಲಯದಲ್ಲಿ ಬಿಎಸ್ಸಿ ಪದವಿ ಪಡೆದ ಅನ್ನಪೂರ್ಣ, ಬೆಂಗಳೂರಿನ ಜಿಕೆವಿಕೆಯಲ್ಲಿ ಎಂಎಸ್ಸಿ ಪದವಿ ಪಡೆದುಕೊಂಡರು. ಬಳಿಕ ಎಂಎಸ್ಸಿಯಲ್ಲಿ ಚಿನ್ನದ ಪದಕ ಮುಡಿಗೇರಿಸಿಕೊಂಡಿದರು. ಬಾಲ್ಯದಲ್ಲೇ ತಂದೆಯನ್ನ ಕಳೆದುಕೊಂಡ ಅನ್ನಪೂರ್ಣ, ತಾಯಿ ನೆರಳಿನಲ್ಲಿ ಬೆಳೆದು ಪಿಎಸ್‌ಐ ಆಗಿದ್ದಾರೆ. ಸದ್ಯ ಅಶೋಕ ನಗರ ಪೊಲೀಸ್ ಠಾಣೆಯಲ್ಲಿ ಪಿಎಸ್‌ಐ ಆಗಿ ಸೇವೆ ಸಲ್ಲಿಸುತ್ತಿದ್ದಾರೆ. ಅಷ್ಟೇ ಅಲ್ಲದೆ ದೇಶದ ಜನರ ಮನ ಗೆದ್ದಿರುವ ಅನ್ನಪೂರ್ಣ ಅವರಿಗೆ ಅಭಿನಂದನೆಗಳ ಸುರಿಮಳೆ ಶುರುವಾಗಿದೆ. ಘಟನೆಯಲ್ಲಿ ಗಾಯಗೊಂಡಿರುವ ಪಿಎಸ್‌ಐ ಅನ್ನಪೂರ್ಣ ಸದ್ಯ ಹುಬ್ಬಳ್ಳಿ ಕಿಮ್ಸ್‌ನಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

**ಪಿಎಸ್‌ಐಗೆ ಸಚಿವ ಸಂತೋಷ್ ಲಾಡ್ ಸೆಲ್ಯೂಟ್**

ಹಂತಕನಿಗೆ ಗುಂಡು ಹೊಡೆದ ಪಿಎಸ್‌ಐಗೆ ಸಚಿವ ಸಂತೋಷ್ ಲಾಡ್ ಸೆಲ್ಯೂಟ್ ಹೊಡೆದು ಮೆಚ್ಚುಗೆ ವ್ಯಕ್ತಪಡಿಸಿದರು. ಇಂದು ಹುಬ್ಬಳ್ಳಿ ಕಿಮ್ಸ್ ಆಸ್ಪತ್ರೆಗೆ ಭೇಟಿ ನೀಡಿದ್ದ ಸಚಿವ ಲಾಡ್, ಫೈರಿಂಗ್‌ನಲ್ಲಿ ಗಾಯಗೊಂಡ ಪೊಲೀಸ್ ಸಿಬ್ಬಂದಿ ಆರೋಗ್ಯ ವಿಚಾರಿಸಿದರು. ಈ ಸಮಯದಲ್ಲಿ ಗುಂಡೇಟು ಹೊಡೆದ ಹುಬ್ಬಳ್ಳಿಯ ಅಶೋಕನಗರ ಠಾಣೆ ಪಿಎಸ್‌ಐ ಅನ್ನಪೂರ್ಣಗೆ ಸೆಲ್ಯೂಟ್ ಹೊಡೆದರು. ಶೇಕ್ ಹ್ಯಾಂಡ್ ಮಾಡಿ ಗೆಟ್‌ವೆಲ್ ಸೂನ್ ಎಂದರು.





**ಪಂಚಭೂತಗಳಲ್ಲಿ ಕರಗಿದ ಐದರ ಪುಟ್ಟ ಹಸುಗೂಸು!**

ಇತ್ತ ಆರೋಪಿಯ ಕ್ರೌರ್ಯಕ್ಕೆ ಬಲಿಯಾದ ಬಾಲಕಿಯ ಅಂತ್ಯಕ್ರಿಯೆ ನಡೆಯಿತು. ಪುಟಾಣಿಯ ಮೃತದೇಹ ನೋಡ್ತಿದ್ದಂತೆ ಸಂಬಂಧಿಕರ ಆಕ್ರಂದನ ಮುಗಿಲು ಮುಟ್ಟಿತ್ತು. ಹೆತ್ತವರ ನೋವು ಹೇಳತೀರದಾಗಿತ್ತು. ಹುಬ್ಬಳ್ಳಿ ನಗರದ ದೇವಾಂಗಪೇಟ್‌ನ ರುದ್ರಭೂಮಿಯಲ್ಲಿ ಕಂದಮ್ಮನ ಅಂತ್ಯಕ್ರಿಯೆ ನೆರವೇರಿಸಲಾಗಿದೆ. ಸರ್ಕಾರ ಮೃತ ಬಾಲಕಿಯ ಕುಟುಂಬಕ್ಕೆ 10 ಲಕ್ಷ ರೂ ಪರಿಹಾರ ಘೋಷಣೆ ಮಾಡಿದೆ.

# ರೌಡಿ ನೇಪಾಳಿ ಮಂಜನ ಕಗ್ಗೊಲೆ!



ಕೊಲೆಯಾದ ನೇಪಾಳಿ ಮಂಜ

**ಇಸವಿ 2016ರಲ್ಲಿ ವೀರಸಂದ್ರದ ಡಾ. ಬಿ.ಆರ್. ಅಂಬೇಡ್ಕರ್ ಸಂಘದ ಅಧ್ಯಕ್ಷ ಮುನಿರಾಜುನನ್ನು ಕೊಲೆ ಮಾಡಿ, 2017ರಲ್ಲಿ ಈ ಕೊಲೆಗೆ ಸಾಕ್ಷಿಯಾಗಿದ್ದ ಅವನ ಸೋದರಮಾವ ಶ್ರೀನಿವಾಸನನ್ನು ಕೊಲೆಗೈದು ಕುಖ್ಯಾತಿಗಳಿಸಿದ್ದ ರೌಡಿಶೀಟರ್ ನೇಪಾಳಿ ಮಂಜ ಎಲೆಕ್ಟ್ರಾನಿಕ್ ಸಿಟಿ, ವೀರಸಂದ್ರ, ಹೆಬ್ಬಗೋಡಿ ಭಾಗದಲ್ಲಿ ಮಿಂಡ್ಲ ಮೆರೆಯುತ್ತಿದ್ದ! ಮಾಡಿದ ಕರ್ಮ ಬಿಡಬೇಕಲ್ಲ, ಆಸಾಮಿ ಮೊನ್ನೆ ಯುಗಾದಿ ಹಬ್ಬದ ದಿವಸ ಹೆಬ್ಬಗೋಡಿ ಗೊಲ್ಲಹಳ್ಳಿ ಕಡೆ ಇಸ್ಪೀಟ್ ಆಡುವ ಹೈಕಳ ಬಳಿ ಹಫ್ತಾ ವಸೂಲಿ ಮಾಡಲು ಹೋಗಿ ಕಗ್ಗೊಲೆಯಾಗಿದ್ದಾನೆ!! ಮಂಜನ ಕತೆ ಮುಗಿಸಿ ಊರು ಬಿಟ್ಟಿದ್ದ ಹಂತಕರನ್ನು ಹೆಬ್ಬಗೋಡಿ ಪೊಲೀಸ್ ಟೀಮ್ ವಾರೊಪ್ಪತ್ತಿನೊಳಗೆ ಪತ್ತೆಹಚ್ಚಿ ಬಂಧಿಸಿ ನ್ಯಾಯಾಂಗ ಬಂಧನಕ್ಕೊಪ್ಪಿಸಿದ್ದಾರೆ!!!**



ರೌಡಿ ಶೀಟರ್ ಜಗದೀಶ್ ಅಲಿಯಾಸ್ ಜಗ್ಗ

ಬೆಂಗಳೂರು ಹೊರವಲಯದ ಹೊಸ ರೋಡ್, ಕೋನಪ್ಪನ ಅಗ್ರಹಾರ, ಎಲೆಕ್ಟ್ರಾನಿಕ್ ಸಿಟಿ, ವೀರಸಂದ್ರ, ಹೆಬ್ಬಗೋಡಿ, ಗೊಲ್ಲಹಳ್ಳಿ, ಬೊಮ್ಮಸಂದ್ರ, ಜಿಗಣಿ, ಅತ್ತಿಬೆಲೆ ಹಾಗೂ ಆನೇಕಲ್ ಭಾಗದಲ್ಲಿ ಕಳೆದೊಂದು ದಶಕದಿಂದ ರೌಡಿಸಂ ಮಾಡಿಕೊಂಡು ಮಿಂಡ್ಲ ಮೆರೆಯುತ್ತಿದ್ದ ರೌಡಿ ಶೀಟರ್ ಮಂಜುನಾಥ ಅಲಿಯಾಸ್ ನೇಪಾಳಿ ಮಂಜ ಮಟಾಶ್ ಆಗಿದ್ದಾನೆ.

### ಅದೂ ಯಾವತ್ತು?

ನೂತನ ಸಂವತ್ಸರ ಆರಂಭದ ದಿನವೇ... ಅಂದ್ರೆ ಯುಗಾದಿ ಹಬ್ಬದ ದಿವಸ! ಪಾತಕಿ ಮಂಜನ ಅಂತ್ಯದಿಂದಾಗಿ ಈ ಭಾಗದ ಒಂದಷ್ಟು ಕುಟುಂಬಗಳು ಈತನ ಅಂತ್ಯಕ್ಕಾಗಿಯೇ ದೇವರು ಡಿಣ್ಣರಿಗೆ ಕಟ್ಟಿಕೊಂಡಿದ್ದ ಹರಕೆಯನ್ನು ಪೂರೈಸಿ 'ಯುಗಾದಿ' ಹಬ್ಬ ಆಚರಿಸಿವೆ.

ಯುಗಾದಿ ಅಮಾವಾಸ್ಯೆ ಅಂದ್ರೆ ಸುಮ್ನೇನಾ? ಈ ಭಾರಿ ಭರ್ಜರಿ ಬಲಿಯೇ ಬಿದ್ದು ಹೋಗಿದೆ ಅಂದುಕೊಂಡು ವೀರಸಂದ್ರ ಹಾಗೂ ಸುತ್ತಮುತ್ತಲಿನ ಗ್ರಾಮಗಳ ಜನ ವಿಧವಿಧವಾಗಿ ಮಾತಾಡಿಕೊಂಡು ನೇಪಾಳಿ ಮಂಜನ ಪ್ಲಸ್ಸು ಮೈನಸ್ಸುಗಳ ಬಗ್ಗೆ ಚರ್ಚಿಸುತ್ತಿದ್ದಾರೆ.

ಪಕ್ಕಾ ಪೊರ್ಕಿಯಾಗಿದ್ದ ಮಂಜನ ಬಳಿ ಪ್ಲಸ್ ಪಾಯಿಂಟ್ಸ್ ಸಿಗೋದು ಕಮ್ಮಿ ಬಿಡ್ರಿ. ಇದ್ದಿದ್ದೆಲ್ಲಾ ಮೈನಸ್ಸೇ. ಹಾಗೆ ನೋಡಿದರೆ, ಇವನೇನು ಹೆಸರಾಂತ ರೌಡಿ ಕುಟುಂಬದಿಂದ ಬಂದವನಲ್ಲ. ಇವನ ತಂದೆ ಈಶ್ವರಪ್ಪ ದೇವರಂತ ಮನುಷ್ಯ ಮತ್ತು ಸರ್ಕಾರಿ ನೌಕರ. ತಾಯಿ ರತ್ನಮ್ಮ ಕೂಡ ಸದ್ಗೃಹಿಣಿಯೇ. ಅದೇನೋ ಅಂತಾರಲ್ಲ, ಒಳ್ಳೆಯವರ ಹೊಟ್ಟೆಯಲ್ಲಿ ಒಳ್ಳೆ ಮಕ್ಕಳು ಹುಟ್ಟೋದಿಲ್ಲ ಅಂತ.... ಹಾಗಾಯ್ತು ನೇಪಾಳಿ ಕತೆ. ಪಾಪಿಷ್ಟ, ಒಳ್ಳೆ ತಂದೆ ತಾಯಿಯ ಹೊಟ್ಟೆಯಲ್ಲಿ ಹುಟ್ಟಿದ್ದರೂ ಹೆತ್ತವರ ಮಾತು ಕೇಳದೆ, ಹಳ್ಳಿ ಬಿಟ್ಟು ಬೆಂಗಳೂರು ಸಿಟಿ ಸೇರಿ ಯಕ್ಕುಟ್ಟಿ ಹೋದ. ಇವನ ಸ್ವಂತ ಊರು ಕುಣಿಗಲ್ ತಾಲೂಕಿನ ಯಡಿಯೂರು. ಇವನ ಸೋದರಿ ಹೊಸರೋಡ್ ಕಡೆಗೆ ವಿವಾಹವಾಗಿದ್ದಳು.ಅಕ್ಕನ ಬಳಿ ಹೋಗ್ತೇನೆ, ದುಡಿತೇನೆ ಅಂತೇಳಿ ಬೆಂಗಳೂರಿಗೆ ಬಂದವನು, ಅಕ್ಕನ ಮನೆಯಲ್ಲಿದ್ದುಕೊಂಡೆ ಅಕ್ಕಪಕ್ಕದ ಏರಿಯಾಗಳಲ್ಲಿ ಸುತ್ತಾಡುತ್ತಾ, ಪುಂಡರ ಸಂಗ ಮಾಡಿ ಹಾಳಾಗಿ ಹೋಗಿದ್ದ. ಹೊಸರೋಡ್‌ಗೆ ಸಮೀಪದಲ್ಲೇ ವಿಶ್ವವಿಖ್ಯಾತ ಎಲೆಕ್ಟ್ರಾನಿಕ್ ಸಿಟಿ ಇದೆಯಲ್ಲ, ಅದರ ಬೆನ್ನಲ್ಲಿಯೇ ವೀರಸಂದ್ರ, ಗ್ರಾಮವಿದೆ. ಅಲ್ಲಿನ ಇಂದಿರಾ ಕಾಲೋನಿ ಬಲೇ ಫೇಮಸ್. ಅಲ್ಲಿ ಆಂಧ್ರ, ತಮಿಳುನಾಡು, ಬಿಹಾರದ ಜನರೇ ತುಂಬಿ ತುಳುಕುತ್ತಾರೆ. ಅಂಥ ಕಾಲೋನಿ ಸೇರಿಕೊಂಡು ಪುಂಡ ಪೋಕರಿಗಳ ಗ್ಯಾಂಗ್ ಕಟ್ಟಿಕೊಂಡು ಗಾರ್ಮೆಂಟ್ಸ್ ನೌಕರರ ರಾಬರಿ ಮಾಡಿಕೊಂಡು ಪಕ್ಕಾ ಕಳ್ಳನ ಹಾಗೆ ಚಿಗಿತುಬಿಟ್ಟ ಈ ನೇಪಾಳಿ ಮಂಜ. ಕಳ್ಳತನ ಮಾತ್ರವಲ್ಲದೆ, ಗಾರ್ಮೆಂಟ್ಸ್‌ಗೆ ಕಾಲು ದಾರಿಯಲ್ಲಿ ನಡೆದುಕೊಂಡು ಬರುವ ಹೆಂಗಳೆಯರಿಗೆ ಲೈಂಗಿಕ ಕಿರುಕುಳ ನೀಡುತ್ತಿದ್ದ ಎಂಬುದು ಈ ಭಾಗದ ಜನರ ಬಾಯಿಂದಲೇ ಕೇಳಿ ಬಂದಿತ್ತು.



ನೇಪಾಳಿ ಮಂಜನ ಡೆಡ್‌ಬಾಡಿ

ಇಂಥ ಕಳ್ಳ ಕಾಮುಕ ನೇಪಾಳಿ ಮಂಜನನ್ನು ವೀರಸಂದ್ರ ಗ್ರಾಮದಿಂದಲೇ ಒದ್ದೋಡಿಸಬೇಕು ಎಂದು ಗ್ರಾಮದಲ್ಲಿ ಚರ್ಚೆ ನಡೆದಿತ್ತು. ಹೀಗಿರುವಾಗ, ವೀರಸಂದ್ರ ಗ್ರಾಮದ ಡಾ. ಬಿ.ಆರ್. ಅಂಬೇಡ್ಕರ್‌ಸಂಘದ ಅಧ್ಯಕ್ಷ ಮುನಿರಾಜು ಅಲಿಯಾಸವ ಮುನಿಯ ಒಮ್ಮೆ ನೇಪಾಳಿ ಮಂಜನನ್ನು ತಡವಿಕೊಂಡು ಗುದ್ದಿ ಗೂದೆ ಕಡೆಸಿ ನೆಟ್ಟಗೆ ಬದುಕುವಂತೆ ಎಚ್ಚರಿಸಿದ್ದ.



ಘಟನಾ ಸ್ಥಳದಲ್ಲಿ ಮಹಜರ್

### ಅನ್ನ ಬಡಿಸುವಾಗಲೇ ಕೊಂದುಬಿಟ್ಟ!

ಅದು 2016 ಏಪ್ರಿಲ್ ಅಥವಾ ಮೇ ತಿಂಗಳು ಇರಬಹುದು. ಮುನಿರಾಜು ತನ್ನ ಮನೆ ದೇವರಿಗೆ ಹರಕೆ ಕಟ್ಟಿಕೊಂಡು ವೀರಸಂದ್ರದ ಕೂಗಳತೆ ದೂರದಲ್ಲಿವ ಗೊಲ್ಲಹಳ್ಳಿ ಹೊಲದಲ್ಲಿ ಮದ್ದೂರಮ್ಮನೋ ಮಹೇಶ್ವರಮ್ಮನೋ ಗುಡಿಯ ಬಳಿ ಗ್ರಾಮಸ್ಥರಿಗೆ ಮರಿ ಬಾಡೂಟ ಹಾಕಿಸುತ್ತಿದ್ದ. ಬಕೆಟ್ ಹಾಗೂ ಮಂಕರಿಗಳಲ್ಲಿ ಅನ್ನ ಸಾಂಬಾರ್ ತುಂಬಿಸಿಕೊಂಡು ಊಟಕ್ಕೆ ಕುಳಿತಿದ್ದ ಪಂಕ್ತಿ ಬಳಿಗೆ ಓಡಾಡುತ್ತಿದ್ದ ಸಂದರ್ಭದಲ್ಲಿಯೇ ಆಸಾಮಿ ನೇಪಾಳಿ ಮಂಜ ತನ್ನ ಪುಢಾರಿ ಗ್ಯಾಂಗ್ ಕಟ್ಟಿಕೊಂಡು ಅಟ್ಯಾಕ್ ಮಾಡಿ ಅನ್ಯಾಯವಾಗಿ ಮುನಿರಾಜನ ಕತೆ ಮುಗಿಸಿಬಿಟ್ಟ. ಈ ಪ್ರಕರಣ ಹೆಬ್ಬಗೋಡಿ ಪೊಲೀಸ್ ಠಾಣೆಯಲ್ಲಿ ದಾಖಲಾಗಿ ಅಲ್ಲಿನ ಪೊಲೀಸರು ಮಂಜ ಮತ್ತವನ ಟೀಮ್ ಅನ್ನು ಬಂಧಿಸಿ ಜೈಲಿಗೆ ರವಾನಿಸಿತ್ತು. ಈ ಕೇಸ್‌ನಲ್ಲಿ ಒಂದು ವರ್ಷ ಜೈಲ್ ಒಳಗಿದ್ದ ರೌಡಿ ಶೀಟರ್ ನೇಪಾಳಿ ಮಂಜ, 2017ರ ಫೆಬ್ರವರಯಲ್ಲಿ ಬೇಲ್ ಮೇಲೆ ಹೊರಬಂದಿದ್ದ. ಹಾಗೆ ಜಾಮೀನಿನ ಮೇಲೆ ಜಲಾಚೆ ಬಂದವನೇ ಎರಡೇ ದಿನದಲ್ಲಿ ಮುನಿರಾಜನ ಕೊಲೆಗೆ ಪ್ರಮುಖ ಸಾಕ್ಷಿಯಾಗಿದ್ದ ಅವನ ಸೋದರ ಮಾವ ಶ್ರೀನಿವಾಸ ನನ್ನು ಜಾಕಿ ಗಾರ್ಮೆಂಟ್ಸ್ ಮುಂದೆ ಭೀಕರವಾಗಿ ಕೊಂದುಬಿಟ್ಟ!



ಎಸ್ಪಿ ಸಿ.ಕೆ. ಬಾಬಾ



ಅ|| ಎಸ್ಪಿ ನಾಗೇಶ್‌ಕುಮಾರ್


ಪಾಪ, ಶ್ರೀನಿವಾಸನಿಗೆ ಮೂರೋ ನಾಲ್ಕೋ ಹೆಣ್ಣು ಮಕ್ಕಳು. ಅವೆಲ್ಲ ಚಿಕ್ಕ ಚಿಕ್ಕ ಮಕ್ಕಳು. ಅಪ್ಪನ ಶವದ ಮುಂದೆ ಬಿದ್ದು ಒದ್ದಾಡುತ್ತಿದ್ದ ಆ ಪುಟಾಣಿ ಕಂದಮ್ಮಗಳ ಸಂಕಟವನ್ನು ನೋಡಿ ಕರುಳು ಕಿತ್ತು ಬರುತ್ತಿತ್ತು.

ಈ ಕೊಲೆ ಕೇಸ್‌ನಲ್ಲಿ ನೇಪಾಳಿ ಮತ್ತವನ ಕೊಲೆಗಡುಕ ಟೀಮ್ ಮತ್ತೆ ಜೈಲು ಪಾಲಾಗಿದ್ದರು. ಗಮನಿಯ ಸಂಗತಿ ಏನೆಂದರೆ, ನೇಪಾಳಿ ಮಂಜನಿಂದ ಕೊಲೆಯಾದ ಶ್ರೀನಿವಾಸ ಹೆಬ್ಬಗೋಡಿ ನಗರ ಸಭೆ ವೀರಸಂದ್ರ ವಾರ್ಡ್‌ನ ಕೌನ್ಸಿಲರ್ ಮಂಜುನಾಥ್ ಅವರ ಸೋದರ! ಈ ಮೊದಲು ಕೊಲೆಯಾದ ಮುನಿಯ ಸ್ವಂತ ಅಕ್ಕನ ಮಗ! ಈ ಎರಡೂ ಕೊಲೆಗಳಿಗೆ ಸಾಕ್ಷಿಯಾಗಿ ಉಳಿದಿದ್ದ ಮಂಜುನಾಥ್ ಅವರಿಗೆ ಪೊಲೀಸ್ ಪ್ರೊಟೆಕ್ಷನ್ ಕೊಡಲಾಗಿತ್ತು.

ಹೀಗೆ, ಎರಡೆರಡು ಕೊಲೆ ಮಾಡಿ ಆ ಪ್ರದೇಶದಲ್ಲಿ ಕುಖ್ಯಾತಿಗಳಿಸಿದ್ದ ನೇಪಾಳಿ ಮಂಜ,ಎರಡನೇ ಭಾರಿ ಜೈಲು ಸೇರಿ ಮೂರ್ನಾಲ್ಕು ವರ್ಷ ಮುದ್ದೆ ಮುರಿದು ನಂತರ ಬೇಲ್ ಮಾಡಿಸಿಕೊಂಡು ಮತ್ತೆ ಜೈಲಾಚೆ ಬಂದು ಹವಾ ಮೇಂಟೈನ್ ಮಾಡಿಕೊಂಡು ಮೆರೆಯುತ್ತಿದ್ದ. ಹೆಬ್ಬಗೋಡಿ, ಎಲೆಕ್ಟ್ರಾನಿಕ್ ಸಿಟಿ, ಸೂರ್ಯಸಿಟಿ, ಅತ್ತಿಬೆಲೆ, ಸರ್ಜಾಪುರ, ಆನೇಕಲ್ ಮುಂತಾದ ಠಾಣೆಗಳಲ್ಲಿ ಈತನ ವಿರುದ್ಧ ಸುಮಾರು ಹನ್ನೆರಡು ಪ್ರಕರಣ ದಾಖಲಾಗಿದ್ದು ಕೋರ್ಟ್ ನಲ್ಲಿ ವಿಚಾರಣೆ ನಡೆಯುತ್ತಿತ್ತು. ಹೆಬ್ಬಗೋಡಿ ಪೊಲೀಸರು ಈತನ ವಿರುದ್ಧ ಎರಡೆರಡು ಸಲ ಗೂಂಡಾ ಆಕ್ಟ್ ಹಾಕಿ ಜೈಲಿಗೆ ದಬ್ಬಿದ್ದರು. ಆದರೂ ಈತ ಸುಧಾರಿಸದೆ ಇದ್ದಾಗ ಆನೇಕಲ್ ತಾಲೂಕಿನಿಂದಲೇ ಗಡಿಪಾರ್ ಮಾಡಿದ್ದರು!



ಡಿವೈಎಸ್ಪಿ ಬಿ.ಎಸ್. ಮೋಹನ್‌ಕುಮಾರ್




ಸಿಪಿಐ ಜಿ. ಸೋಮಶೇಖರ್

### ದೊಡ್ಡ ತೊಗೂರು ಗುಂಡನ ಕೊಲೆ!

ಆದರೆ ಇಷ್ಟೊತ್ತಿಗಾಗಲೇ ನೇಪಾಳಿ ಮಂಜ

☞ 4



ಆರೋಪಿಗಳಾದ ಮಹೇಶ್, ಬುಲೆಟ್ ಬಾಬು, ದಿನೇಶ್, ಹೆಲ್ಮೆಟ್ ಮಂಜ, ರವಿ, ಮಂಜುನಾಥ್ ಹಾಗೂ ನಂದನ್

3 ☜

ದೈಹಿಕವಾಗಿ ಮತ್ತು ಆರ್ಥಿಕವಾಗಿ ಸಾಕಷ್ಟು ಬೆಳೆದು ಬಿಟ್ಟಿದ್ದ. ಹುಡುಗರ ಗುಂಪು ಜತೆಗಿತ್ತು. ಹಫ್ತಾ ವಸೂಲಿ ಆಗುತ್ತಿತ್ತು. ಕೆಲ ಪಟ್ಟ ಭದ್ರ ಹಿತಾಸಕ್ತಿಗಳು ಇವನಿಂದ ರಿಯಲ್ ಎಸ್ಟೇಟ್ ಲಫ್ಡಾ ಮಾಡಿಸುತ್ತಿದ್ದರು. ಕೆಲ ರಾಜಕಾರಣಿಗಳು ತಮ್ಮ ಕೆಲಸಗಳಿಗೆ ಬಳಸಿಕೊಳ್ಳುತ್ತಿದ್ದರು. ಇವರೆಲ್ಲರ ಆಶೀರ್ವಾದದಿಂದ ಚೆನ್ನಾಗಿ ಕೊಬ್ಬಿದ್ದ ನೇಪಾಳಿ ಮಂಜ ತನ್ನ ಗ್ಯಾಂಗ್ ಕಟ್ಟಿಕೊಂಡು ಬಿಂದಾಸ್ ಆಗಿ ಸುತ್ತಾಡುತ್ತಿದ್ದ. ಆದರೆ, ಹೆಬ್ಬಗೋಡಿ ಪೊಲೀಸ್ ಮಾತ್ರ ಇವನ ಕುಂಡೆಗೆ ಬಿಸಿನೀರು ಬಗ್ಗಿಸಿ ಲಾಟಿ ಆಡಿಸಿ ಏರಿಯಾ ಒಳಗೆ ಕಾಲಿಡದಂತೆ ಮಾಡಿದ್ದರು. ಆದಾಗ್ಯೂ ಈ ಗೋಸುಂಬೆ ಮಂಜ ಪ್ಲಾಟ್ ಒಂದನ್ನು ಖರೀದಿಸಿ ಗುಟ್ಟಾಗಿ ನೆಲೆಸಿದ್ದ ಎನ್ನುತ್ತವೆ ಕೆಲ ಮೂಲಗಳು!

ಈ ನಡುವೆ ಮಂಜ ಎಸಗಿದ ಇನ್ನೊಂದು ಪ್ರಮಾದದ ಬಗ್ಗೆ ಹೇಳಬೇಕು. ಶ್ರೀನಿವಾಸ್ ಕೊಲೆ ಕೇಸ್ ನಲ್ಲಿ ಜೈಲಿಗೆ ಹೋಗಿದ್ದು ಜಾಮೀನಿನ ಮೇಲೆ ಆಚೆ ಬಂದು ಹವಾ



ಯುಗಾದಿ ಮುನ್ನ ನಡೆದಿದ್ದ ರೌಡಿ ಪೆರೇಡ್‌ನಲ್ಲಿ

ಮೇಂಟೈನ್ ಮಾಡಿಕೊಂಡು ಓಡಾಡುತ್ತಿದ್ದ ರೌಡಿ ನೇಪಾಳಿ ಮಂಜ, ಈಗ್ಗೆ ಎರಡು ವರ್ಷದ ಹಿಂದೆ ದೊಡ್ಡ ತೋಗೂರಿನ ಬಾರ್ ಒಂದರಲ್ಲಿ ಎಣ್ಣೆ ಹೊಡೆದು ಲೋಕಲ್ ಹುಡುಗರ ಜೊತೆ ಕಿರಿಕ್ ಮಾಡಿಕೊಂಡಿದ್ದ ಘಟನೆ ನಡೆದಿತ್ತು. ಈ ಭಾಗದಲ್ಲಿ ಯಾವುದೋ ಹುಡುಗಿಗೋ ಆಂಟಿಗೋ ಡವ್ ಹೊಡೆಯಲು ಬರುತ್ತಾನೆ ಎಂಬ ವದಂತಿಯು ಇದ್ದು, ಲೋಕಲ್ ಹುಡುಗರು ನೇಪಾಳಿ ಕುಂಡಿಗೆ ಗೂಟ ಜಡಿಯಲು ಹೊಂಚು ಹಾಕಿ ಕಾದಿದ್ದರು!

ಅವತ್ತು ಆ ಬಾರ್ ಒಳಗೆ ದೊಡ್ಡ ತೋಗೂರಿನ ಗುಂಡ ಮತ್ತಿತರೇ ಹುಡುಗರು ಕುಳಿತಿದ್ದು, ಅವಾಜ್ ಹಾಕುತ್ತಿದ್ದ ಮಂಜನಿಗೆ ಚೆನ್ನಾಗಿ ಭಾರಿಸಿದ್ದು, ಆತ ಪ್ರಜ್ಞೆ ತಪ್ಪಿ ಬಿದ್ದು ಕೊಂಡಿದ್ದು, ಅವನ ಸಹಚರರು ಎತ್ತಿಕೊಂಡು ಹೋಗಿ ಯಾವುದೋ ಆಸ್ಪತ್ರೆಗೆ ಸೇರಿಸಿ ಡ್ರಿಪ್ಸ್ ಹಾಕಿಸಿದ್ದರು. ಈ ಘಟನೆಯಿಂದ ಮಾನ ಮರ್ಯಾದೆ ಕಳೆದುಕೊಂಡು ನಗೆಪಾಟಲಿಗೀಡಾಗಿದ್ದ ಮಂಜ, ಗುಂಡನ ವಿರುದ್ಧ ಕತ್ತಿ ಮಸೆಯುತ್ತಿದ್ದ. ಪಾಪ, ಗುಂಡ ಒಳ್ಳೆಯ ವ್ಯಕ್ತಿ. ವರ್ಷದ ಹಿಂದಷ್ಟೇ ಮದುವೆಯಾಗಿ ಒಂದು ಪುಟಾಣಿ ಪಾಪು ಆಗಿತ್ತು. ಮನೆಯಲ್ಲಿ ಪತ್ನಿ ಬಾಣಂತಿ. ಅಂಥ ಸಮಯದಲ್ಲೇ ರಕ್ಕಸ ನೇಪಾಳಿ ಮಂಜ ತನ್ನ ಹುಡುಗರನ್ನು ಬಿಟ್ಟು 'ರಾಜಿ' ಮಾಡಿಕೊಳ್ಳುವ ನೆಪದಲ್ಲಿ ಗುಂಡನನ್ನು ಗೋವಿಂದಶೆಟ್ಟಿಪಾಳ್ಯದ ಕಡೆ ಕರೆಸಿಕೊಂಡು, ಅಲ್ಲಿಂದ ಡೆಂಕನಿಕೋಟೆ ಕಾಡಿಗೆ ಕಿಡ್ನಾಪ್ ಮಾಡಿಸಿಕೊಂಡು ಹೋಗಿ, ಅಲ್ಲಿ ನಿರ್ದಾಕ್ಷಿಣ್ಯವಾಗಿ ಗುಂಡನ್ನ ಕತ್ತರಿಸಿ ಕೊಂದು ಬಿಸಾಕಿದ್ದ!

ಈ ಪ್ರಕರಣ ಥಳಿ ಪೊಲೀಸ್ ಠಾಣೆಯಲ್ಲಿ ದಾಖಲಾಗಿ ತನಿಖೆ ನಡೆದು ಮುಂದೆ ನೇಪಾಳಿ ಅರೆಸ್ಟ್ ಆಗಿ ಸೇಲಂ ಜೈಲಿನಲ್ಲಿ ಬಿದ್ದಿದ್ದ. ಆಮೇಲೆ ಆ ಕೇಸ್ ನಲ್ಲೂ ಏನೇನೋ ಅಪರಾ ತಪರಾ ನಡೆಯಿಸಿ, ಜಾಮೀನು ಪಡೆದುಕೊಂಡು ಜೈಲಾಚೆ ಬಂದಿದ್ದ. ಎರಡು ವರ್ಷದಿಂದ ವೀರಸಂದ್ರ ಹೆಬ್ಬಗೋಡಿ ವ್ಯಾಪ್ತಿಯಲ್ಲಿ ನೇಪಾಳಿ ನೆರಳೇ ಬಿದ್ದಿರಲಿಲ್ಲ. ಎಷ್ಟೋ ಜನರಿಗೆ ಈತನ ಡೆಂಕನಿಕೋಟೆ ಕೊಲೆ ಕೇಸ್ ಬಗ್ಗೆ ಗೊತ್ತಿರಲಿಲ್ಲ. ಆಸಾಮಿ ಎಲ್ಲೋದ... ಅಂದುಕೊಂಡು ನೆಮ್ಮದಿಯಾಗಿದ್ದರು. ಕಳೆದ ಲೋಕಸಭಾ ಚುನಾವಣೆ ಹೊತ್ತಲ್ಲಿ ದಿಢೀರ್ ಪ್ರತ್ಯಕ್ಷ ವಾದನಲ್ಲ, ಜನ ಮತ್ತೆ ಡಿಸ್ಟರ್ಬ್ ಆಗಿದ್ದರು. ಹೆಬ್ಬಗೋಡಿ ಪೊಲೀಸರು ಈತನನ್ನು ಕರೆಯಿಸಿ ಇನ್ನೊಮ್ಮೆ ಈ ಕಡೆ ತಲೆ ಹಾಕಿದ್ರೆ ಹುಷಾರ್... ಎಂದು ಎಚ್ಚರಿಸಿ ಓಡಿಸಿದ್ದರು. ಒಂದಷ್ಟು ದಿವಸ ಬಿಲ ಸೇರಿಕೊಂಡ ಇಲಿಯಂತಿದ್ದ ನೇಪಾಳಿ ಮಂಜ, ಯುಗಾದಿ ಸಮೀಪಸುತ್ತಿದ್ದ ಹಾಗೆಯೇ ಪೊಲೀಸ್ ಕಣ್ ತಪ್ಪಿಸಿ ಮತ್ತೆ ಏರಿಯಾ ರೌಂಡ್ಸ್ ಶುರುವಿಟ್ಟುಕೊಂಡಿದ್ದ. ಇಸ್ಪೀಟ್ ಅಡ್ಡೆಗಳಿಂದ 'ಹಫ್ತಾ' ವಸೂಲಿ ಮಾಡಿ ಜೇಬು ತುಂಬಿಸಿಕೊಳ್ಳುವ ಹಪಾ ಹಪಿ!

## ಮೂರ್ತ ಇಟ್ಟ ಹೆಬ್ಬಗೋಡಿ ಜಗ್ಗ!

ರೌಡಿ ನೇಪಾಳಿ ಮಂಜ ಯುಗಾದಿ ಹಬ್ಬಕ್ಕೆ ಮೂರು ದಿನ ಬಾಕಿ ಇರುವಾಗಲೇ ಹುಸ್ಕೂರ್ ಜಾತ್ರೆಯಲ್ಲಿ ಸುತ್ತಾಡಿ, ಸಹಚರರಿಂದ ಹಾರ ತುರಾಯಿ ಹಾಕಿಸಿಕೊಂಡು ಮಿಂಚಿದ್ದ. ವೀರಸಂದ್ರ ಹೆಬ್ಬಗೋಡಿ ಸುತ್ತಮುತ್ತ ಕಾರ್‌ನಲ್ಲಿ ಓಡಾಡುತ್ತ ಹಫ್ತಾ ವಸೂಲಿ ಜೊತೆಗೆ ಕಾಡು ಮೇಡುಗಳಲ್ಲಿ ಇಸ್ಪೀಟ್ ಆಡುವವರ ಬಳಿ ವಸೂಲಿ ಮಾಡಿಕೊಂಡು ನಿಂತಿದ್ದ. ಅದೇ ರೀತಿ ಯುಗಾದಿ ಹಬ್ಬದ ದಿವಸ ಮಧ್ಯಾಹ್ನ ಹೆಬ್ಬಗೋಡಿ ಸಮೀಪದ ತಿರುಪಾಳ್ಯ ಮತ್ತು ಗೊಲ್ಲಹಳ್ಳಿ ಕಡೆ ಇಟ್ಟಾಡುತ್ತಾ ಲೋಕಲ್ ಹುಡುಗರ ಬಿಪಿ ಏರಿಸಿದ್ದಾನೆ. ಅಲ್ಲಿನ ಹುಡುಗರು ಇವನ್ಯಾಕೆ ಬಂದ ನಮ್ಮ ಏರಿಯಾಗೆ... ಎಂದು ಪಿಸುಗುಟ್ಟಿಕೊಂಡು ಅಂದರ್ ಬಾಹರ್‌ನಲ್ಲಿ ಮುಳುಗಿದ್ದಾಗ ನೇಪಾಳಿ, ನಾನೂ ಆಡಬೇಕು ದುಡ್ ಕೊಡ್ರೋ.... ಎಂದು ಧಮ್ಕಿ ಹಾಕಿದ್ದಾನೆ.ಹೆಬ್ಬಗೋಡಿಯಲ್ಲಿ ಜಗದೀಶ ಜಗ್ಗ ಎಂಬ ರೌಡಿ ಶೀಟರ್ ಇದ್ದಾನೆ. ಕಳೆದ ವರ್ಷ ತನ್ನ ಮನೆಯ ಪಕ್ಕದಲ್ಲೇ ಅರ್ಧ ಅಡಿ ಜಾಗದ ವಿಚಾರಕ್ಕೆ ಗಲಾಟೆ ಮಾಡಿಕೊಂಡು ರಮೇಶ ಎಂಬ ವ್ಯಕ್ತಿಯನ್ನ ಭೀಕರವಾಗಿ ಕೊಂದು ಹಾಕಿದ್ದ ಹಿನ್ನಲೆ ಆತನಿಗಿದೆ. ಅಂತಾ ಜಗ್ಗನ ಸೋದರ ಮಹೇಶ ಅವತ್ತು ಅಲ್ಲಿ ಇಸ್ಪೀಟ್ ಆಡುತ್ತಿದ್ದು, ಹಫ್ತಾ ಕೇಳಿದ ನೇಪಾಳಿ ಮಂಜನಿಗೆ ತಿರುಗಿಬಿದ್ದು, ನಮ್ ಏರಿಯಾಗೆ ನೀನ್ಯಾಕೋ ಬಂದಿದ್ದೀಯ... ನೀನ್ಯಾವ ಸೀಮೆ ರೌಡಿ ಹೋಗಲೋ... ಎಂದು ಬೈದಿದ್ದನಂತೆ. ಇಷ್ಟಕ್ಕೇ ಉರಿದು ಬಿದ್ದ ನೇಪಾಳಿ, ನಾನು ಸೀನಿಯರ್ ಕಣೋ... ಬಾಸ್ ಕಣೋ.... ಎಂದೆಲ್ಲ ಅವಾಜ್ ಬಿಟ್ಟು ಮಹೇಶನ ಕೆನ್ನೆಗೆ ಒಂದೇಟು ಹಾಕಿ ಅಲ್ಲಿದ್ದ ಇತರೆ ಹುಡುಗರಿಂದ ಚಿಲ್ಲರೆ ದೇಬ್ಕೊಂಡು ಅಲ್ಲಿಂದ ಕಾಲ್ಕಿತ್ತಿದ್ದನಂತೆ. ಈ ವಿಷಯ ಜಗ್ಗನ ಕಿವಿಗೆ ಬಿದ್ದು ಸಿಡಿದೆದ್ದು, ಅಂದೇ ರಾತ್ರಿ ಮಂಜನಿಗೆ ಮೂರ್ತ ಇಟ್ಟಿದ್ದಾನೆ!

ಅಲ್ಲಿ ಇಲ್ಲಿ ಸುತ್ತಾಡಿಕೊಂಡು ಹಫ್ತಾ ವಸೂಲಿ ಮಾಡುತ್ತ ಎಣ್ಣೆ ಹೀರಿಕೊಂಡು ಮಜಾ ಮಾಡುತ್ತಿದ್ದ ಮಂಜನನ್ನು, ಕೆಲವರ ಕಡೆಯಿಂದ ಕರೆ ಮಾಡಿಸಿ ಬನ್ನಿ ಬಾಸ್ ಬೀಯರ್ ಹಾಕೋಣ ಎಂದು ಎಣ್ಣೆ ಪಾರ್ಟಿಗೆ ಆಹ್ವಾನಿಸಿದ್ದಾನೆ. ನೇಪಾಳಿ ಅಂದ್ರೇನು? ಬಚ್ಚಾಗಳು ಬೆಚ್ಚಿ ಬಿದ್ವು... ಎಂದು ತನ್ನ ಬೆನ್ನನ್ನು ತಾನೇ ತಟ್ಟಿಕೊಂಡ ಆಸಾಮಿ ನೇಪಾಳಿ ಮಂಜ, ಸಂಜೆ ಒಂಭತ್ತು ಗಂಟೆಯ ಆಸುಪಾಸಿಗೆ ಗೊಲ್ಲಹಳ್ಳಿ ಕಡೆ ಬಾರ್ ಒಂದರ ಹಿಂಬದಿಯ ರೆಡ್ಡಿ ಜಮೀನಿನಲ್ಲಿ ಠಿಕಾಣಿ ಹೂಡಿದ್ದ ಹುಡುಗರ ಹತ್ರ ಬಂದಿದ್ದಾನೆ. ತನ್ನ ಆಪ್ತ ಸಹಚರರಾದ ರಾಕೇಶ, ಮಧುಗೆ ಕಾಲ್ ಮಾಡಿ, ಬನ್ರೋ ಒಂದೊಂದ್ ಬೀಯರ್ ಹಾಕೊಂಡೋಗೊವ್ರಂತೆ... ಎಂದು ಕರೆಸಿಕೊಂಡಿದ್ದಾನೆ. ಯಾರೋ ಸೇವಕರು ಎಣ್ಣೆ ತರಲು ಬಾರ್‌ಗೆ ತೆರಳಿದ್ದಾಗ, ಈತ ಟಾರ್ಪಾಲ್ ಮೇಲೆ ಆಸೀನನಾಗಿ 'ಬಾಸ್'ಗಾಗಿ ತಂದಿಟ್ಟಿದ್ದ ಬೀಯರ್ ಅನ್ನು ಯರ್ರಾಬಿರ್ರಿ ಏರಿಸಿದ್ದಾನೆ! ಅಷ್ಟರಲ್ಲಿ, ಹೆಬ್ಬಗೋಡಿ ಜಗ್ಗ, ಅವನ ಸೋದರ ಮಹೇಶ, ಸ್ನೇಹಿತರಾದ ಹೆಲ್ಮೆಟ್ ಮಂಜ, ಬುಲೆಟ್ ಬಾಬು, ರವಿ, ದಿನೇಶ, ನಂದನ್ ಮತ್ತು ಮಂಜುನಾಥ ಮುಂತಾದವರು ಅಲ್ಲಿಗೆ ಧಾವಿಸಿದ್ದಾರೆ.



ಹತ್ಯೆಗೆ ಬಳಸಿದ ಹತ್ಯಾರ ತೋರಿಸುತ್ತಿರುವ ಸಿಪಿಐ ಸೋಮಶೇಖರ್

ಅವರನ್ನು ನೋಡ್ತಾ ಇದ್ದಂತೆಯೇ 'ಬಾಸ್' ನೇಪಾಳಿ ಏನೋ ಜಗ್ಗ... ಊಟ ಆಯ್ತೇನೋ....ಹೇಗಿದ್ದೀಯೋ ಅಂದನಂತೆ! ತಕ್ಷಣ ಟೂಲ್ಸ್ ಕೈಗೆತ್ತಿಕೊಂಡ ಜಗ್ಗ- ಮಹೇಶ ನಮ್ಮಣ್ಣ ಕಣೋ, ಹೇಗೋ ಹೊಡೆದೆ... ಎಂದು ಘರ್ಜಿಸಿ, ನೇಪಾಳಿಯನ್ನು ಕತ್ತರಿಸಲು ಶುರುವಿಟ್ಟು ಕೊಂಡಿದ್ದಾನೆ. ಉಳಿದವರ ಟೂಲ್ಸ್‌ಗಳೂ ನಾಟ್ಯವಾಡಲಾರಂಭಿಸಿ, ನೇಪಾಳಿ ಮಂಜನ ಕೈಗಳು, ಕಾಲುಗಳು, ಹೊಟ್ಟೆ, ಎದೆ.... ಇತ್ಯಾದಿ ಕಡೆ ಬಗೆದು ಹಾಕಿವೆ. ಆತ ಇವರಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸಿ ಅಷ್ಟು ದೂರ ಓಡಿದ್ದಾನೆ. ಆಗಿಲ್ಲ, ಫಿನಿಷ್!



ನೇಪಾಳಿಯಿಂದ ಕೊಲೆಯಾದ ಅಂಬೇಡ್ಕರ್ ಸಂಘದ ಅಧ್ಯಕ್ಷ ಮುನಿರಾಜು ಹಾಗೂ ಎರಡನೇ ಬಲಿ ಶ್ರೀನಿವಾಸ್

ಕಾಕತಾಳೀಯವೇನೆಂದರೆ, ನೇಪಾಳಿ ಈಗ್ಗೆ ಹತ್ತು ವರ್ಷಗಳ ಹಿಂದೆ ಯಾವ ಮಾರಮ್ಮ ಗುಡಿಯ ಸಮೀಪ ಅಂಬೇಡ್ಕರ್ ಸಂಘದ ಅಧ್ಯಕ್ಷ ಮುನಿರಾಜನನ್ನು ಕೊಂದಿದ್ದನೋ, ಅದೇ ಮಾರಮ್ಮನ ಗುಡಿಯ ಗಾವುದ ದೂರದಲ್ಲಿ ಇವನ 'ಬಲಿ' ಬಿದ್ದಿತ್ತು! ಅದೇನು ಮಾರಮ್ಮನ ಪವರ್ರೋ ಅಥವಾ ಕೊಲೆಯಾದ ಮುನಿಯನ ಹಾಗೂ ಶ್ರೀನಿವಾಸನ ಕುಟುಂಬಸ್ಥರ ಕಣ್ಣೀರಿನ ಶಾಪವೋ ಕಾಣೆ!!

ನಮಕ್ ಹರಾಮಿ ನೇಪಾಳಿ ಮಂಜ ದೊಡ್ಡ ತೋಗೂರಿನ ಗುಂಡನನ್ನು ರಾಜಿಗೆಂದು ಕರೆಸಿಕೊಂಡು ಏಮಾರಿಸಿ ಕಿಡ್ನಾಪ್ ಮಾಡಿಕೊಂಡು ಹೋಗಿ ಡೆಂಕನಿಕೋಟೆ ಅರಣ್ಯದಲ್ಲಿ ಕೊಂದು ಬಿಸಾಡಿದ್ದನಲ್ಲ, ಅವನ ಬಾಣಂತಿ ಪತ್ನಿ ಸುಮ್ಮನೆ ಶಾಪ ಹಾಕಿದ್ದಳೆ?! ಮಾಡಿದ ಕರ್ಮ ಸುಮ್ಮನೆ ಬಿಟ್ಟೀತೆ?? ಅಂತೂ ಹಲಾಲು ಟೋಪಿ ನೇಪಾಳಿ ಮಂಜ! ನೂತನ ಸಂವತ್ಸರ ಯುಗಾದಿ ಹಬ್ಬದ ದಿನವೇ ಅಂತ್ಯವಾಗಿ ಹೋದ.

ಇಲ್ಲಿಗೆ, ಹೊಸರೋಡು, ಕೋನಪ್ಪನ ಅಗ್ರಹಾರ, ದೊಡ್ಡ ತೋಗೂರು, ಎಲೆಕ್ಟ್ರಾನಿಕ್ ಸಿಟಿ, ವೀರಸಂದ್ರ, ಹೆಬ್ಬಗೋಡಿ, ಚಂದಾಪುರ ಭಾಗದಲ್ಲಿ ಕೊಬ್ಬಿದ ಹಂದಿಯಂತೆ ನುಸುಳಿ ಜನರ ನೆಮ್ಮದಿ ಕೆಡಿಸುತ್ತಿದ್ದ ಕುಣಿಗಲ್ ಕಳೆ ನಾಶವಾದಂತಾಗಿದೆ!

## ಹ್ಯಾಟ್ಸ್ ಆಫ್ ಟು ಆನೇಕಲ್ ಪೊಲೀಸ್!

ಅಂದಹಾಗೆ, ರೌಡಿ ಶೀಟರ್ ನೇಪಾಳಿ ಮಂಜ ನೇಪಾಳದವನಲ್ಲ. ಇಲ್ಲೇ ಕುಣಿಗಲ್‌ನವನು. ನೋಡಲು ಕೆಂಪಗೆ ನುಣ್ಣಗೆ ಇದ್ದುದರಿಂದ ನೇಪಾಳಿ ಎಂಬ ನಿಕ್ ನೇಮ್ ಬಂದಿತ್ತು! ಅದಿರಲಿ, ರೌಡಿ ಮಂಜುನಾಥ ನೇಪಾಳಿ ಮಂಜನ ಕೊಲೆ ನಡೆದ ಸುದ್ದಿ ಯುಗಾದಿ ಹಬ್ಬದ ತಡರಾತ್ರಿ ಪಸರ್ ಆದಾಗ, ಮಂಜನ ಸಹಚರರಿಂದ ಸುದ್ದಿ ಅರಿತು ಆತನ ತಂದೆ ಈಶ್ವರ್ ಬೆಳಗಿನ ಜಾವ ಮೂರು ಗಂಟೆ ಹೊತ್ತಿಗೆ ಹೆಬ್ಬಗೋಡಿ ಪೊಲೀಸ್ ಠಾಣೆಗೆ ಬಂದು ಈ ಬಗ್ಗೆ ದೂರು ನೀಡಿರುತ್ತಾರೆ. ಈ ದೂರಿನ ಮೇರೆಗೆ ಸಿಪಿಐ ಜಿ. ಸೋಮಶೇಖರ್ ಎಫ್‌ಐಆರ್ ದಾಖಲಿಸಿಕೊಂಡು (ಕ್ರೈಂ.ನಂ.0155/2025) ತನಿಖೆ ಕೈಗೊಂಡಿದ್ದು, ಬೆಂಗಳೂರು ಗ್ರಾಮಾಂತರ ಎಸ್ಪಿ ಸಿ.ಕೆ. ಬಾಬಾ, ಅದಿಷನಲ್ ಎಸ್ಪಿ ನಾಗೇಶ್ ಅವರ ಮಾರ್ಗದರ್ಶನ ಹಾಗೂ ಆನೇಕಲ್ ಉಪ ವಿಭಾಗದ ದಕ್ಷ ಡಿವೈಎಸ್ಪಿ ಬಿ.ಎಸ್. ಮೋಹನ್‌ಕುಮಾರ್ ನೇತೃತ್ವದಲ್ಲಿ ತನಿಖೆ ನಡೆಸಿ ಆರೋಪಿಗಳಾದ ರೌಡಿ ಜಗದೀಶ ಜಗ್ಗ, ಮಹೇಶ, ಹೆಲ್ಮೆಟ್ ಮಂಜ, ನಂದನ್, ರವಿ, ದಿನೇಶ, ಬಾಬು ಮತ್ತು ಮಂಜುನಾಥ ಮುಂತಾದವರನ್ನು ಪತ್ತೆಹಚ್ಚಿ ಬಂಧಿಸಿ ನ್ಯಾಯಾಂಗ ಬಂಧನಕ್ಕೊಪ್ಪಿಸಿರುತ್ತಾರೆ. ☯

# ಮಗಳ ಪಾಲಿಗೆ ಕೀಚಕನಾದ ಜನ್ಮ ಕೊಟ್ಟ ತಂದೆ!

**ಕಾಮುಕ ತಂದೆಯೊಬ್ಬ ತನ್ನ ಕಾಮತೃಷೆ ತೀರಿಸಿಕೊಳ್ಳಲು ತಾನು ಜನ್ಮ ಕೊಟ್ಟ ಮಗಳ ಮೇಲೆ ಐದು ತಿಂಗಳಿಂದ ಬಲವಂತದಿಂದ ನಿರಂತರವಾಗಿ ಅತ್ಯಾಚಾರ ಎಸಗಿ ಗರ್ಭಿಣಿ ಮಾಡಿ ಮಗಳ ಪಾಲಿಗೆ ಕುಡುಕ ತಂದೆಯೇ ಕೀಚಕನಾದ ದುರ್ಘಟನೆಗೆ ಕೋಲಾರ ಜಿಲ್ಲೆ ಬಂಗಾರಪೇಟೆ ತಾಲ್ಲೂಕಿನ ಕಾಮಸಮುದ್ರ ಪೊಲೀಸ್ ಠಾಣೆ ವ್ಯಾಪ್ತಿಯ ಆರಮಾನಹಳ್ಳಿಯಲ್ಲಿ ನಾಗರೀಕ ಸಮಾಜ ತಲೆ ತಗ್ಗಿಸುವಂತಹ ಅಮಾನವೀಯ ಕೃತ್ಯವೊಂದು ನಡೆದಿದೆ.**

**ಕೋಲಾರ**

✍ ಕೋಲಾರ ಮಂಜು

ಕೋಲಾರ ಜಿಲ್ಲೆ ಬಂಗಾರಪೇಟೆ ತಾಲ್ಲೂಕಿನ ಕಾಮಸಮುದ್ರ ಪೊಲೀಸ್ ಠಾಣೆ ವ್ಯಾಪ್ತಿಗೆ ಬರುವ ಆರಮಾನಹಳ್ಳಿಯ ವಾಸಿ ಗಾರೆಕೆಲಸ ಮಾಡುವ ಅಪ್ಪಯ್ಯಪ್ಪ ಮತ್ತು ಕವಿತಾ ದಂಪತಿಗಳಿಗೆ ಆಶಾ (20), ಶ್ರೀನಿವಾಸ್ (18), ಭಾವನ (16) ಎಂಬ ಮೂರು ಜನ ಮಕ್ಕಳಿರುತ್ತಾರೆ. ಗಾರೆಕೆಲಸ ಮಾಡುವ ಅಪ್ಪಯ್ಯಪ್ಪ ಬರುವ ಹಣದಲ್ಲಿ ತನ್ನ ಹೆಂಡತಿ, ಮಕ್ಕಳನ್ನು ಚೆನ್ನಾಗಿ ನೋಡಿಕೊಂಡಿದ್ದನು. ಗಾರೆಕೆಲಸ ಮಾಡುವ ಸ್ಥಳದಲ್ಲಿನ ತನ್ನ ಕೆಲವು ಜನ ಸ್ನೇಹಿತರ ಜೊತೆ ಸೇರಿ ಕುಡಿತದ ಚಟಕ್ಕೆ ಬಿದ್ದು ಪ್ರತಿದಿನ ರಾತ್ರಿ ಕುಡಿದುಕೊಂಡು ಮನೆಗೆ ಬರುತ್ತಿದ್ದನು. ಈ ವಿಚಾರವಾಗಿ ಗಂಡ, ಹೆಂಡತಿ ನಡುವೆ ಜಗಳವಾಗುತ್ತಿತ್ತು. ಏನೇ ಬುದ್ಧಿ ಹೇಳಿದರೂ ಹೆಂಡತಿ ಮಾತಿಗೆ ಬೆಲೆ ಕೊಡದೆ ಮದ್ಯವ್ಯಸನಿಯಾಗಿದ್ದನು.




ಕಳೆದ ಹನ್ನೊಂದು ವರ್ಷದ ಹಿಂದೆ ಪತ್ನಿ ಕವಿತಾ ತನ್ನ ಚಿಕ್ಕ ಮಗಳು ಭಾವನ 5 ವರ್ಷದ ಮಗು ಇರುವಾಗ ಅಕಾಲಿಕ ಮೃತ್ಯುವಿಗೆ ತುತ್ತಾಗಿದ್ದರು. ನಂತರ ತಾಯಿಯನ್ನು ಕಳೆದುಕೊಂಡಿದ್ದ ತನ್ನ ಮೂವರು ಮಕ್ಕಳಿಗೆ ಬೇರೆ ತಾಯಿಯೊಬ್ಬರನ್ನು ತರಲು ತಾನು ಎರಡನೇ ಮದುವೆ ಮಾಡಿಕೊಳ್ಳದೆ ತನ್ನ ಮಕ್ಕಳಿಗೆ ಅಪ್ಪಯ್ಯಪ್ಪನೇ ತಂದೆ, ತಾಯಿಯಾಗಿ ನೋಡಿಕೊಂಡಿದ್ದನು. ಹೆಂಡತಿ ಸತ್ತ ನಂತರ ಒಂಟಿಯಾಗಿದ್ದ ಅಪ್ಪಯ್ಯಪ್ಪನು ದಾಂಪತ್ಯ ಸುಖದಿಂದ ದೂರವಾಗಿದ್ದವನಿಗೆ ಪಕ್ಕದೂರಿನ ಗಂಡ ಸತ್ತ ಸಂಬಂಧಿ ಮಹಿಳೆಯೊಂದಿಗೆ ಸಂಬಂಧ ಇಟ್ಟುಕೊಂಡಿದ್ದಲ್ಲದೆ ಆಕೆಗೆ ಆಸರೆಯಾಗಿದ್ದನು. ವಾರದಲ್ಲಿ ಎರಡು-ಮೂರು ರಾತ್ರಿ ಆಕೆಯೊಂದಿಗೆ ಇದ್ದರೆ ಇನ್ನುಳಿದ ದಿನಗಳು ಮಕ್ಕಳೊಂದಿಗೆ ಇರುತ್ತಿದ್ದನು. ಆದರೆ ಇದು ಹೆಚ್ಚು ದಿನಗಳ ಕಾಲ ನಡೆಯಲಿಲ್ಲ. ದೊಡ್ಡ ಮಗಳು ಆಶಾ ಎಸ್‌ಎಸ್‌ಎಲ್‌ಸಿವರೆಗೂ ಓದಿಕೊಂಡಿದ್ದು ಮುಂದೆ ಕಾಲೇಜಿಗೆ ಹೋಗಲಾರದೆ ಮನೆಯಲ್ಲಿಯೇ ಕೆಲಸ ಮಾಡಿಕೊಂಡಿದ್ದಳು. ಅಪ್ಪಯ್ಯಪ್ಪ ಮನೆ ಕಡೆ ಕಾಳಜಿ ವಹಿಸದೆ ಯಾವಾಗಲೂ ಕುಡಿದುಕೊಂಡು ಮಹಿಳೆಯ ಮನೆಯಲ್ಲಿಯೇ ಇದ್ದು ಬಿಡುತ್ತಿದ್ದನು. ಇದರಿಂದ ಬೇಸತ್ತಿದ್ದ ಮಕ್ಕಳು ಗಾರೆಕೆಲಸ ಮಾಡಿಕೊಂಡು ಎಲ್ಲಿಗೂ ಹೋಗದೆ ನೇರವಾಗಿ ಮನೆಗೆ ವಾಪಸ್ಸು ಬರುವಂತೆ ಹೇಳಿದರು. ಮಕ್ಕಳ ಮಾತಿಗೆ ಬೆಲೆ ಕೊಡದ ತಂದೆ ಅಪ್ಪಯ್ಯಪ್ಪ ತನ್ನ ಚಾಳಿಯನ್ನು ಮುಂದುವರೆಸಿದನು. ನಾಯಿಯ ಬಾಲಕ್ಕೆ ದೆಬ್ಬೆ ಕಟ್ಟಿದರು. ಸೊಟ್ಟಗಿರುವ ಬಾಲ ನೆಟ್ಟಗಾಗುವುದಿಲ್ಲವೋ ಅದೇ ರೀತಿ ತಂದೆಗೆ ಎಷ್ಟೇ ಬುದ್ಧಿಮಾತು ಹೇಳಿದರೂ ತಾನು ಮಾತ್ರ ಕುಡಿತದ ಚಟ ಮತ್ತು ಪರಸ್ತ್ರೀಯೊಂದಿಗಿನ ಸಂಬಂಧವನ್ನು ಬಿಟ್ಟಿರಲಿಲ್ಲ. ತಂದೆ ಕೊಡುವ ವಾರದ ಬಟವಾಡೆ ಹಣಕ್ಕಾಗಿ ಕಾಯದೇ ಅವರು ಕೊಡುವಷ್ಟನ್ನು ತೆಗೆದುಕೊಂಡು ಇದರ ಜೊತೆಗೆ ಮಗ ಶ್ರೀನಿವಾಸ್ ಸಣ್ಣಪುಟ್ಟ ಕೆಲಸ ಮಾಡಿಕೊಂಡು ತಂಗಿಯನ್ನು ಓದಿಸುತ್ತಾ ಮನೆಯ ಸಂಸಾರವನ್ನು ತೂಗಿಸಿಕೊಂಡು ಹೋಗುತ್ತಿದ್ದರು. ಮನೆಯ ಜವಾಬ್ದಾರಿಯನ್ನು ಮಕ್ಕಳು ವಹಿಸಿಕೊಂಡ ಮೇಲೆ ತಂದೆ ಅಪ್ಪಯ್ಯಪ್ಪ ಕುಡಿತಕ್ಕೆ ದಾಸನಾಗಿ ಸರಿಯಾಗಿ ಕೆಲಸಕ್ಕೂ ಹೋಗದೆ, ಕೆಲವರ ಬಳಿ ಕೈ ಸಾಲ ಮಾಡಿಕೊಂಡು ರಾತ್ರಿ, ಹಗಲು ಎನ್ನದೆ ಕುಡಿದುಕೊಂಡು ಇರುತ್ತಿದ್ದನು. ಈ ಬಗ್ಗೆ ಮಕ್ಕಳು ಕೇಳಿದರೆ, ಅವರನ್ನು ಬೆದರಿಸಿ ಹಲ್ಲೆ ಮಾಡುತ್ತಿದ್ದನು. ತಂದೆಗೆ ಹೆದರಿದ ಮಕ್ಕಳು ಯಾವ ವಿಚಾರಕ್ಕೂ ಹೋಗದೆ ತಮ್ಮಷ್ಟಕ್ಕೆ ತಾವು ಇದ್ದುಬಿಟ್ಟರು.



ಡಿವೈಎಸ್ಪಿ ಪಾಂಡುರಂಗ

### ಮಗಳ ಪಾಲಿಗೆ ರಾಕ್ಷಸನಾದ ತಂದೆ

ತಂದೆ ಅಪ್ಪಯ್ಯಪ್ಪ ಮನೆಯಲ್ಲಿಯೇ ಇದ್ದಾಗ ಬೆಳಿಗ್ಗೆ ಬೇಗ ತಿಂಡಿ ಹಾಗೂ ಊಟವನ್ನು ತಯಾರು ಮಾಡುತ್ತಿದ್ದ ಆಶಾ ಎಲ್ಲರೊಂದಿಗೆ ತಿಂಡಿ ತಿದ್ದು ಮಧ್ಯಾಹ್ನದ ಊಟವನ್ನು ಬಾಕ್ಸ್‌ಗಳಿಗೆ ಹಾಕಿ ಕೊಡುತ್ತಿದ್ದಳು. ಅಪ್ಪ ಮತ್ತು ತಮ್ಮ ಕೆಲಸಕ್ಕೆ ಹೋದರೆ, ತಂಗಿ ಶಾಲೆಗೆ ಹೋಗುತ್ತಿದ್ದಳು. ಅವರೆಲ್ಲರೂ ಮನೆಯಿಂದ ಹೊರಟ ನಂತರ ಮನೆ ಕೆಲಸವನ್ನು ಮಾಡಿ ಮಧ್ಯಾಹ್ನ ಊಟವಾದ ಮೇಲೆ ಸ್ವಲ್ಪ ಹೊತ್ತು ಟಿವಿ ನೋಡುತ್ತಾ ಕಾಲ ಕಳೆಯುತ್ತಿದ್ದಳು. ಕಳೆದ ಮೂರು ತಿಂಗಳ ಹಿಂದೆ ಆಶಾಗೆ ಹೊಟ್ಟೆ ನೋವು ಕಾಣಿಸಿಕೊಂಡಿತು. ಪಕ್ಕದ ಮನೆ ಆಂಟಿ ಬಂದು ನಿಂಬೆಹಣ್ಣಿನ ಜ್ಯೂಸ್ ಮಾಡಿ ಕುಡಿಸಿ ವಿಶ್ರಾಂತಿ ತೆಗೆದುಕೊಳ್ಳುವಂತೆ ಹೇಳಿ ಹೋದರು. ನಂತರ ಸ್ವಲ್ಪ ಹೊತ್ತಿನ ನಂತರ ಹೊಟ್ಟೆನೋವು ಸರಿ ಹೋಯಿತು. ಎಂದಿನಂತೆ ಮನೆ ಕೆಲಸ ಮಾಡಿಕೊಂಡು ಇದ್ದಳು.



ಎಸ್ಪಿ ಕೆ.ಎಂ. ಶಾಂತರಾಜು

ಮಾರ್ಚ್ 10ರಂದು ಆಶಾಗೆ ಮತ್ತೆ ಹೊಟ್ಟೆ ನೋವು ಕಾಣಿಸಿಕೊಂಡಿತು. ತಂದೆ, ತಮ್ಮ ಕೆಲಸಕ್ಕೆ ಹೋಗಿದ್ದಾರೆ. ತಂಗಿ ಶಾಲೆಗೆ ಹೋಗಿದ್ದಾಳೆ. ಈ ಸಮಯದಲ್ಲಿ ಅಕ್ಕಪಕ್ಕದ ಮನೆಯವರು ಸೇರಿಕೊಂಡು ಕಾಮಸಮುದ್ರ ಆರೋಗ್ಯ ಕೇಂದ್ರಕ್ಕೆ ಕರೆದುಕೊಂಡು ಹೋಗಿ ಪ್ರಥಮ ಚಿಕಿತ್ಸೆ ಕೊಡಿಸಿ ಹೆಚ್ಚಿನ ಚಿಕಿತ್ಸೆಗಾಗಿ ಬಂಗಾರಪೇಟೆಗೆ ಹೋಗುವಂತೆ ಹೇಳಿದ್ದಾರೆ. ಅದರಂತೆ ಆಶಾಳನ್ನು ತಮ್ಮ, ತಂಗಿ ಮತ್ತು ಸಂಬಂಧಿಕರ ಸಹಾಯದಿಂದ ಬಂಗಾರಪೇಟೆಯ ಖಾಸಗಿ ಆಸ್ಪತ್ರೆಗೆ ಕರೆದುಕೊಂಡು ಬಂದು ಚಿಕಿತ್ಸೆಗೆ ಒಳಪಡಿಸಲಾಗಿ ವೈದ್ಯರು ಆಘಾತಕಾರಿಯಾದ ವಿಷಯವೊಂದನ್ನು ಹೇಳುತ್ತಾರೆ. ಅದು ಏನೆಂದರೆ ಯುವತಿ ಐದು ತಿಂಗಳ ಗರ್ಭಿಣಿ ಎಂದು. ಈ ವಿಷಯವನ್ನು ತಿಳಿಇದುಕೊಂಡ ತಮ್ಮ ಶ್ರೀನಿವಾಸ್ ಅಪ್ಪನಿಗೆ ಫೋನ್ ಮಾಡಿ ಅಕ್ಕ ಇದೀಗ ಐದು ತಿಂಗಳ ಗರ್ಭಿಣಿಯಾಗಿರುವುದಾಗಿ ಹೇಳಿದ್ದಾರೆ ಎಂದು ಹೇಳುತ್ತಿದ್ದಂತೆ ಕೆಂಡಮಂಡಲನಾದ ತಂದೆ ಅಪ್ಪಯ್ಯಪ್ಪನು ನಿಮ್ಮ ಅಕ್ಕನ ಹೊಟ್ಟೆಯಲ್ಲಿ ಬೆಳೆಯುತ್ತಿರುವ ಪಿಂಡಕ್ಕೆ ಯಾರು ಕಾರಣ? ಅವನು ಯಾರು? ಎಲ್ಲಿ ಇರುವನೆಂದು ಕೇಳಿಕೊಂಡಿರು. ನಂತರ ನಾವೆಲ್ಲರು ಸೇರಿ ಅವನಿಗೊಂದು ಗತಿ ಕಾಣಿಸೋಣ. ನಾನು ಕೂಡಲೇ ಆಸ್ಪತ್ರೆಗೆ ಬರುತ್ತೇನೆಂದು ಹೇಳಿದನು. ನಂತರ ಶ್ರೀನಿವಾಸ್ ಈ ವಿಷಯವನ್ನು ಅಕ್ಕನ ಬಳಿ ಕೇಳಲು ಮುಜುಗರವಾಗಿ ಅಲ್ಲಿಯೇ ಇದ್ದ ಪಕ್ಕದ ಮನೆ ಆಂಟಿಗೆ ಅಪ್ಪ ಹೇಳಿದ ವಿಚಾರವನ್ನು ಹೇಳಿ, ಅವನು ಅಕ್ಕ ಲವ್ ಮಾಡುತ್ತಿರುವ ಹುಡುಗನೇ, ಎಲ್ಲಿ ಇರುವನು ಎಂದು ಕೇಳುತ್ತಾನೆ. ಆಗ ಆಂಟಿಯು ಆಶಾಳ ಹೋಗಿ ನಾನು ಈಗ ನಿನ್ನ ಬಳಿ ಕೇಳುವ ವಿಷಯವನ್ನು ಗುಟ್ಟಾಗಿ ಇಟ್ಟಿರುತ್ತೇನೆ ಸಂಕೋಚವಿಲ್ಲದೆ ನಿನ್ನ ಈ ಸ್ಥಿತಿಗೆ ಕಾರಣ ಯಾರು? ಅವನ ಪೂರ್ಣ ವಿವರವನ್ನು ಹೇಳು ಎಂದು ಕೇಳಿದಕ್ಕೆ ಆಶಾ ಕಣ್ಣೀರಿಡುತ್ತಾ ಆಂಟಿ ಈ ವಿಷಯವನ್ನು ಏನು ಅಂತ ಹೇಳಲಿ. ನಾಗರೀಕ ಸಮಾಜವೇ ತಲೆ ತಗ್ಗಿಸುವಂತಹ ವಿಷಯವಾಗಿದೆ. ಪ್ರಾಣಿ, ಪಕ್ಷಿಗಳಿಗೆ ಯಾವ ರೀತಿ ಸಂಬಂಧಗಳು ಇಲ್ಲದಿರುವಂತೆ ಒಬ್ಬ ಮನುಷ್ಯ ಪ್ರಾಣಿಯೊಬ್ಬ ನನ್ನ ಮೈಮೇಲೆ ಎರಗಿ ಬೆದರಿಸಿ, ಹಲ್ಲೆ ಮಾಡಿ, ಬಟ್ಟೆಯಿಂದ ಬಾಯಿ ಮುಚ್ಚಿ ಬಲವಂತವಾಗಿ ನನ್ನ ಮೇಲೆ ಅತ್ಯಾಚಾರ ಮಾಡಿದ ನಂತರ ಕೈಕಾಲುಗಳನ್ನು ಕಟ್ಟಿ ಹಾಕಿ ಈ ವಿಷಯವನ್ನು ಯಾರಿಗಾದರೂ ಹೇಳುವ ಪ್ರಯತ್ನ ಮಾಡಿದರೆ ನಿನ್ನ ಪ್ರೀತಿಯ ತಮ್ಮ ಹಾಗೂ ತಂಗಿಯನ್ನು ಸಾಯಿಸಿದ ಮೇಲೆ ನಿನಗೊಂದು ಗತಿ ಕಾಣಿಸುವುದಾಗಿ ಕೊಲೆ ಬೆದರಿಕೆ ಹಾಕಿ ನನ್ನನ್ನು ಅವರ ಕಂಟ್ರೋಲ್‌ನಲ್ಲಿ ಇಟ್ಟುಕೊಂಡು ಮನೆಯಲ್ಲಿ ಯಾರು ಇಲ್ಲದಿರುವ ಸಮಯ ನೋಡಿಕೊಂಡು ಬಂದು ಮೃಗದಂತೆ ನನ್ನ ಮೈಮೇಲೆ ಬಿದ್ದು ದೈಹಿಕವಾಗಿ ಹಿಂಸಿಸುತ್ತಿದ್ದರು. ಇದಕ್ಕೆ ನಾನು ವಿರೋಧಿಸಿದರೆ ಬೆದರಿಸುವುದಲ್ಲದೆ, ಮನೆಯಲ್ಲಿ ಸಿಕ್ಕ ವಸ್ತುಗಳನ್ನು ತೆಗೆದುಕೊಂಡು ಅವುಗಳಿಂದ ಹಲ್ಲೆ ಮಾಡುತ್ತಿದ್ದರು. ಇಷ್ಟೆಲ್ಲ ನೋವು, ಹಿಂಸೆಯ ಬಗ್ಗೆ ಯಾರಿಗೂ ಹೇಳದೆ ನನ್ನ ಮನಸ್ಸಿನಲ್ಲಿಯೇ ಇಟ್ಟುಕೊಂಡು ಕೊರಗುತ್ತಿದ್ದೆನು. ನನಗೆ ಹೊಟ್ಟೆನೋವು ಕಾಣಿಸಿಕೊಳ್ಳುವ ಮೂಲಕ ನಾನು ಗರ್ಭಿಣಿಯಾಗಿರುವ ಗುಟ್ಟಿನ ವಿಷಯ ಎಲ್ಲರಿಗೂ ತಿಳಿಯುವಂತಾಯಿತು ಎಂದು ಹೇಳಿದಕ್ಕೆ ಆಂಟಿಯು, ಆಶಾ ಇನ್ನು ಯಾಕೆ ಗುಟ್ಟು ಹೇಳು ಎಂದಿದ್ದಕ್ಕೆ, ಆಶಾಳು ನಾನು ಗರ್ಭಿಣಿ ಎನ್ನುವ ವಿಷಯ ಎಲ್ಲರಿಗೂ ಗೊತ್ತಾದ ಮೇಲೆ ಈ ಪಿಂಡಕ್ಕೆ ಯಾರು ವಾರಸುದಾರನಾರು ಎನ್ನುವುದು ನಿಮಗೆ ತಿಳಿಯಲೇಬೇಕಲ್ಲವೇ. ಅವರೇ ನನಗೆ ಜನ್ಮ ಕೊಟ್ಟವರು. ಈಗ ಅವರೇ ನನ್ನ ಮಗುವಿನ ಜನ್ಮದಾತರು ಎಂದು ಹೇಳಿದಳು. ಈ ವಿಷಯವನ್ನು ತಿಳಿದುಕೊಂಡ ಆಂಟಿಯು ಇದು ಹುಡುಕಾಟದ ಮಾತಲ್ಲ, ಜವಾಬ್ದಾರಿಯಿಂದ ಮಾತನಾಡುವಂತೆ ಹೇಳಿದಕ್ಕೆ ಆಶಾ ಇದರಲ್ಲಿ ಮುಚ್ಚುಮರೆಯಿಲ್ಲ ಆಂಟಿ, ನನ್ನ ಇಂದಿನ ಸ್ಥಿತಿಗೆ ಜನ್ಮ ಕೊಟ್ಟ ತಂದೆ ಅಪ್ಪಯ್ಯಪ್ಪನೆಂದು ಜೋರಾಗಿ ಹೇಳಿದಳು. ಈ ವಿಷಯವನ್ನು ತಿಳಇದುಕೊಂಡ ಸಂಬಂಧಿಕರು ಯಾರೋ ಯುವಕನೊಂದಿಗೆ ಸಂಬಂಧ ಬೆಳೆಸಿಕೊಂಡು ಗರ್ಭಿಣಿಯಾದ



ಪಿಎಸ್‌ಐ ಕಿರಣ್‌ಕುಮಾರ್



ಕೀಚಕ ತಂದೆ ಅಪ್ಪಯ್ಯಪ್ಪ

ಮೇಲೆ ವಿಷಯ ಎಲ್ಲರಿಗೂ ಗೊತ್ತಾಗುತ್ತಿದ್ದಂತೆ ಜನ್ಮ ಕೊಟ್ಟು ಸಾಕಿ ತಾಯಿಲ್ಲದ ಮಗಳನ್ನು ಬೆಳೆಸಿದ ತಂದೆಯನ್ನೇ ಆರೋಪಿಯನ್ನಾಗಿ ಮಾಡಿ ಕುಡುಕ ತಂದೆ, ಅವನಿಗೇನು ಗೊತ್ತಾಗುವುದಿಲ್ಲವೆಂದು ತಂದೆಯಿಂದಲೇ ಗರ್ಭವತಿಯಾಗಿರುವುದಾಗಿ ತಪ್ಪು ಹೊರೆಸುತ್ತಿದ್ದಾಳೆ. ಇದನ್ನು ನಂಬುವ ಮಾತಲ್ಲ, ಇವಳ ಮಾತು ನಿಜವಾಗಿಬಿಟ್ಟರೆ, ಊರಲ್ಲಿ ಮಳೆ, ಬೆಳೆ ಇಲ್ಲದೆ ಕ್ಷಾಮ ಬಂದು ಬಿಟ್ಟಿತು, ನಿಜ ಹೇಳು ಎಂದರು. ಅದಕ್ಕೆ ಆಶಾ ಸ್ವಲ್ಪವೂ ಕುಗ್ಗದೆ ನನ್ನನ್ನು ನಂಬಿ ನಾನು ಹೇಳುವುದೆಲ್ಲ ಸತ್ಯ ಎಂದು ಹೇಳಿ ಆಸ್ಪತ್ರೆಯ ವೈದ್ಯರ ಮೂಲಕ ಕಾಮಸಮುದ್ರ ಪೊಲೀಸರನ್ನು ಕರೆಸಿಕೊಂಡು ನಡೆದ ವಿಚಾರವನ್ನು ತಿಳಿಸಿ ತಂದೆ ಅಪ್ಪಯ್ಯಪ್ಪನ ವಿರುದ್ಧ ದೂರು ನೀಡಿದಳು. ಠಾಣಾಧಿಕಾರಿಗಳು ದೂರನ್ನು ತೆಗೆದುಕೊಂಡು ಮುಂದಿನ ತನಿಖೆಗಾಗಿ ಹಿರಿಯ ಅಧಿಕಾರಿಗಳಿಗೆ ವರದಿಯನ್ನು ಸಲ್ಲಿಸಿದರು.

ಎಸ್ಪಿ ಕೆ.ಎಂ. ಶಾಂತರಾಜು ಮತ್ತು ಡಿವೈಎಸ್ಪಿ ಪಾಂಡುರಂಗರವರ ಮಾರ್ಗದರ್ಶನದಲ್ಲಿ ಕಾಮಸಮುದ್ರ ಪಿಎಸ್‌ಐ ಕಿರಣ್‌ಕುಮಾರ್‌ರವರ ನೇತೃತ್ವದಲ್ಲಿ ಕ್ರೈಂ ತಂಡವನ್ನು ರಚಿಸಲಾಗಿದ್ದು, ತಲೆಮರೆಸಿಕೊಂಡಿದ್ದ ಕಾಮುಕ ತಂದೆ ಅಪ್ಪಯ್ಯಪ್ಪ(52)ನನ್ನು ಬಂಧಿಸಿ ಪೊಲೀಸ್ ಠಾಣೆಗೆ ಕರೆದುಕೊಂಡು ಹೋಗಿ ಮಗಳ ಮೇಲೆ ನಡೆಸಿದ ದೌರ್ಜನ್ಯದ ಬಗ್ಗೆ ಕೇಳಲಾಗಿ ಕುಡಿದ ನಶೆಯಲ್ಲಿ ಇಂತಹ ನೀಚಕೃತ್ಯವನ್ನು ಎಸಗಿ ಮಾನವ ಕುಲಕ್ಕೆ ಕಳಂಕಪ್ರಾಯನಾಗಿದ್ದೇನೆಂದು ಕಣ್ಣೀರಿಟ್ಟನು. ನಂತರ ಆರೋಪಿ ತಂದೆಯನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ. ದೊಡ್ಡ ಮಗಳು ಆಶಾ ಐದು ತಿಂಗಳ ಗರ್ಭಿಣಿಯಾಗಿರುವ ವಿಷಯವನ್ನು ಮಗ ಶ್ರೀನಿವಾಸ್‌ನಿಂದ ತಿಳಿದುಕೊಂಡ ತಂದೆ ಅಪ್ಪಯ್ಯಪ್ಪ ಆಸ್ಪತ್ರೆಗೆ ಬರುತ್ತೇನೆಂದು ಹೇಳಿದವರು ಗಂಟೆಗಳು ಕಳೆದರೂ ಇತ್ತ ಕಡೆ ಸುಳಿಯದೆ ಇರುವುದನ್ನು ನೋಡಿದ ಸಂಬಂಧಿಕರಿಗೆ ಅಪ್ಪಯ್ಯನ ಮೇಲೆ ಅನುಮಾನ ಬಂದಿರುವುದಲ್ಲದೆ ಇಂತಹ ನೀಚ ತಂದೆಗೆ ನಾಗರೀಕ ಸಮಾಜದಲ್ಲಿ ಬದುಕುವ ಹಕ್ಕಿಲ್ಲ, ಅವನಿಗೆ ಗಲ್ಲುಶಿಕ್ಷೆ ವಿಧಿಸುವಂತೆ ಗ್ರಾಮಸ್ಥರು ಹಾಗೂ ಸಂಬಂಧಿಕರು ಆಗ್ರಹಿಸಿದ್ದಾರೆ.

ಕ್ರೈಂ ಪ್ರಪಂಚ

# ಮರ್ಡರ್ ಬ್ಯಾಕ್‌ಗ್ರೌಂಡ್

ಸಹಜ ಸಾವಿಗೆ ವೃದ್ಧಾಪ್ಯ ಅಥವಾ ನಿರಂತರ ಕಾಯಿಲೆ ಅಥವಾ ಹೃದಯಾಘಾತ ಅಥವಾ ಆಕಸ್ಮಿಕವಾಗಿ ಉಂಟಾಗುವ ಅಪಾಯಕಾರಿ ಅವಘಡಗಳು ಸಾವಿಗೆ ಕಾರಣ ಆಗುತ್ತದೆ.

ಮರ್ಡರ್ ಬ್ಯಾಕ್‌ಗ್ರೌಂಡ್!

ಸಾವಿಗೆ... ಅಸಹಜ ಅಥವಾ ಕೊಲೆ ಅಥವಾ ಆತ್ಮಹತ್ಯೆಗೆ ಬ್ಯಾಕ್ ಗ್ರೌಂಡ್ ಅಂದರೆ ಹಿನ್ನೆಲೆ ಇರುತ್ತದೆ ಎಂಬುದು ಮುಖ್ಯ.

ಕೊಲೆ ಆಕಸ್ಮಿಕವಲ್ಲ!

ಯಾವುದೋ ಉದ್ದೇಶದಿಂದ ಅಥವಾ ಯಾವುದೋ ಲಾಭದಿಂದ ಅಥವಾ ದ್ವೇಷ-ಅಸೂಯೆಯಿಂದ ಅಥವಾ ಬೇರೊಬ್ಬನ ಕಾಟವನ್ನು ತಡೆಯಲಾರದೆ ಬೇಸತ್ತು ರೋಸಿ ಹೋಗಿ ಕೊಲೆ ಮಾಡಲಾಗುತ್ತದೆ. ಕೆಲವೊಮ್ಮೆ ನಮಗೆ ಪ್ರಾಣಾಪಾಯ ಉಂಟಾದಾಗ, ಜೀವ ಉಳಿಸಿಕೊಳ್ಳುವ ಪ್ರಯತ್ನದಲ್ಲಿ ಕೊಲೆ ನಡೆಯಬಹುದು.

ಕೊಲೆಗೆ ಹಿನ್ನೆಲೆ ಇದ್ದೇ ಇರುತ್ತದೆ.

ಪೊಲೀಸರು ಕೊಲೆಯ ಸನ್ನಿವೇಶವನ್ನು ತುಂಬಾ ಸೂಕ್ಷ್ಮವಾಗಿ ಗಮನಿಸಿ, ಸಿಗುವ ಕೂದಲೆಳೆಯಂತ ಸುಳಿವಿನ ಜಾಡನ್ನು ಹಿಡಿದು ಕೊಲೆಗಾರನನ್ನು ಪತ್ತೆ ಮಾಡುತ್ತಾರೆ.

●●●

ಪೊಲೀಸರಿಗೆ ಬೆಳಿಗ್ಗೆ ಸುಮಾರು ಎಂಟು ಗಂಟೆಯ ಸಮಯದಲ್ಲಿ ಸೋಮನಾಥಪುರದ ಬಡಾವಣೆಯಿಂದ ಫೋನ್‌ಕಾಲ್ ಬಂದಿತು.

''ಸಾರ್... ಮಾವಿನ ತೋಪಿನ ಸಮೀಪದಲ್ಲಿ ಕೆರೆ ಇದೆ. ಅದರ ಬಲಭಾಗದಲ್ಲಿ ಎರಡು ಮನೆಗಳಿವೆ. ಆ ಎರಡು ಮನೆಗಳು ಒಬ್ಬನಿಗೆ ಸೇರಿವೆ.''

ಪೊಲೀಸ್ ಕಾನ್‌ಸ್ಟೇಬಲ್ ರೇಗುತ್ತಾ ''ರೀ... ಯಾರು ನೀವು? ಮನೆ ವಿಚಾರ ಹೇಳಲು ಫೋನ್ ಮಾಡಿದ್ದೀರ?''

''ಮನೆ ವಿಚಾರ ಅಲ್ಲ. ಮನೇಲಿ ನಡೆದಿರೋ ಮರ್ಡರ್ ಬಗ್ಗೆ ಹೇಳಲು ಫೋನ್ ಮಾಡಿದ್ದೀನಿ.''

'ಮರ್ಡರ್' ಎಂದ ಕೂಡಲೇ ಪೊಲೀಸ್ ಅಧಿಕಾರಿ ಬಟನ್ ಪ್ರೆಸ್ ಮಾಡಿ ಆಗುಂತಕನ ಹೇಳಿಕೆಯನ್ನು ರೆಕಾರ್ಡ್ ಮಾಡಲಾರಂಭಿಸಿದನು.

''ಕೊಲೆ ಆಗಿರೋದು ಯಾರು?''

''ಕಲಾಸಿಪಾಳ್ಯಂ ರೌಡಿ ರಜಾಕ್...!''

ಕಲಾಸಿಪಾಳ್ಯಂ ರೌಡಿ...!

ಅವನು ಹತ್ತು ಹಲವಾರು ಅಪರಾಧಗಳನ್ನು ಮಾಡಿದ್ದರೂ ಸಾಕ್ಷಿ, ಆಧಾರ ಇರಲಿಲ್ಲ. ಅವನ ವಿರುದ್ಧ ಸಾಕ್ಷಿ ಹೇಳಲು ಆ ಬಡಾವಣೆಯ ಜನಗಳ್ಯಾರೂ ಮುಂದೆ ಬಂದಿರಲಿಲ್ಲ. ಹಾಗಾಗಿ ಅವನನ್ನು ಹಿಡಿಯಲಾಗದೆ ಪೊಲೀಸರು ಅಸಹಾಯಕರಾಗಿದ್ದರು. ಬುದ್ಧಿವಂತ ಪೊಲೀಸ್ ಅಧಿಕಾರಿ ಪೊನ್ನಪ್ಪ ಈ ರೌಡಿಯನ್ನು ಮಟ್ಟ ಹಾಕಲು, ಅವನ ಅಪರಾಧಗಳಿಗೆ ಸಾಕ್ಷಿ, ಆಧಾರ ಗಟ್ಟಿ ಮಾಡಿಕೊಳ್ಳುವ ಪ್ರಯತ್ನದಲ್ಲಿರುವಾಗಲೇ ಅವನು ಕೊಲೆಯಾಗಿರುವ ಸುದ್ದಿ ಬಂದಿದೆ.

**ರಜಾಕ್‌ಗೆ ವಿಪರೀತ ಮತ್ತು ವಿಕೃತಕಾಮ ಚಪಲ ಇತ್ತು. ಅವನು ಇತ್ತೀಚೆಗೆ ಸುಂದರಿಯೊಬ್ಬಳ ಬಗ್ಗೆ ತಲೆಕೆಡಿಸಿ ಕೊಂಡಿದ್ದನು. ಕೆಲವು ಹೆಂಗಸರ ಮೇಲೆ ಅತ್ಯಾಚಾರ ಮಾಡಿದ್ದರೂ ಮತ್ತು ಕ್ಯಾಬರೆ ಡ್ಯಾನ್ಸರ್‌ಗಳಿಗೆ ಹಣ ಕೊಟ್ಟು ಎಂಜಾಯ್ ಮಾಡುತ್ತಿದ್ದರೂ ಮತ್ತು ಇಬ್ಬರನ್ನು ಮದುವೆ ಮಾಡಿಕೊಂಡಿದ್ದರೂ ಸಹ, ಒಂದು ತಿಂಗಳಿಂದ ಬೇರೊಬ್ಬಳು ಚೆಲುವೆ ಬಗ್ಗೆ ತಲೆಕೆಡಿಸಿಕೊಂಡಿದ್ದನು. ಹೆಣ್ಣು ಯಾರೇ ಆಗಿರಲಿ ಅವರನ್ನು ಹೆದರಿಸಿ ಅಥವಾ ಕಿಡ್ನಾಪ್ ಮಾಡಿ ರೇಪ್ ಮಾಡಿ ಆಸೆ ತೀರಿಸಿಕೊಳ್ಳುತ್ತಿದ್ದ ರಜಾಕ್, ಆ ಚೆಲುವೆ ಬಗ್ಗೆ ವಿಪರೀತ ತಲೆಕೆಡಿಸಿಕೊಂಡು ಒಂದು ರೀತಿ ಹುಚ್ಚ ಆಗಿದ್ದನು.**

''ನೀವು ಯಾರು? ಆ ರೌಡಿ ರಜಾಕ್ ಕೊಲೆ ಆಗಿರೋದು ನಿಮಗೆ ಹೇಗೆ ಗೊತ್ತಾಯ್ತು?''

''ನನ್ನ ಹೆಸರು ಹನುಮಂತಯ್ಯ. ಸೋಮನಾಥಪುರ ಬಡಾವಣೇಲಿ ವಾಸವಾಗಿದ್ದೇನೆ. ನಾನು ಪ್ರತಿದಿನ ಬೆಳಗಿನ ಹೊತ್ತು ಮಾವಿನ ತೋಪಿನ ಹತ್ತಿರ ಇರೋ ಡೈರಿಗೆ ಹಾಲು ಹಾಕಲು ಹೋಗ್ತೀನಿ. ಹಾಲಿನ ಡೈರಿಗೆ ಹೋಗಬೇಕಾದರೆ ಆ ರೌಡಿಯ ಮನೆ ಮುಂದೆ ಹೋಗಬೇಕು. ಮನೆ ಬಾಗಿಲು ತೆರೆದಿತ್ತು. ಒಳಗೆ ದೀಪ ಉರಿಯುತ್ತಿತ್ತು. ಬಾಗಿಲು ತೆಗೆದಿದ್ದರೂ ಸಹ ಜನಗಳು ಅವನ ಮನೆ ಹತ್ತಿರ ಹೋಗಲು ಹೆದರುತ್ತಾರೆ. ಅವನೊಂದು ರೀತಿ ಹುಚ್ಚು ನಾಯಿ ಸಾರ್. ಹತ್ತಿರ ಹೋದರೆ ಎಳನೀರನ್ನ ಕತ್ತರಿಸೋ ರೀತಿ ಹೊಟ್ಟೆ ಒಳಗಿರೋ ಕರುಳನ್ನ ಎಳೆದು ಎಸೆಯುತ್ತಾನೆ. ಆದರೂ ನಾನು ಧೈರ್ಯ ಮಾಡಿ ಒಳಗೆ ಹೋದೆ ಸಾರ್.''

''ಹೂಂ... ಹೇಳಿ... ಹೇಳಿ.''

''ಮನೆ ಫ್ರಂಟ್ ಹಾಲ್‌ನಲ್ಲಿ ಡೆಡ್‌ಬಾಡಿ ಬಿದ್ದಿತ್ತು. ಎದೆಗೆ ಚಾಕುವಿನಿಂದ ತಿವಿಯಲಾಗಿದೆ. ರಕ್ತದ ಕೋಡಿ ಹರಿಯುತ್ತಿದೆ. ಅಲ್ಲಿ ಯಾರೂ ಇರಲಿಲ್ಲ. ನಾನು ಗಾಬರಿಯಿಂದ ಹೊರಗೆ ಬಂದೆ.''

''ಡೆಡ್‌ಬಾಡಿ ಹತ್ತಿರ ಹೋಗಿದ್ರಾ?''

''ಇಲ್ಲ... ಇಲ್ಲ ಸಾರ್.''

''ಸರಿ... ನಾವು ಬರೋತನಕ ನೀವು ಅಲ್ಲೇ ಇರಬೇಕು. ಯಾರನ್ನೂ ಒಳಗೆ ಹೋಗಲು ಬಿಡಬೇಡಿ.''

''ಆ ಕೆಲಸ ನನ್ನಿಂದ ಆಗೋಲ್ಲ. ನಾನು ಹೋಗ್ಬೇಡ ಅಂತ ಹೇಳಿದ್ರೆ ಅವರು ಕೇಳ್ತಾರ? ಬೇಕಾದ್ರೆ ಯಾರ್‍ಯಾರು ಒಳಗೆ ಹೋದ್ರು ಅಂತ ಮೊಬೈಲ್‌ನಲ್ಲಿ ಫೋಟೋ ತೆಗಿ ಅಂತ ನನ್ನ ಮಗನಿಗೆ ಹೇಳ್ತೀನಿ.''

''ಆ ಕೆಲಸ ಮಾಡಿದ್ರೆ ಸಾಕು.''

●●●

ರೌಡಿ ಕೊಲೆಯಾಗಿದ್ದಾನೆ ಎಂಬ ಸುದ್ದಿ ಅಬ್ಬರದ ರೀತಿಯಲ್ಲಿ ಪ್ರಚಾರವಾಯಿತು.

ರೌಡಿಗಳು, ಅವನ ಚೇಲಾಗಳು ತಲೆಮರೆಸಿ ಕೊಂಡಿದ್ದಾರೆ. ಒಬ್ಬ ರೌಡಿ ಕೊಲೆಯಾಗಿದ್ದಾನೆ ಅಂದರೆ ಪೊಲೀಸರು ಮಾಡುವ ಮೊದಲ ಕೆಲಸ ಏನು?

ಹಿಟ್ ಲಿಸ್ಟ್‌ನಲ್ಲಿರುವ ರೌಡಿಗಳನ್ನು ಭೇಟಿ ಮಾಡಿ ಅರೆಸ್ಟ್ ಮಾಡುತ್ತಾರೆ. ಪೊಲೀಸರು ಕೆಲವರನ್ನು ಹಿಡಿದು ಲಾಕಪ್‌ಗೆ ತಳ್ಳಿದ್ದಾರೆ.

ಪೊಲೀಸರ ವಾಹನಗಳು ಸೈರನ್ ಮೊಳಗಿಸುತ್ತಾ, ಸೋಮನಾಥಪುರದ ಮಾವಿನ ತೋಪಿನ ಹತ್ತಿರ ಬಂದಿದ್ದರಿಂದ ಜನಗಳು ಗಾಬರಿಯಿಂದ ದೂರ ಸರಿದರು.

ಸುದ್ದಿ ಮಾಧ್ಯಮದವರು ಕ್ಯಾಮರಾಗಳೊಂದಿಗೆ ರೆಡಿಯಾಗಿದ್ದಾರೆ.

ರೌಡಿ ರಜಾಕ್ ಕಲಾಸಿಪಾಳ್ಯಂ ದಾದ. ಎಲ್ಲರನ್ನೂ ಹೆದರಿಸಿ, ವಿರೋಧ ಮಾಡಿದವರನ್ನು ಮಟಾಶ್ ಮಾಡಿ ರಕ್ತದಲ್ಲಿ ಕೈತೊಳೆಯುತ್ತಾನೆ.

ಮತ್ತೊಂದು ಸಂಗತಿ ಜನಗಳ ಗುಂಪಿನಿಂದ ಮಾಹಿತಿಯಾಗಿ ಬಂದಿತು.

ರೌಡಿ ರಜಾಕ್‌ಗೆ ವಿಪರೀತ ಹೆಣ್ಣುಗಳ ಖಯಾಲಿ ಇತ್ತು. ತೆಳ್ಳಗೆ ಬೆಳ್ಳಗೆ ಸುಂದರವಾಗಿರುವ ಹೆಣ್ಣುಗಳನ್ನು ಬಿಡುತ್ತಿರಲಿಲ್ಲ.

ವಿಶೇಷತೆ ಏನು?

ಇಬ್ಬರು ಸುಂದರ ಯುವತಿಯರಿಗೆ ಆ್ಯಸಿಡ್ ಬೆದರಿಕೆ ಹಾಕಿ ಮದುವೆ ಆಗಿದ್ದಾನೆ. ಅವನು ತುಂಬಾ ಇಷ್ಟಪಡುವ ಹೆಣ್ಣು ಯಾರೇ ಆಗಿದ್ದರೂ ಬಿಡದೆ ಮದುವೆ ಮಾಡಿಕೊಂಡು, ಅವರಿಗೊಂದು ಮನೆ ಮಾಡಿಕೊಡುತ್ತಿದ್ದನು ಮತ್ತು ಅವರ ನಿತ್ಯ ಜೀವನಕ್ಕೆ ಅಗತ್ಯವಾದ ಸಹಾಯ ಮಾಡುತ್ತಿದ್ದರು.

ಇಬ್ಬರು ಹೆಂಡತಿಯರಿದ್ದರೂ ಸಹ ಅವನು ಕೆಲವರ ಮೇಲೆ ಅತ್ಯಾಚಾರ ಮಾಡಿದ್ದಾನೆ.

ಜನಗಳ ಅಭಿಪ್ರಾಯ ಏನು?

ಅವನಿಗೆ ಕಲಾಸಿಪಾಳ್ಯಂನಲ್ಲೇ ರೌಡಿಗಳ ಗುಂಪಿನಲ್ಲಿ ಶತ್ರುಗಳಿದ್ದರು. ತುಂಬಾ ಲಾಭ ಉಂಟು ಮಾಡುವ ಕಲಾಸಿಪಾಳ್ಯಂ ಅನ್ನು ವಶಪಡಿಸಿಕೊಳ್ಳಬೇಕೆಂದು ಮತ್ತೊಬ್ಬ ರೌಡಿ ರಹೀಂ ಪ್ರಯತ್ನ ಮಾಡುತ್ತಿದ್ದನು.

ಇದು ಏನು ಸಾಮಾನ್ಯ ಆಗಿರಲಿಲ್ಲ. ಪೊಲೀಸರಿಗೆ ಇದು ತಿಳಿದಿದ್ದರಿಂದ ಆ ರೌಡಿ ರಹೀಂ ಮತ್ತು ಅವನ ಗುಂಪಿನವರನ್ನು ಹಿಡಿಯಲು ಎರಡು ತುಕಡಿ ಪೊಲೀಸರನ್ನು ನೇಮಿಸಲಾಗಿದೆ.

ಪೊಲೀಸ್ ಅಧಿಕಾರಿ ಪೊನ್ನಪ್ಪ ಈಗ ಒಳಗೆ ಬಂದನು.

ವಿಶಾಲವಾದ ಹಜಾರ. ಆದರೆ ಎಲ್ಲಾ ಕಡೆ ತುಂಬಾ ಗಲೀಜಾಗಿದೆ.

ನೆಲದ ಮೇಲೆ ಸಿಗರೇಟಿನ ತುಂಡುಗಳು ಬಿದ್ದಿವೆ. ಟೇಬಲ್ ಮೇಲೆ ರಮ್ ಬಾಟಲ್, ಲೋಟಗಳಿವೆ.

ಚಿಕನ್ ಮತ್ತು ಮಟನ್ ಐಟಂ ತುಂಡುಗಳು ತಟ್ಟೆಗಳಲ್ಲಿ ಉಳಿದಿರೋದು ಕಂಡು ಬರುತ್ತಿದೆ.

ಪೊನ್ನಪ್ಪನ ಗಮನಕ್ಕೆ ಕಂಡು ಬಂದಿತು. ಮೂಲೆಯಲ್ಲಿ ಅಡ್ಡಾದಿಡ್ಡಿಯಾಗಿ ಬಿದ್ದಿರುವ ಹೈಹೀಲ್ಡ್ ಚಪ್ಪಲಿಗಳು. ಡೈನಿಂಗ್ ಟೇಬಲ್ ಹತ್ತಿರ ಬಂದಾಗ ಕಂಡು ಬಂದಿತು, ಕೆಳಭಾಗದಲ್ಲಿ ಬಿದ್ದಿರುವ ಬಾಡಿರುವ ಮಲ್ಲಿಗೆ ದಂಡೆಯ ಹೂವು.

ಪಿ.ಸಿ.ಗಳು ಡೆಡ್‌ಬಾಡಿ ಬಿದ್ದಿರುವ ಜಾಗದಲ್ಲಿದ್ದಾರೆ. ಬಿಳಿಯ ಬಣ್ಣದ ಪುಡಿಯಿಂದ, ಡೆಡ್‌ಬಾಡಿಯ ಸುತ್ತಲೂ ಮಾರ್ಕ್ ಮಾಡಿದರು.

ಶವದ ಎದೆಯಲ್ಲಿ ಚಾಕು ಚುಚ್ಚಿಕೊಂಡಿದೆ.

ರಕ್ತ ಹರಿದು ಹೆಪ್ಪುಗಟ್ಟಿದೆ.

ಡಾಕ್ಟರ್, ಫೋಟೋಗ್ರಾಫರ್, ಫಿಂಗರ್ ಪ್ರಿಂಟ್‌ನವರು ಅಲ್ಲಿಗೆ ಆಗ ತಾನೇ ಬಂದನು. ಪೊಲೀಸ್ ಅಧಿಕಾರಿಯ ಸೂಚನೆಯಂತೆ ಕೆಲಸ ಪ್ರಾರಂಭಿಸಿದರು.

ಡೆಡ್‌ಬಾಡಿಯನ್ನು ಡಾಕ್ಟರ್ ಪರೀಕ್ಷೆ ಮಾಡುತ್ತಿದ್ದಾರೆ. ಫೋಟೋಗ್ರಾಫರ್ ಡೆಡ್‌ಬಾಡಿ ಬಿದ್ದಿರುವ ದೃಶ್ಯವನ್ನು ಬೇರೆ ಬೇರೆ ಆ್ಯಂಗಲ್‌ಗಳಲ್ಲಿ ತೆಗೆಯುತ್ತಿದ್ದಾನೆ.

ಬೆರಳಚ್ಚು ತಜ್ಞರು ಅಲ್ಲಿರುವ ವಸ್ತುಗಳ ಮೇಲೆ ಮತ್ತು ಕೊಲೆಗೆ ಬಳಸಿರುವ ಚಾಕುವಿನ ಮೇಲೆ ಮೂಡಿರಬಹುದಾದ ಬೆರಳು ಗುರುತುಗಳನ್ನು ಸಂಗ್ರಹಿಸುವ ಕಾರ್ಯದಲ್ಲಿ ಮಗ್ನರಾಗಿದ್ದಾರೆ.

ಪೊಲೀಸ್ ಅಧಿಕಾರಿಗೆ ಡೆಡ್‌ಬಾಡಿ ಬಿದ್ದಿರುವ ಬಲಭಾಗದ ಮೂಲೆಯಲ್ಲಿ ಏನೋ ಬಿದ್ದಿರುವುದು ಕಂಡು ಬಂದಿತು. ಅತ್ತ ಕಡೆ ನಡೆದು, ನೆಲದತ್ತ ಬಾಗಿ ಎತ್ತಿಕೊಂಡರು.

ಅದು ಗ್ರೀನ್ ಕಾರ್ಡ್!

ಹದ್ದಿನ ಚಿತ್ರದೊಂದಿಗೆ 'ಎಕ್ಸ್' ಗುರುತನ್ನು ಮುದ್ರಿಸಲಾಗಿದೆ.

ಕೆಳಭಾಗದಲ್ಲಿ ನಂಬರ್ ಇದೆ.

ಎಕ್ಸ್‌ಎಂ-01-ಎ.ಆರ್.

ಪೊಲೀಸ್ ಅಧಿಕಾರಿಗೆ ಇದೇನು ಅಂತ ಗೊತ್ತಾಗಲಿಲ್ಲ. ಅದನ್ನು ಪಿ.ಸಿ.ಗೆ ಕೊಟ್ಟು ಫೋಟೋಗ್ರಾಫ್ ಮಾಡಲು ಹೇಳಿದನು. ನಂತರ ಡೆಡ್‌ಬಾಡಿಯ ಬಿದ್ದಿರುವ ಮಂಚದ ಎಲ್ಲಾ ಕಡೆ ತುಂಬಾ ಸೂಕ್ಷ್ಮವಾಗಿ ಗಮನಿಸಿದನು. ಎರಡು ಕಡೆ ಹೂವಿನ ಎಸಳುಗಳು ಮತ್ತು ಎರಡು ಬಳೆಯ ಚೂರುಗಳು ಬಿದ್ದಿವೆ.

ಅಲ್ಲಿಗೆ ಅದು ದೃಢವಾಯಿತು. ಕೊಲೆ ಪ್ರಕರಣದಲ್ಲಿ ಹೆಂಗಸಿನ ಪಾತ್ರವಿದೆ. ಜೊತೆಗೆ ಗ್ರೀನ್ ಕಾರ್ಡ್ ಬೇರೊಬ್ಬರ ಬಗ್ಗೆ ಸಂಶಯ ಪಡುವಂತೆ ಮಾಡಿದೆ. ಇದು ತುಂಬಾ ಮುಖ್ಯ. ಈ ಕೊಲೆ ಹಿನ್ನೆಲೆಯಲ್ಲಿ ಇಬ್ಬರಿಗಿಂತ ಜಾಸ್ತಿ ವ್ಯಕ್ತಿಗಳ ಪಾತ್ರ ಇರಬಹುದು ಎಂಬ ಅನುಮಾನ ಅವರನ್ನು ಕಾಡುತ್ತಿದೆ.

ಡಾಕ್ಟರ್ ಅವರು ತಮ್ಮ ಅಭಿಪ್ರಾಯವನ್ನು ತಿಳಿಸಿದರು. ಸಾವು ರಾತ್ರಿ ಒಂಭತ್ತರಿಂದ ಹತ್ತು ಗಂಟೆ ಒಳಗೆ ಸಂಭವಿಸಿದೆ.

ಎದೆಗೆ ಹರಿತವಾದ ಚಾಕುವಿನಿಂದ ತಿವಿದಿರುವುದರಿಂದ ಸಾವು ಸಂಭವಿಸಿರಬಹುದು ಮತ್ತು ಸಾವಿಗೆ ಮೊದಲು ಹೆಣ್ಣಿನ ಸಂಪರ್ಕ ಉಂಟಾಗಿದೆ. ಆದರೆ ಸಂಭೋಗ ನಡೆದಿಲ್ಲ.

ಸಾವಿನ ಬಗ್ಗೆ ಬೇರೊಂದು ರೀತಿಯಾಗಿ ಅನುಮಾನ ಬರುತ್ತಿದೆ. ಪೋಸ್ಟ್‌ಮಾರ್ಟಮ್ ಮಾಡಿದ ನಂತರ ಸಾವಿಗೆ ಬೇರೆ ಏನಾದರೂ ಕಾರಣ ಇರಬಹುದೆ ಎಂಬುದು ಖಚಿತವಾಗುತ್ತದೆ.

ರೌಡಿ ರಜಾಕ್ ಮದುವೆ ಆಗಿರುವ ಇಬ್ಬರು ಪತ್ನಿಯರನ್ನು ಕರೆಸಿಕೊಂಡು ವಿಚಾರಣೆ ಮಾಡಲಾಯಿತು. ಆದರೆ ಅವರಿಗೆ ಅವನ ರೌಡಿಸಂ ವ್ಯವಹಾರಗಳ ಬಗ್ಗೆ ತಿಳಿದಿರಲಿಲ್ಲ. ಅವರಿಬ್ಬರನ್ನು ಹೆದರಿಸಿ ಮದುವೆ ಆಗಿದ್ದನು.

ಅವರಿಗೆ ಬೇರೆ ಬೇರೆ ಮನೆ ಮಾಡಿಕೊಟ್ಟಿದ್ದನು. ಆ ಮನೆಯಲ್ಲಿನ ವ್ಯವಹಾರದ ಬಗ್ಗೆ ತಿಳಿದಿರಲಿಲ್ಲ. ಅವನು ಯಾವ ಯಾವ ಹೆಣ್ಣಿನ ಜೊತೆ ಸೇರುತ್ತಾನೆ, ಇನ್ನೆಷ್ಟು ಹೆಂಗಸರನ್ನು ಮದುವೆ ಆಗಿದ್ದಾನೆ ಎಂಬುದರ ಬಗ್ಗೆ ಗೊತ್ತಿರಲಿಲ್ಲ.

ರಜಾಕ್ ಕಡೆಯ ರೌಡಿಗಳನ್ನು ಬೆನ್ನಟ್ಟಿ ಹೊರಟಿದ್ದ ಪೊಲೀಸರಿಗೆ ರಹೀಂ ಮತ್ತು ಅವನ ಕಡೆಯವರು ಸಿಕ್ಕಿಬಿದ್ದಿದ್ದರು. ಅವರನ್ನು ಕೊಲೆ ನಡೆದಿದ್ದ ಈ ಜಾಗಕ್ಕೆ ಕರೆತಂದರು.

ಅವರನ್ನು ಪ್ರತ್ಯೇಕವಾಗಿ ವಿಚಾರಣೆ ಆಡಿದಾಗ ತಿಳಿದು ಬಂದ ಮಾಹಿತಿ ಏನು?

ರಜಾಕ್‌ಗೆ ವಿಪರೀತ ಮತ್ತು ವಿಕೃತಕಾಮ ಚಪಲ ಇತ್ತು. ಅವನು ಇತ್ತೀಚೆಗೆ ಸುಂದರಿಯೊಬ್ಬಳ ಬಗ್ಗೆ ತಲೆಕೆಡಿಸಿಕೊಂಡಿದ್ದನು. ಕೆಲವು ಹೆಂಗಸರ ಮೇಲೆ ಅತ್ಯಾಚಾರ ಮಾಡಿದ್ದರೂ ಮತ್ತು ಕ್ಯಾಬರೆ ಡ್ಯಾನ್ಸರ್‌ಗಳಿಗೆ ಹಣ ಕೊಟ್ಟು ಎಂಜಾಯ್ ಮಾಡುತ್ತಿದ್ದರೂ ಮತ್ತು ಇಬ್ಬರನ್ನು ಮದುವೆ ಮಾಡಿಕೊಂಡಿದ್ದರೂ ಸಹ, ಒಂದು ತಿಂಗಳಿಂದ ಬೇರೊಬ್ಬಳು ಚೆಲುವೆ ಬಗ್ಗೆ ತಲೆಕೆಡಿಸಿಕೊಂಡಿದ್ದನು. ಹೆಣ್ಣು ಯಾರೇ ಆಗಿರಲಿ ಅವರನ್ನು ಹೆದರಿಸಿ ಅಥವಾ ಕಿಡ್ನಾಪ್ ಮಾಡಿ ರೇಪ್ ಮಾಡಿ ಆಸೆ ತೀರಿಸಿಕೊಳ್ಳುತ್ತಿದ್ದ ರಜಾಕ್, ಆ ಚೆಲುವೆ ಬಗ್ಗೆ ವಿಪರೀತ ತಲೆಕೆಡಿಸಿಕೊಂಡು ಒಂದು ರೀತಿ ಹುಚ್ಚ ಆಗಿದ್ದನು.

ಪ್ರಾಯದ ಯುವಕರಂತೆ ಕಾಲೇಜಿನ ಪಡ್ಡೆ ಯುವಕರಂತೆ ಅವಳಿಗಾಗಿ ಹಂಬಲಿಸುತ್ತಾ, ರೋಡ್ ರೋಮಿಯೋ ರೀತಿ ಕಾಡಿಸುತ್ತಿದ್ದನು.

ಪೊಲೀಸ್ ಅಧಿಕಾರಿಗೆ ನೆನಪಾಯಿತ!

ಈ ಮನೆಯ ಮೂಲೆಯಲ್ಲಿ ಬಿದ್ದಿದ್ದ ಹೈಹೀಲ್ಡ್ ಚಪ್ಪಲಿಗಳು, ಮಲ್ಲಿಗೆ ಹೂವಿನ ದಂಡೆ ಮತ್ತು ಎರಡು ಬಳೆಯ ಚೂರುಗಳು.

ರಜಾಕ್‌ನ ಚೇಲಾಗಳನ್ನು ತಟ್ಟನೆ ಕೇಳಿದನು.

''ಆ ಚೆಲುವೆ ಯಾರು?''

☞10

# ಕೋಟ್ಯಂತರ ರೂ. ದೋಚಿದ್ದವ ಸಿಕ್ಕಿಬಿದ್ದ: ಲಕ್ಕಿ ಭಾಸ್ಕರ್ ಆಗಲು ಹೋದ ಬ್ಯಾಂಕ್ ಮ್ಯಾನೇಜರ್‌ನ ಅನ್ ಲಕ್ಕಿ ಕಥೆ!



ಆರೋಪಿ ನರೇಂದ್ರ ರೆಡ್ಡಿ

ಇತ್ತೀಚೆಗೆ ತೆಲುಗಿನ 'ಲಕ್ಕಿ ಭಾಸ್ಕರ್' ಸಿನಿಮಾ ತೆರೆಕಂಡು ಭರ್ಜರಿ ಯಶಸ್ವಿ ಕಂಡಿತ್ತು. ಆ ಚಿತ್ರದಲ್ಲಿ ನಟ ತಾನು ಕೆಲಸ ಮಾಡುತ್ತಿದ್ದ ಬ್ಯಾಂಕ್‌ನಲ್ಲೇ ಹಣವನ್ನು ಕದ್ದು ಬೇರೆಡೆ ಹೂಡಿಕೆ ಮಾಡುವ ಮೂಲಕ ಸಾಕಷ್ಟು ಹಣ ಸಂಪಾದನೆ ಮಾಡುತ್ತಾನೆ. ಅದರಂತೆ ರಾಯಚೂರಿನಲ್ಲೊಬ್ಬ ಲಕ್ಕಿ ಭಾಸ್ಕರ್ ಸಿನಿಮಾ ಶೈಲಿಯಲ್ಲಿ ವಂಚನೆ ಮಾಡಿದ್ದವ ಸಿಕ್ಕಿಬಿದ್ದಿದ್ದಾನೆ. ಲಕ್ಕಿ ಭಾಸ್ಕರ್ ಆಗಲು ಹೋದ ಬ್ಯಾಂಕ್ ಮ್ಯಾನೇಜರ್‌ನ ಅನ್ ಲಕ್ಕಿ ಕಥೆ ಇಲ್ಲಿದೆ.

ಆತ ಐನಾತಿಗಳಲ್ಲೇ ಐನಾತಿ. ಲಕ್ಕಿ ಭಾಸ್ಕರ್ ಸಿನಿಮಾದಂತೆ ಕೋಟಿ ಕೋಟಿ ವಂಚಿಸಿದ್ದ ಬ್ಯಾಂಕ್‌ನ ಮ್ಯಾನೇಜರ್‌ನನ್ನು ರಾಯಚೂರು ಪೊಲೀಸರು ಕೂಡ ಸಿನಿಮಾ ಸ್ಟೈಲ್‌ನಲ್ಲೇ ಹೆಡೆಮುರಿಕಟ್ಟಿದ್ದಾರೆ. ಅಷ್ಟೇ ಅಲ್ಲ ಆತನಿಗೆ ಸಪೋರ್ಟ್ ಮಾಡುತ್ತಿದ್ದ ಆಂಧ್ರಪ್ರದೇಶದ ಮತ್ತೊಬ್ಬ ಬ್ಯಾಂಕ್ ಉದ್ಯೋಗಿ ಕೂಡ ಲಾಕ್ ಆಗಿದ್ದು, ತನ್ನ ಗುರುತು ಮರೆಮಾಚಲು ಆ ಕಿಲಾಡಿ ತನ್ನ ಗೆಟಪ್ ಅನ್ನೇ ಬದಲಿಸಿಕೊಂಡಿದ್ದ. ಆದರೂ ಪೊಲೀಸರು ಹಿಡಿಯುವಲ್ಲಿ ಯಶಸ್ವಿಯಾಗಿದ್ದಾರೆ. ರಾಯಚೂರು ನಗರದ ಬ್ಯಾಂಕ್ ಆಫ್ ಮಹಾರಾಷ್ಟ್ರ ಶಾಖೆಯ ಮ್ಯಾನೇಜರ್ ನರೇಂದ್ರ ರೆಡ್ಡಿ ತೆಲುಗಿನ ಲಕ್ಕಿ ಭಾಸ್ಕರ್ ಸಿನಿಮಾದಂತೆ ವಿವಿಧ ರೀತಿ ತಾಂತ್ರಿಕವಾಗಿ ಯಾಮಾರಿಸಿ ಕೋಟಿ ಕೋಟಿ ರೂ. ವಂಚಿಸಿ ಸಿಕ್ಕಿಬಿದ್ದ. ಆದರೆ ಆ ಸಿನಿಮಾ ಲಕ್ಕಿ ಭಾಸ್ಕರ್ ಸಕ್ಸಸ್ ಆಗಿದ್ದರೆ, ಇತ್ತ ಅದೇ ಮಾದರಿಯಲ್ಲೇ ಹಣ ಮಾಡಲು ಹೋಗಿದ್ದ ಬ್ಯಾಂಕ್ ಮ್ಯಾನೇಜರ್ ನರೇಂದ್ರ ರೆಡ್ಡಿ ಸಿಕ್ಕಿಬಿದ್ದಿದ್ದಾನೆ.



ಆರೋಪಿ ಅರುಣಾದೇವಿ

ಅದ್ರು ಬ್ಯಾಂಕ್‌ನಲ್ಲಿ ಡಿಪಾಸಿಟ್ ಮಾಡುವವರು ಹಾಗೂ ಗೋಲ್ಡ್ ಲೋನ್ ಪಡೆಯುವ ಗ್ರಾಹಕರನ್ನ ಬೆಚ್ಚಿ ಬೀಳುವಂತೆ ಮಾಡಿದ್ದ ಪ್ರಕರಣ. ರಾಯಚೂರು ನಗರದ ಬ್ಯಾಂಕ್ ಆಫ್ ಮಹಾರಾಷ್ಟ್ರ ಶಾಖೆಯ ಮ್ಯಾನೇಜರ್ ನರೇಂದ್ರ ರೆಡ್ಡಿ ತೆಲುಗಿನ ಲಕ್ಕಿ ಭಾಸ್ಕರ್ ಸಿನಿಮಾದಂತೆ ವಿವಿಧ ರೀತಿ ತಾಂತ್ರಿಕವಾಗಿ ಯಾಮಾರಿಸಿ ಕೋಟಿ ಕೋಟಿ ವಂಚಿಸಿದ್ದ. 2022-2025 ರವರೆಗೆ ಸಣ್ಣ ಸುಳಿವೂ ಸಿಗದೇ ಇರೋ ಹಾಗೇ ಚಾಲಾಕಿ ನರೇಂದ್ರ ರೆಡ್ಡಿ ತನ್ನ ವ್ಯಾಪ್ತಿಯಲ್ಲಿ ಅವ್ಯವಹಾರ ಎಸಗಿದ್ದ. ಬ್ಯಾಂಕ್ ಆಫ್ ಮಹಾರಾಷ್ಟ್ರದಲ್ಲಿ 105 ನಕಲಿ ಖಾತೆ ಓಪನ್ ಮಾಡಿದ್ದ. ಆ ಪೈಕಿ 29 ಖಾತೆಗಳಿಗೆ ಹಣ ವರ್ಗಾವಣೆಯನ್ನೂ ಮಾಡಿ ಒಂದೊಂದು ರೂಪಾಯಿ ಬಿಡದಂತೆ ಹಣ ಎಗರಿಸುತ್ತಲೇ ಇದ್ದ. ನಕಲಿ ಗೋಲ್ಡ್ ತಾನೇ ಇಟ್ಟು ಅಸಲಿ ಗೋಲ್ಡ್ ಲೋನ್ ಮಂಜೂರು ಮಾಡಿ ಆ ಹಣವನ್ನ ನಕಲಿ ಖಾತೆಗಳಿಗೆ ವರ್ಗಾಯಿಸುತ್ತಿದ್ದ. ಇದಲ್ಲದೇ ಅಸಲಿ ಗೋಲ್ಡ್ ಲೋನ್ ಹೊಂದಿದವರಿಗೂ ತನ್ನದೇ ಸ್ಟೈಲ್‌ನಲ್ಲಿ ಮೋಸ ಮಾಡಿ ವಿವಿಧ ಮಾದರಿಯಲ್ಲಿ ಬರೋಬ್ಬರಿ 10 ಕೋಟಿ 97 ಲಕ್ಷ ರೂ. ವಂಚಿಸಿದ್ದ. ಆದರೆ, ಆಡಿಟ್ ವೇಳೆ ಸಿಕ್ಕಿಬಿದ್ದಿದ್ದಾನೆ. ಬಳಿಕ ಬ್ಯಾಂಕ್‌ನ ಹಿರಿಯ ಅಧಿಕಾರಿಗಳು ರಾಯಚೂರಿನ ಸಿಇಎನ್ ಠಾಣೆಯಲ್ಲಿ ಎಫ್‌ಐಆರ್ ದಾಖಲಿಸಿದ್ದರು. ಇದರ ಬೆನ್ನಲ್ಲೇ ಎಸ್ಕೇಪ್ ಆಗಿದ್ದ ಮೋಸ್ಟ್ ವಾಂಟೆಡ್ ಕ್ರಿಮಿನಲ್‌ನನ್ನ ರಾಯಚೂರು ಪೊಲೀಸರು ಈಗ ಸದ್ದಿಲ್ಲದೇ ಹೆಡೆಮುರಿ ಕಟ್ಟಿ ಲಕ್ಕಿ ಭಾಸ್ಕರನನ್ನ ಜೈಲಿಗಟ್ಟಿದ್ದಾರೆ.

**ವೇಷ ಬದಲಿಸಿಕೊಂಡು ತಿರುಗುತ್ತಿದ್ದ ಆರೋಪಿ**

10 ಕೋಟಿ ವಂಚನೆ ಬಳಿಕ ಆರೋಪಿ ವಿವಿಧ ರೀತಿ ತನ್ನ ಗುರುತನ್ನೇ ಬದಲಿಸಿಕೊಂಡಿದ್ದ. ಮೊದಲು ಟಿಪ್ ಟಾಪ್ ಆಗಿ ಬ್ಲೇಜರ್ ಹಾಕಿ ಪೋಸು ಕೊಡುತ್ತಿದ್ದ ಆರೋಪಿ ಮ್ಯಾನೇಜರ್ ನರೇಂದ್ರ ರೆಡ್ಡಿ ತಲೆ ಮರೆಸಿಕೊಂಡ ಬಳಿಕ ಬಿಳಿ ಗಡ್ಡ ಬಿಟ್ಟಿದ್ದ. ಅಲ್ಲದೇ ಸಾದಾ ಬಟ್ಟೆಗಳನ್ನ ಹಾಕಿಕೊಂಡು ಕಣ್ಣಿಗೆ ಸ್ಪೆಕ್ಸ್ ಕೂಡ ಹಾಕಿಕೊಂಡಿದ್ದ. ಈ ಮೂಲಕ ತನ್ನ ಗುರುತು ಪತ್ತೆಯಾಗದ ರೀತಿ ಓಡಾಡುತ್ತಿದ್ದ ಎನ್ನುವುದು ತನಿಖೆ ವೇಳೆ ಗೊತ್ತಾಗಿದೆ. ಇದಲ್ಲದೇ ಆರೋಪಿ ಬರೀ ವಾಟ್ಸಪ್ ಕಾಲ್‌ನಲ್ಲಿ ಮಾತನಾಡೋದು,ವಿವಿಧ ಪುಣ್ಯ ಕ್ಷೇತ್ರಗಳಿಗೆ ಹೋಗಿ ಅಲ್ಲೇ ತಲೆ ಮರೆಸಿಕೊಳ್ಳುತ್ತಿದ್ದ. ಈ ವಿಚಾರವನ್ನು ತಿಳಿದ ಖಾಕಿ ಪಡೆ ಕಾರ್ಯಾಚರಣೆಗಿಳಿತು.

**ಆರೋಪಿ ಚಾಪೆ ಕೆಳಗೆ ನುಗ್ಗಿದ್ರೆ, ರಂಗೋಲಿ ಕೆಳಗೆ ಪೊಲೀಸರು**



ಬ್ಯಾಂಕ್‌ನಲ್ಲಿ ಕೈಚಳಕ ತೋರಿದ್ದ ನರೇಂದ್ರ ರೆಡ್ಡಿ ಜೊತೆ ಆತನ ಜೊತೆ ಕೈ ಜೋಡಿಸಿದ್ದ ಅರುಣಾದೇವಿಯನ್ನೂ ಸಿಇಎನ್ ಪೊಲೀಸರು ಬಂಧಿಸಿದ್ದಾರೆ. ಈ ಖತರ್ನಾಕ್ ನರೇಂದ್ರ ಚಾಪೆ ಕೆಳಗೆ ನುಗ್ಗಿದ್ರೆ ಪೊಲೀಸರು ರಂಗೋಲಿ ಕೆಳಗೆ ನುಗ್ಗಿದ್ರು. ಸಿನೆಮಾ ಸ್ಟೈಲ್‌ನಲ್ಲಿ ಗ್ರಾಹಕರಿಗೆ ಚಮಕ್ ಕೊಟ್ಟಿದ್ರೆ, ರಾಯಚೂರು ಪೊಲೀಸರು ಕೂಡ ಸಿನಿಮಾ ಸ್ಟೈಲ್‌ನಲ್ಲೇ ಆತನಿಗೆ ಖೆಡ್ಡಾ ತೋಡಿದ್ದಾರೆ. ಟೆಕ್ನಿಕಲ್ ಆಯಾಮದಲ್ಲೇ ರಾಯಚೂರು ಸಿಇಎನ್ ಪೊಲೀಸರು ಆಗಂತುಕನ್ನ ಬಂಧಿಸಿದ್ದಾರೆ. ತನಿಖೆ ವೇಳೆ ಆಂಧ್ರ ಮೂಲದ ಖಾಸಗಿ ಬ್ಯಾಂಕ್‌ನಲ್ಲಿ ಕೆಲಸ ಮಾಡ್ತಿದ್ದ ಆರೋಪಿ ಅರುಣಾದೇವಿ ಹಾಗೂ ನರೇಂದ್ರ ಇಬ್ಬರು ಆಂಧ್ರಪ್ರದೇಶದಲ್ಲಿ ಮಾಜಿ ಸಹೋದ್ಯೋಗಿಗಳು. ಅಲ್ಲಿನ ಪರಿಚಯದಿಂದ ನರೇಂದ್ರ ಇಲ್ಲಿ ಕೃತ್ಯ ಎಸಗುವುದರಲ್ಲಿ ಆಕೆ ಕೂಡ ಭಾಗಿಯಾಗಿದ್ದಾಳೆ. ಹೀಗಾಗಿ ಆಕೆಗೂ ಸಹ ಪೊಲೀಸರು ಜೈಲೂಟ ಬಡಿಸಿದ್ದಾರೆ.

ಇತ್ತ 10 ಕೋಟಿ ರೂ. ವಂಚನೆಯಲ್ಲಿ ನರೇಂದ್ರನಿಂದ ಸದ್ಯ ಬರೀ 78 ಸಾವಿರ ರೂಪಾಯಿ ಮಾತ್ರ ಸೀಜ್ ಆಗಿದೆ. ಉಳಿದ ಹಣ ಎಲ್ಲಿಟ್ಟಿದ್ದಾರೆ? ಹೇಗೆಲ್ಲಾ ಬಳಕೆ ಮಾಡಿದ್ದಾರೆ ಎನ್ನುವುದರ ಬಗ್ಗೆ ತನಿಖೆ ನಡೆಸುತ್ತಿದ್ದಾರೆ. ಅಲ್ಲದೇ ನಕಲಿ ಖಾತೆಗಳಿಗೆ ಸಂಬಂಧಿಸಿದಂತೆಯೂ ಕಾನೂನು ಕ್ರಮಕ್ಕೆ ಪೊಲೀಸರು ಮುಂದಾಗಿದ್ದಾರೆ.

# ಮೊದಲ ಪತ್ನಿಗೆ ಕೈಕೊಟ್ಟು ಎರಡನೇ ಮದುವೆ; ಜೀವನಾಂಶ ಕೇಳಿದ್ದಕ್ಕೆ ಮೊದಲ ಹೆಂಡ್ತಿಗೆ ಮಚ್ಚಿನೇಟು!

ಎಲ್ಲೆಡೆ ಯುಗಾದಿ ಹಬ್ಬ ಮನೆ ಮಾಡಿದ್ದು, ಜನರು ಮನೆಯಲ್ಲಿ ಸಿಹಿ ಮಾಡಿ ಹಬ್ಬವನ್ನು ಸಂಭ್ರಮಿಸುತ್ತಿದ್ದರೆ, ಮತ್ತೊಂದೆಡೆ ವ್ಯಕ್ತಿಯೋರ್ವ ನಟ್ಟನಡುರಸ್ತೆಯಲ್ಲೇ



ವ್ಯಕ್ತಿಯೋರ್ವ ತನ್ನ ಪತ್ನಿ ಹಾಗೂ ನಾದಿನಿ ಮೇಲೆ ಮಚ್ಚಿನಿಂದ ಮನ ಬಂದಂತೆ ಮಾರಣಾಂತಿಕ ಹಲ್ಲೆ ನಡೆಸಿದ್ದಾನೆ. ಯಾವ ಮಟ್ಟಿಗೆ ಅಂದ್ರೆ ಕೈ ಬೆರಳುಗಳು ಕಟ್ ಆಗಿ ರಸ್ತೆಯಲ್ಲೇ ಬಿದ್ದಿವೆ. ಅಷ್ಟಕ್ಕೂ ಆ ನರ ಹಂತಕನ ಅಟ್ಟಹಾಸಕ್ಕೆ ಕಾರಣ ಏನು ಎನ್ನುವ ವಿವರ ಇಲ್ಲಿದೆ.

ಬೈಕ್‌ನಲ್ಲಿ ಬಂದ ಯಮಕಿಂಕರ ಬೈಕ್‌ನಲ್ಲಿಟ್ಟಿದ್ದ ಮಚ್ಚು ತೆಗೆದುಕೊಂಡು ಏಕಾಏಕಿ ಎಳನೀರು ಕೊಚ್ಚೋ ಹಾಗೆ ಕೊಚ್ಚಿ ಹಾಕಿದ್ದಾನೆ. ವ್ಯಕ್ತಿಯೋರ್ವ ತನ್ನ ಪತ್ನಿ ಹಾಗೂ ನಾದಿನಿ ಮೇಲೆ ಮಚ್ಚಿನಿಂದ ಮನಬಂದಂತೆ ಹಲ್ಲೆ ಮಾಡಿದ್ದಾನೆ. ಈ ಘಟನೆ ನಡೆದದ್ದು, ರಾಯಚೂರು ತಾಲ್ಲೂಕಿನ ಏಗನೂರು ಗ್ರಾಮದಲ್ಲಿ. ತಿಮ್ಮಪ್ಪ ಎನ್ನುವ ವ್ಯಕ್ತಿಯೇ ಈ ರೀತಿ ವಿಕೃತವಾಗಿ ದಾಳಿ ನಡೆಸಿದ್ದಾನೆ. ಆರೋಪಿ ತಿಮ್ಮಪ್ಪ ತನ್ನ ಪತ್ನಿ ಪದ್ಮಾವತಿ, ಪದ್ಮಾವತಿ ತಂಗಿ ಭೂದೇವಿಯನ್ನು ಮಚ್ಚಿನಿಂದ ಹೊಡೆದಿದ್ದಾನೆ. ಈ ಘಟನೆಯ ದೃಶ್ಯ ಸಿಸಿಟಿವಿಯಲ್ಲಿ ಸೆರೆಯಾಗಿದ್ದು, ವಿಡಿಯೋವನ್ನು ಜನ ಬೆಚ್ಚಿಬಿದ್ದಿದ್ದಾರೆ.

ತಿಮ್ಮಪ್ಪ ಪತ್ನಿ ಹಾಗೂ ನಾದಿನಿ ಮೇಲೆ ಮಾರಣಾಂತಿಕ ಹಲ್ಲೆ ನಡೆಸೋಕೆ ಕಾರಣವೇ ಆಸ್ತಿ. ಹೌದು, ಈ ರಾಕ್ಷಸ ತಿಮ್ಮಪ್ಪ ಯಾದವ್ ಹಾಗೂ ಪತ್ನಿ ಪದ್ಮಾವತಿಗೆ ನಾಲ್ಕು ಜನ ಮುದ್ದಾದ ಮಕ್ಕಳಿದ್ದಾರೆ.



ಎಸ್ಪಿ ಪುಟ್ಟಮಾದಯ್ಯ



ಡಿವೈಎಸ್ಪಿ ಶಾಂತವೀರ

ಮೊದಮೊದಲು ಮಟ್ಕಾ ದಂಧೆ ನಡೆಸ್ತಿದ್ದನಂತೆ. ಬಳಿಕ ಪತ್ನಿಗೆ ನಿತ್ಯ ಟಾರ್ಚರ್ ಶುರು ಮಾಡಿದ್ದ. ಅಲ್ಲದೇ ಎರಡನೇ ಮದುವೆ ಕೂಡ ಆಗಿದ್ದಾನಂತೆ. ಹೀಗಾಗಿ ಪತ್ನಿ ಪದ್ಮಾವತಿ ಕೋರ್ಟ್ ಮೊರೆ ಹೋಗಿ ಜೀವನಾಂಶಕ್ಕೆ ಬೇಡಿಕೆ ಇಟ್ಟಿದ್ದಳು. ಕೋರ್ಟ್ ಕೂಡ ಪತ್ನಿ ಪದ್ಮಾವತಿಗೆ ಜೀವನಾಂಶ ಕೊಡುವಂತೆ ಪತಿ ತಿಮ್ಮಪ್ಪಗೆ ಸೂಚಿಸಿತ್ತು. ಆದ್ರೆ ಕಳೆದ ಎರಡು ತಿಂಗಳ ಹಿಂದಷ್ಟೇ ಆರೋಪಿ ತಿಮ್ಮಪ್ಪ ಪತ್ನಿಗೆ ಜೀವನಾಂಶ ಕೊಡಲಾಗದೇ ಜೈಲು ಸೇರಿದ್ದ. ಬಳಿಕ ಮತ್ತೆ ಹೊರ ಬಂದು ಪತ್ನಿಗೆ ಟಾರ್ಚರ್ ಕೊಡಲಾರಂಭಿಸಿದ್ದಾನೆ.

ತಿಮ್ಮಪ್ಪ ಐದು ಎಕರೆ ಜಮೀನು ಮಾಲೀಕ. ಹೀಗಾಗಿ ತನ್ನ ನಾಲ್ಕು ಮಕ್ಕಳ ಭವಿಷ್ಯಕ್ಕಾಗಿ ಜಮೀನಿನಲ್ಲಿ ಪಾಲು ಕೇಳಿದ್ದು ಪದ್ಮಾವತಿ. ಈ ಮಧ್ಯೆ ನಿನ್ನೆಯಷ್ಟೇ ಪದ್ಮಾವತಿ ಜೀವನಾಂಶದ ಕುರಿತು ಮತ್ತೆ ಕೋರ್ಟ್‌ಗೆ ಹೋಗಿ ಹೋಗಿದ್ದಳು. ಇತ್ತ ಆಕೆ ತಂಗಿ ಭೂದೇವಿಗೆ ನಿಶ್ಚಿತಾರ್ಥವಾಗಿದ್ದು ಇನ್ನೊಂದು



ತಿಂಗಳಲ್ಲಿ ಮದುವೆಯಿದೆ. ಹೀಗಾಗಿ ಅಕ್ಕ ಪದ್ಮಾವತಿ ಜೊತೆ ಟೈಲರಿಂಗ್ ಕೆಲಸ ಕಲಿಯಲಿಕ್ಕೆ ಆಕೆ ಜೊತೆಗಿದ್ದಳು. ನಿನ್ನೆ ಗ್ರಾಮದಲ್ಲಿ ಅಕ್ಕತಂಗಿ ನಡೆದುಕೊಂಡು ಹೋಗುತ್ತಿದ್ದಾಗ ಬೈಕ್‌ನಲ್ಲಿ ಬಂದ ಪಾಪಿ ತಿಮ್ಮಪ್ಪ ಇಬ್ಬರ ಮೇಲೂ ಮಚ್ಚಿನಿಂದ ದಾಳಿ ಮಾಡಿದ್ದಾನೆ.

-ವೀರನಗೌಡ


ಮೃತ ಶಂಕರನಿಗೆ ಲಾಂಗುಗಳಿಗೆ ಕೊಚ್ಚಿ ಕೊಲೆ ಮಾಡುತ್ತಿರುವ ದೃಶ್ಯ

# ಹಾಡುಹಗಲೇ ಬಾರ್ ಮುಂದೆ ಅಟ್ಟಾಡಿಸಿ ಕೊಲೆಗೈದ ಹಂತಕರಿಗೆ ಜೀವಾವಧಿ ಶಿಕ್ಷೆ


ಶಂಕರ್ ಬದುಕಿದ್ದಾಗ


ಕೊಲೆಯಾದ ಶಂಕರ್‌ನ ಮೃತದೇಹ


**ರಾಮನಗರ ಜಿಲ್ಲೆ ಕನಕಪುರ ತಾಲ್ಲೂಕು, ಕರ್ನಾಟಕ ಮತ್ತು ತಮಿಳುನಾಡು ಗಡಿಭಾಗದ ಹುಣಸನಹಳ್ಳಿ ಗ್ರಾಮವನ್ನೇ ಬೆಚ್ಚಿಬೀಳಿಸಿದ್ದ ಕೊಲೆ ಪ್ರಕರಣದ ನ್ಯಾಯಾಲಯ ತೀರ್ಪು ಪ್ರಕಟವಾಗಿ 16 ಮಂದಿ ಆರೋಪಿಗಳ ವಿರುದ್ಧ ಅಪರಾಧ ಸಾಬೀತಾದ ಹಿನ್ನೆಲೆಯಲ್ಲಿ ಆರೋಪಿಗಳಿಗೆ ಜೀವಾವಧಿ ಶಿಕ್ಷೆ ಹಾಗೂ ತಲಾ ಒಂದು ಲಕ್ಷ ರೂಪಾಯಿಗಳ ದಂಡ ವಿಧಿಸಿದ ಕನಕಪುರ ನಗರದ ಜೆಎಂಎಫ್‌ಸಿ ಕೋರ್ಟ್‌ನ ಎರಡನೇ ಅಪರ ಜಿಲ್ಲಾ ಸತ್ರ ನ್ಯಾಯಾಲಯದ ನ್ಯಾಯಾಧೀಶರಾದ ಹೆಚ್.ಎನ್. ಕುಮಾರ್‌ರವರು ಆದೇಶ ಹೊರಡಿಸಿದ್ದಾರೆ.**

**ರಾಮನಗರ**
✍ ಶಾಂತರಾಜು ಜಿ. ಕಲ್ಲಹಳ್ಳಿ


ಕನಕಪುರ ತಾಲ್ಲೂಕಿನ ಕೋಡಿಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯ ಹುಣಸನಹಳ್ಳಿ ಗ್ರಾಮದ ಕಿಟ್ಟು ಬಾರ್ ಹತ್ತಿರ ಹಾಡುಹಗಲೇ ಸಾರ್ವಜನಿ ಸ್ಥಳದಲ್ಲಿ 2021ನೇ ಆಗಸ್ಟ್ 28ರಂದು ತಮಿಳುನಾಡು ಕೃಷ್ಣಗಿರಿ ಜಿಲ್ಲೆ ಹುಲಿಬಂಡೆ ಗ್ರಾಮದ ಶಂಕರ (30) ಎಂಬಾತನನ್ನು ಸಿನಿಮೀಯ ರೀತಿಯಲ್ಲಿ ಮಾರಕಾಸ್ತ್ರಗಳಿಂದ ಮುಖ ಸೇರಿದಂತೆ ಹಲವೆಡೆ ಮನಸೋಇಚ್ಛೆ ಕೊಚ್ಚಿ ವಿರೂಪಗೊಳಿಸಿ ಕೊಲೆ ಮಾಡಲಾಗಿತ್ತು. ಈ ಪ್ರಕರಣ ಇಡೀ ಗ್ರಾಮವನ್ನೇ ಬೆಚ್ಚಿಬೀಳಿಸುವಂತೆ ಮಾಡಿತ್ತು.

ತಮಿಳುನಾಡಿನ ಕೃಷ್ಣಗಿರಿ ಜಿಲ್ಲೆ ಡೆಂಕಣಿಕೋಟೆ ತಾಲ್ಲೂಕು ಹುಲಿಬಂಡೆ ಗ್ರಾಮದ ಮೂಲ ಚಿನ್ನಸ್ವಾಮಿ ಎಂಬಾತನಿಗೆ ಇಬ್ಬರು ಹೆಂಡತಿಯರಿದ್ದು, ಈತ ಜಮೀನುದಾರ. ಇವನಿಗೆ ಸೇರಿದ್ದ 26 ಎಕರೆ ಜಮೀನಿನಲ್ಲಿ 20 ಎಕರೆ ಜಮೀನನ್ನು ಮಾರಾಟ ಮಾಡಿದ್ದ. ಉಳಿದ ಜಮೀನಿಗೆ ಎರಡು ಕುಟುಂಬದ ಅಂದರೆ ಇಬ್ಬರು ಹೆಂಡತಿಯರ ಕುಟುಂಬದ ಮಕ್ಕಳು ಭಾಗದ ವಿಚಾರದಲ್ಲಿ ಗಲಾಟೆಗಳು ಉಂಟಾಗಿದ್ದವು. ಮೊದಲನೇ ಪತ್ನಿಯ ಓದೇಗೌಡ ಹಾಗೂ ಎರಡನೇ ಪತ್ನಿ ನೀಲವ್ವನ ಮಕ್ಕಳಾದ ಮಾದೇಶ ಮತ್ತು ಚನ್ನಕೃಷ್ಣರ ನಡುವೆ ಜಮೀನು ವಿವಾದ ತಾರಕಕ್ಕೆ ಏರಿ 2015ರಲ್ಲಿ ಎರಡನೇ ಪತ್ನಿಯ ಮಗ ಚನ್ನಕೃಷ್ಣ ತನ್ನ ಸೋದರ ಓದೇಗೌಡನಿಗೆ ನಾಡಬಂದುಕಿನಿಂದ ಗುಂಡು ಹಾರಿಸಿ ಕೊಲೆಗೆ ಯತ್ನಿಸಿದ್ದ. ಆ ವೇಳೆ ಓದೇಗೌಡ ಪ್ರಾಣಾಪಾಯದಿಂದ ಪಾರಾಗಿದ್ದ. ಇದೇ ರೀತಿ ಎರಡು ಕುಟುಂಬಗಳ ನಡುವೆ ಗಲಾಟೆಗಳು ನಡೆದು ದ್ವೇಷ ಹೆಚ್ಚಾಗಿ ಸೇಡು ತೀರಿಸಿಕೊಳ್ಳಲು ಚನ್ನಕೃಷ್ಣನ ಮೇಲಿನ ದ್ವೇಷದ ಹಿನ್ನೆಲೆಯಲ್ಲಿ ಪಟ್ಟಾಭಿ ಎಂಬಾತನ ಜೊತೆ ಸೇರಿ ಓದೇಗೌಡನನ್ನು ಕೊಲೆ ಮಾಡಲಾಗಿತ್ತು. ಈ ಕೊಲೆಯಿಂದ ಮತ್ತೆ ಚನ್ನಕೃಷ್ಣನ ವಿರುದ್ಧ ದಾಯಾದಿ ಮಕ್ಕಳು ರೊಚ್ಚಿಗೆದ್ದು 2021ರಲ್ಲಿ ಸ್ವಗ್ರಾಮ ಹುಲಿಬಂಡೆ ಗ್ರಾಮದಲ್ಲಿ ಚನ್ನಕೃಷ್ಣನು ಅಂದಿನ ಚುನಾವಣಾ ಪ್ರಚಾರದಲ್ಲಿ ತೊಡಗಿದ್ದಾಗ ಟ್ರ್ಯಾಕ್ಟರ್‌ನಿಂದ ಗುದ್ದಿ ತಲೆ ಮೇಲೆ ಕಲ್ಲು ಎತ್ತಿ ಹಾಕಿ ಬರ್ಬರವಾಗಿ ಕೊಲೆ ಮಾಡಲಾಗಿತ್ತು. ಅಂದು ಚನ್ನಕೃಷ್ಣನ ಅಂತ್ಯಕ್ರಿಯೆ ಸಮಯದಲ್ಲಿ ಚನ್ನಕೃಷ್ಣನ ಅನುಯಾಯಿಗಳು ಇದರ ಪ್ರತೀಕಾರವಾಗಿ ಇದೇ ಮಾದರಿಯಲ್ಲಿ ಆರೋಪಿಗಳನ್ನು ಅಂದರೆ ಚನ್ನಕೃಷ್ಣನ ಕೊಲೆ ಮಾಡಿದ ರೀತಿಯಲ್ಲಿ ಕೊಲೆ ಮಾಡಲು ಪ್ರತಿಜ್ಞೆ ಮಾಡಿದ್ದರು.

ಚನ್ನಕೃಷ್ಣ ಕೊಲೆಯಾದ ಕೆಲವೇ ತಿಂಗಳಲ್ಲಿ ಓದೇಗೌಡನ ಮೊದಲ ಪತ್ನಿಯ ಮಗ ಶಂಕರನ ಕೊಲೆಗೆ ಸಂಚು ರೂಪಿಸಿ ಆತನ ಪತ್ನಿಯ ಮಗ ಶಂಕರನ ಕೊಲೆಗೆ ಸಂಚು ರೂಪಿಸಿ ಆತನ ಚಲನವಲನಗಳ ಮೇಲೆ ನಿಗಾ ವಹಿಸಿದ್ದ ಆರೋಪಿಗಳಾದ ಮಾದೇಶ, ಶಿವಕುಮಾರ, ಲೋಕೇಶ, ಕಾರ್ತಿಕ್, ವೇಣುಗೋಪಾಲ್, ಮತ್ತಿರರು ಸೇರಿ ದಿನಾಂಕ 28-08-2021ರಂದು ಕನಕಪುರದ ಹುಣಸನಹಳ್ಳಿ ಗ್ರಾಮದ ಕಿಟ್ಟಿ ಬಾರ್‌ನ ಹತ್ತಿರ ಶಂಕರನನ್ನು ಅಟ್ಟಾಡಿಸಿಕೊಂಡು ಹಾಡುಹಗಲೇ ಲಾಂಗು ಮತ್ತು ಮಚ್ಚುಗಳಿಂದ ಮನಬಂದಂತೆ ಕೊಚ್ಚಿ ಕೊಚ್ಚಿ ಕೊಲೆ ಮಾಡಿದ್ದರು. ಈ ಘಟನೆಯ ದೃಶ್ಯಗಳು ಬಾರ್‌ನ ಸಿಸಿ ಕ್ಯಾಮೆರಾದಲ್ಲಿ ದಾಖಲಾಗಿತ್ತು.


ಜಿಲ್ಲಾ ಎಸ್ಪಿ ಎಸ್. ಶ್ರೀನಿವಾಸಗೌಡ


ಎಎಸ್ಪಿ ಸುರೇಶ್


ಡಿವೈಎಸ್ಪಿ ಕೆ.ಸಿ. ಗಿರಿ

ಈ ಪ್ರಕರಣದ ಬಗ್ಗೆ ಮೃತ ಶಂಕರನ ಸಹೋದರ ಬೈರಪ್ಪ ಅಲಿಯಾಸ್ ಗಣೇಶನು ಕೋಡಿಹಳ್ಳಿ ಪೊಲೀಸ್ ಠಾಣೆಗೆ ದೂರು ಕೊಡಲಾಗಿ ದೂರನ್ನು ಅಂದಿನ ಪಿಎಸ್‌ಐ ಅನಂತರಾಮ್‌ರವರು ಸ್ವೀಕರಿಸಿ ಸಿಆರ್ ನಂ. 108/2021 ಯು/ಎಸ್ 120(ಬಿ), 114, 302 149, ಐಪಿಸಿ ರಿತ್ಯಾ ಪ್ರಕರಣ ದಾಖಲಿಸಿಕೊಂಡು, ಕೊಲೆ ನಡೆದ ದಿನವೇ ಅಂದಿನ ಸಿಪಿಐ ಟಿ.ಟಿ. ಕೃಷ್ಣರವರು ಕ್ರಮ ಕೈಗೊಂಡು ಕೊಲೆ ಮಾಡಿ ತಪ್ಪಿಸಿಕೊಂಡು ಎಸ್ಕೇಪ್ ಆಗಿ ಹೋಗುತ್ತಿದ್ದ ಇಬ್ಬರು ಆರೋಪಿಗಳನ್ನು ವಶಕ್ಕೆ ಪಡೆದುಕೊಂಡಿದ್ದರು. ನಂತರ ಪರಾರಿಯಾಗಿದ್ದ ಆರೋಪಿಗಳನ್ನು ದಸ್ತಗಿರಿ ಮಾಡಿ ಸಾಕ್ಷ್ಯಾಧಾರಗಳನ್ನು ಸಂಗ್ರಹ ಮಾಡಿ ಕನಕಪುರ Pri CJ ಮತ್ತು ಜೆಎಂಎಫ್‌ಸಿ ನ್ಯಾಯಾಲಯಕ್ಕೆ ಆರೋಪಿಗಳ ಮೇಲೆ ಯು/ಎಸ್ 120(ಬಿ) 114, 302, 149 ಐಪಿಸಿ ರಿತ್ಯಾ ದೋಷಾರೋಪ ಪಟ್ಟಿಯನ್ನು ಸಲ್ಲಿಸಿದ್ದರು ಹಾಗೂ ಆರೋಪಿಗಳನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದರು.

ಐದು ಮಂದಿ ಪ್ರಮುಖ ಆರೋಪಿಗಳ ಜೊತೆ ಬಂಡೇ ಮಾದೇಶ, ಮುನಿಸ್ವಾಮಿ, ಮಮತಾ, ದೀಪಕ್ ರಾಜ್, ರಾಮಚಂದ್ರ, ಗುರಪ್ಪ, ರಘು ಅಲಿಯಾಸ್ ಸೂರಿ, ಗೋಪಾಲ, ವೆಂಕಟೇಶ ಎಂಬುವರು ಕೊಲೆಗೆ ಸಹಕಾರ ನೀಡಿದ ಹಾಗೂ ದಶರಥ, ಹರೀಶ, ಸುರೇಶ, ವಿನಯಪ್ರಸಾದ್ ಎಂಬುವವರು ಕೊಲೆಗೆ ಒಳಸಂಚು ರೂಪಿಸಿದ್ದ ಆರೋಪದ ಹಿನ್ನೆಲೆಯಲ್ಲಿ ಚಾರ್ಜ್‌ಶೀಟ್ ಸಲ್ಲಿಸಲಾಗಿತ್ತು. ಕಳೆದ ಮೂರೂವರೆ ವರ್ಷಗಳಿಂದ ಈ ಪ್ರಕರಣದ ವಿಚಾರಣೆಯಲ್ಲಿ ಎಸ್‌ಎಫ್‌ಎಲ್ ತಜ್ಞ ಶರಣಬಸಪ್ಪನವರ ಸಿಸಿ ಕ್ಯಾಮರಾ ದೃಶ್ಯಾವಳಿ, ಸಾಕ್ಷಿದಾರರ ಸಮಕ್ಷಮ ಸರ್ಕಾರಿ ಅಭಿಯೋಜಕಿ ಎಂ. ರೂಪಲಕ್ಷ್ಮಿ ಆರೋಪಿಗಳ ವಿರುದ್ಧ ತಮ್ಮ ವಾದ ಮಂಡಿಸಿದ್ದರು.



ರಕ್ತದ ಮಡುವಿನಲ್ಲಿ ಶಂಕರನ ಮೃತದೇಹ


ಆರೋಪಿಗಳಾದ ಮಹಾದೇವ, ಶಿವಶಂಕರ್, ಲೋಕೇಶ, ಕಾರ್ತಿಕ್, ವೇಣುಗೋಪಾಲ್, ದೀಪಕ್‌ರಾಜ್ ಹಾಗೂ ಕೀರ್ತಿ

ನ್ಯಾಯಾಧೀಶರಾದ ಹೆಚ್.ಎಸ್. ಕುಮಾರ್‌ರವರು ಆರೋಪಿಗಳಿಗೆ ಜೀವಾವಧಿ ಶಿಕ್ಷೆ ವಿಧಿಸಿ ತಲಾ 1 ಲಕ್ಷ ರೂಪಾಯಿ ದಂಡ ವಿಧಿಸಿದ್ದಾರೆ.

ಆರೋಪಿಗಳಾದ ಮಹದೇ ಅಲಿಯಾಸ್ ಮಾದೇಶ ಬಿನ್ ಮುನಿಸ್ವಾಮಿ, ಶಿವಕುಮಾರ್ ಎಂ. ಬಿನ್ ಲೇಟ್ ಉನಿರಾಜು, ಲೋಕೇಶ ಬಿನ್ ವೆಂಕಟೇಶ, ಕಾರ್ತಿಕ್ ಬಿನ್ ಸುರೇಶ, ವೇಣುಕುಮಾರ್ ಆರ್. ಅಲಿಯಾಸ್ ವೇಣು ಬಿನ್ ರಾಮಸ್ವಾಮಿ, ರಾಮಚಂದ್ರ ಬಿನ್ ಲೇಟ್ ಗೌರಿಶಂಕರ್, ದಿಲೀಪ್‌ರಾಜ್, ದಿಲೀಪ ಬಿನ್ ಲೇಟ್ ನಟರಾಜ್, ಗುರಪ್ಪ ಬಿನ್ ಲೇಟ್ ಈರಪ್ಪ, ರಘು ಅಲಿಯಾಸ್ ಸೂರಿ ಬಿನ್ ಗೋಪಾಲ್, ದಶರಥ ಬಿನ್ ಮುನಿಯಪ್ಪ, ಹರೀಶ ಬಿನ್ ಗೋಪಾಲ್, ಸುರೇಶ್ ಬಿನ್ ಕೃಷ್ಣಪ್ಪ ಈ ಎಲ್ಲಾ ಆರೋಪಿಗಳಿಗೆ ಜೀವಾವಧಿ ಶಿಕ್ಷೆ ಮತ್ತು ತಲಾ ಒಂದು ಒಂದು ಲಕ್ಷ ರೂಪಾಯಿ ದಂಡ ವಿಧಿಸಿದ್ದಾರೆ.



ಆರೋಪಿಗಳು ಕೊಲೆಗೆ ಸ್ಕೆಚ್ ಹಾಕಿದ್ದ ಸ್ಥಳ


ಅಂದಿನ ಸಿಪಿಐ ಟಿ.ಟಿ. ಕೃಷ್ಣ


ಅಂದಿನ ಪಿಎಸ್‌ಐ ಅನಂತರಾಮ್

ರಾಮನಗರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಆರ್. ಶ್ರೀನಿವಾಸಗೌಡ, ಅಪರ ಜಿಲ್ಲಾ ಪೊಲೀಸ್ ಅಧೀಕ್ಷಕರಾದ ಸುರೇಶ್‌ರವರು, ರಾಮಚಂದ್ರಯ್ಯ ಕೆಎಸ್‌ಪಿಎಸ್‌ರವರು ಮತ್ತು ಶ್ರೀಗಿರಿ ಪೊಲೀಸ್ ಉಪಾಧೀಕ್ಷಕರು, ಚನ್ನಪಟ್ಟಣ ಡಿವೈಎಸ್ಪಿರವರು, ಈ ಪ್ರಕರಣದ ತನಿಖಾಧಿಕಾರಿಯಾದ ಸಿಪಿಐ ಟಿ.ಟಿ. ಕೃಷ್ಣ ಮತ್ತು ಅಂದಿನ ಪಿಎಸ್‌ಐ ಅನಂತರಾಮ್, ತನಿಖಾ ಸಹಾಯಕ ಮೋಹನ್ ಹೆಚ್.ಎಸ್. ಪ್ರತಾಪ್ ಎಸ್.ಎನ್. ತನಿಖೆಗೆ ಸಹಕರಿಸಿ ಆರೋಪಿಗಳನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದ ಧನಂಜಯ, ಉಪೇಂದ್ರಕುಮಾರ್, ಹುಚ್ಚಪ್ಪ, ಬಸಪ್ಪ ಗುಡಿ ಹಿಂದಲ, ಜಯಕುಮಾರ್, ಕೃಷ್ಣಮೂರ್ತಿ, ನವೀನ್, ವಿಶ್ವನಾಥ್, ವಿನೋದ, ಶರಣಪ್ಪ, ಮಹದೇವ ಶೆಟ್ಟಿ, ರಾಜೇಶ, ಮನೋಹರ ರವರುಗಳಿಗೆ ಪ್ರಶಂಸೆ ವ್ಯಕ್ತಪಡಿಸಿ, ಸೂಕ್ತ ಬಹುಮಾನವನ್ನು ಘೋಷಣೆ ಮಾಡಿದ್ದಾರೆ. ☯


ಆರೋಪಿಗಳನ್ನು ವಿಚಾರಣೆ ನಡೆಸುತ್ತಿರುವ ಪೊಲೀಸ್ ಅಧಿಕಾರಿಗಳು



ಹುಲಿಬಂಡೆ ಗ್ರಾಮದಲ್ಲಿ ವಿಚಾರಣೆ ನಡೆಸುತ್ತಿರುವ ಪೊಲೀಸ್ ಅಧಿಕಾರಿಗಳು


ಕಿಟ್ಟು ಬಾರ್‌ನಲ್ಲಿ ಮಹಜರ್ ಮಾಡುತ್ತಿರುವುದು


ಆರೋಪಿಗಳನ್ನು ಬಂಧಿಸುತ್ತಿರುವ ಪೊಲೀಸರು


ಇದೇ ಕಿಟ್ಟು ಬಾರ್ ಮುಂದೆ ನಡೆದ ಘಟನೆ

# ಪ್ರಿಯಕರನಿಗೆ ಸುಪಾರಿ ಕೊಟ್ಟು ಪತಿಯನ್ನು ಕೊಲ್ಲಿಸಿ ಹೆಣದ ಮುಂದೆ ಗೋಳಾಡಿದ ಮಳ್ಳಿ!


ಆರೋಪಿಗಳಾದ ನೀಲವೇಣಿ ಹಾಗೂ ಆನಂದ

ಪ್ರಿಯಕರನಿಗೆ ಸುಪಾರಿ ಕೊಟ್ಟು, ಹೆಂಡತಿಯೇ ಗಂಡನನ್ನ ಕೊಲೆ ಮಾಡಿಸಿರುವ ಘಟನೆ ಬಳ್ಳಾರಿಯಲ್ಲಿ ನಡೆದಿದೆ. ತನಗೇನೂ ಗೊತ್ತಿಲ್ಲ ಎನ್ನುವಂತೆ ನಟನೆ ಮಾಡಿ, ಗಂಡನ ಸಾವಿನ ಬಳಿಕ ಗೋಳಾಡಿ ಕಣ್ಣೀರಿಟ್ಟಿದ್ದ ಕಿಲಾಡಿ ಹೆಂಡತಿ ಇದೀಗ ಕಂಬಿ ಹಿಂದೆ ಮುದ್ದೆ ಮುರಿಯುತ್ತಿದ್ದಾಳೆ. ಗಂಡನ ಕೊಲೆಗೆ ಪ್ರಿಯಕರನ ಜೊತೆ ಸೇರಿ ಕಿರಾತಕಿ ಹೆಂಡತಿ ಹೇಗೆಲ್ಲಾ ಪ್ಲಾನ್ ಮಾಡಿದ್ಲು? ಯಾಕಾಗಿ ಕೊಲೆ ಮಾಡಿಸೋ ಕೃತ್ಯಕ್ಕೆ ಮುಂದಾಗಿದ್ದಳು ಎನ್ನುವ ಸಂಪೂರ್ಣ ವಿವರ ಇಲ್ಲಿದೆ.

ಏಪ್ರಿಲ್ 4ರಂದು ಬಳ್ಳಾರಿ ನಗರದ ಕಣೇಕಲ್ ರಸ್ತೆಯ ರಾಣಿತೋಟದಲ್ಲಿ ವೆಂಕಟೇಶ ಎನ್ನುವಾತನ ಕೊಲೆ ಪ್ರಕರಣಕ್ಕೆ ಬಿಗ್ ಟ್ವಿಸ್ಟ್ ಸಿಕ್ಕಿದೆ. ವೆಂಕಟೇಶನನ್ನು ಕೊಲೆ ಮಾಡಿದ್ದು ಬೇರೆ ಯಾರು ಅಲ್ಲ ಸ್ವತಃ ಹೆಂಡತಿಯೇ ಪ್ರಿಯಕರನೊಂದಿಗೆ ಸೇರಿ ಈ ಕೃತ್ಯ ಎಸಗಿದ್ದಾಳೆ. ಗಂಡನ ಸಾವಿನ ಬಳಿಕ ಗೋಳಾಡಿ ಕಣ್ಣೀರಿಟ್ಟಿದ್ದ ಕಿಲಾಡಿ ಹೆಂಡತಿ ಇದೀಗ ಕಂಬಿ ಹಿಂದೆ ಮುದ್ದೆ ಮುರಿಯುತ್ತಿದ್ದಾಳೆ. ಇದೇ ಶುಕ್ರವಾರ 04/04/2025 ಬೆಳಗಿನ ಜಾವ ಬಳ್ಳಾರಿ ನಗರದ ಕಣೇಕಲ್ ರಸ್ತೆಯ ರಾಣಿತೋಟ ಏರಿಯಾದಲ್ಲಿ ವೆಂಕಟೇಶ ಎನ್ನುವ ವ್ಯಕ್ತಿಯ ಭೀಕರ ಕೊಲೆಯಾಗಿತ್ತು. ವೆಂಕಟೇಶನ ಮೈಮೇಲಿದ್ದ ಎಲ್ಲಾ ಬಟ್ಟೆಗಳನ್ನ ಬಿಚ್ಚಿದ್ದ ಕಿರಾತಕರು, ತಲೆಗೆ ಹೊಡೆದು ಕೊಲೆ ಮಾಡಿ ಎಸ್ಕೇಪ್ ಆಗಿದ್ದರು. ಈ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಮೃತ ವೆಂಕಟೇಶನ ಪತ್ನಿ ಬ್ರೂಸ್ ಪೇಟೆ ಪೊಲೀಸ್ ಠಾಣೆಯಲ್ಲಿ ಕೇಸ್ ದಾಖಲಿಸಿದ್ದಳು. ವಿಪರ್ಯಾಸ ಅಂದ್ರೆ, ಕೇಸ್ ದಾಖಲಿಸಿದ್ದ ಮೃತ ವೆಂಕಟೇಶನ ಪತ್ನಿಯೇ ಇಡೀ ಕೊಲೆ ಪ್ರಕರಣದ ಸೂತ್ರಧಾರಿ ಎನ್ನುವುದು ಪೊಲೀಸ್ ತನಿಖೆಯಲ್ಲಿ ಬಟಾ ಬಯಲಾಗಿದೆ.


ಕೊಲೆಯಾದ ವೆಂಕಟೇಶ್

ಅದ್ಯಾವ ಸಿನಿಮಾ, ಧಾರಾವಾಹಿ ನೋಡಿ ಕಳಿತಿದ್ಲೋ ಏನೋ. ಡವ್ ರಾಣಿ ಪಕ್ಕಾ ಆ್ಯಕ್ಟಿಂಗ್ ಮಾಡಿದ್ದಳು. ಅಯ್ಯಯ್ಯೋ... ಅದ್ಯಾರ್ ನನ್ನ ಗಂಡನ ಕೊಲೆ ಮಾಡಿದ್ರೋ ಗೊತ್ತಿಲ್ಲ, ಮುಂದೆ ನನ್ನ ಗತಿ ಏನೋ ಎಂದು ಗೋಳಾಡಿ ಅತ್ತಿದ್ದೇ ಅತಿದ್ದು, ಕಣ್ಣೀರಿಟ್ಟಿದ್ದೇ ಇಟ್ಟಿದ್ದು. ಆದ್ರೆ ಈ ಆಟ ಕೇವಲ 24 ಗಂಟೆಗಷ್ಟೇ ಸೀಮಿತ ಆಗಿತ್ತು. ಪತಿ ಕೊಲೆಯ ಹಿಂದಿನ ರಹಸ್ಯ ಕೆದಕಿದಾಗ ಬಯಲಾಗಿದ್ದೇ ಪಾಪಿ ಪತ್ನಿಯ ಕೈವಾಡ. ಅಕ್ರಮ ಸಂಬಂಧಕ್ಕೆ ಪತಿಯೇ ಅಡ್ಡಿಯಾಗುತ್ತಾನೆ ಎಂದು ಪ್ರಿಯಕರನ ಮೂಲಕವೇ ಪತಿಗೆ ಸ್ಕೆಚ್ ಹಾಕಿ, ಪತಿ ಕಥೆಯನ್ನೇ ಪತ್ನಿ ನೀಲವೇಣಿ ಮುಗಿಸಿದ್ದಾಳೆ.

ವೆಂಕಟೇಶ್ ಮತ್ತು ನೀಲವೇಣಿ ಮದುವೆಯಾಗಿ 16 ವರ್ಷ ಆಗಿತ್ತು. ಇಬ್ಬರು ಹೆಣ್ಣುಮಕ್ಕಳು, ಒಬ್ಬ ಗಂಡು ಮಗನಿದ್ದಾನೆ. ಆದ್ರೆ ನೀಲವೇಣಿಗೆ ಶಾಮಿಯಾನ ವ್ಯವಹಾರ ಮಾಡುತ್ತಿದ್ದ ಆನಂದ್ ಜೊತೆ ಅಕ್ರಮ ಸಂಬಂಧ ಇತ್ತು. ನೀಲವೇಣಿ ಮತ್ತು ಆನಂದ್ ಇಬ್ಬರೂ ಸೇರಿ ಶಾಮಿಯಾನ ವ್ಯವಹಾರ ಮಾಡುತ್ತಿದ್ದರು. ಪತ್ನಿಯ ಅನೈತಿಕ ಸಂಬಂಧದ ಬಗ್ಗೆ ವೆಂಕಟೇಶ್‌ಗೆ ಅನುಮಾನ ಬಂದಿತ್ತು. ಇಂಟ್ರೆಸ್ಟಿಂಗ್ ಅಂದ್ರೆ, ಆನಂದ್ ಮತ್ತು ಹತ್ಯೆಯಾದ ವೆಂಕಟೇಶ್ ಇಬ್ಬರೂ ಪರಿಚಯಸ್ಥರೇ ಆಗಿದ್ದರು. ಮೊನ್ನೆ ವೆಂಕಟೇಶ್ ಮನೆಯ ಕಾರ್ಯಕ್ರಮಕ್ಕೆ ಇದೇ ಆನಂದ್ ಕಡೆಯಿಂದಲೇ ನೀಲವೇಣಿ ಶಾಮಿಯಾನ ಹಾಕಿಸಿದ್ದಳು. ಅಂದೇ ನೀಲವೇಣಿ-ಆನಂದ್ ನಡುವಿನ ಸಂಬಂಧದ ವಿಚಾರವಾಗಿ ಪತಿ ವೆಂಕಟೇಶ್ ಜಗಳ ತೆಗೆದಿದ್ದ. ಶುಕ್ರವಾರ ರಾತ್ರಿಯೇ ಆನಂದ್‌ಗೆ ಪತಿ ವೆಂಕಟೇಶ್‌ನನ್ನ ಕೊಂದುಬಿಡುವಂತೆ ನೀಲವೇಣಿ ಸುಪಾರಿ ಕೊಟ್ಟಿದ್ದಳು. ಬಳಿಕ ಆನಂದ್ ತನ್ನ ಸ್ನೇಹಿತರ ಜೊತೆ ಚರ್ಚೆ ಮಾಡಿ ಕೊಲೆ ಪ್ಲಾನ್ ಮಾಡಿದ್ದ.

## ಕೊಲೆ ಪ್ಲ್ಯಾನ್ ಹೇಗಿತ್ತು ಗೊತ್ತಾ?

ಘಟನೆ ನಡೆಯುವ ಹಿಂದಿನ ದಿನ ಕುಡಿಯೋದಕ್ಕೆ ಎಂದು ಪ್ಲಾನ್ ಮಾಡಿ ಮನೆಯಲ್ಲಿದ್ದ ವೆಂಕಟೇಶ್‌ನನ್ನು ಆನಂದ್, ನಾಲ್ಕನೇ ಆರೋಪಿ ಚಿರು ಬೈಕ್‌ನಲ್ಲಿ ರಾಣಿಪೇಟೆ ಏರಿಯಾದಿಂದ ನೂರು ಮೀಟರ್ ಅಂತರದಲ್ಲಿನ ಸ್ಮಶಾನಕ್ಕೆ ಕರೆಸಿಕೊಂಡಿದ್ದ. ಆ ಮೇಲೆ ಒಬ್ಬೊಬ್ಬರಾಗಿ ಆರೋಪಿಗಳು ಸ್ಥಳಕ್ಕೆ ಬಂದಿದ್ರು. ಅಲ್ಲಿ ನೀಲವೇಣಿಯ ಸೂಚನೆಯಂತೆ ವೆಂಕಟೇಶನನ್ನು ಪ್ಲಾನ್ ಮಾಡಿ, ಪಕ್ಕಾ ಸ್ಕೆಚ್ ಹಾಕಿ, 11 ಆರೋಪಿಗಳು ಮನಸೋ ಇಚ್ಛೆ ಹಲ್ಲೆ ಮಾಡಿ ಕೊಲೆ ಮಾಡಿದ್ದಾರೆ.

## 11 ಆರೋಪಿಗಳು ಅಂದರ್

ಆನಂದ್, ವೆಂಕಟೇಶ್‌ನನ್ನ ಎಣ್ಣೆ ಪಾರ್ಟಿ ಮಾಡಲು ಕರೆಸಿಕೊಂಡು ಆನಂದ್ ಮತ್ತು ಗ್ಯಾಂಗ್ ಕೊಂದು ಹಾಕಿದ್ದು, ತನಿಖೆ ವೇಳೆ ನೀಲವೇಣಿ ಕಳ್ಳಾಟಗಳೆಲ್ಲ ಬಯಲಾಗಿದೆ. ಅಂದು ಗಂಡನ ಶವದ ಮುಂದೆ ಅತ್ತು, ನವರಂಗಿ ಆಟ ಆಡಿದ್ದ ನೀಲವೇಣಿ ಮತ್ತು ಆನಂದ್ ಸೇರಿದಂತೆ ಒಟ್ಟು 11 ಜನ ಅರೆಸ್ಟ್ ಆಗಿದ್ದಾರೆ. ಎ1 ಆರೋಪಿ ನೀಲವೇಣಿ, ಎ2 ಆರೋಪಿ ಆನಂದ, ಮೊಹ್ಮದ್‌ಗೌಸ್, ಶಿವಶಂಕರ ಅಲಿಯಾರ ಚಿರು, ಮಹಮ್ಮದ್ ಶಾಯಿದ್ ಅಲಿಯಾಸ್ ಜಂಗ್ಲಿ, ಪಾಷಾವಲಿ ಅ|| ದುದ್ದು, ಮಮ್ಮದ ಷರೀಫ್, ಮೊಮ್ಮದ್ ಆಸೀಫ್, ಮೊಹಮ್ಮದ್ ಸೋಯಲ್ ಬಂಧಿತ ಆರೋಪಿಗಳು.

ಸದ್ಯ ಘಟನೆ ನಡೆದ 24 ಗಂಟೆಗಳಲ್ಲಿ ಪ್ರಕರಣದ ಎಲ್ಲಾ ಆರೋಪಿಗಳನ್ನ ಬಂಧಿಸುವಲ್ಲಿ ಪೊಲೀಸರು ಯಶಸ್ವಿಯಾಗಿದ್ದಾರೆ. ಆದ್ರೆ ತನಗೇನೂ ಗೊತ್ತಿಲ್ಲ ಎನ್ನುವಂತೆ ನಟನೆ ಮಾಡಿದ್ದ ಪಾಪಿ ಪತ್ನಿಯ ಕುತಂತ್ರಕ್ಕೆ ವೆಂಕಟೇಶ್ ಬಲಿಯಾಗಿದ್ದಾನೆ. ಪತ್ನಿಯೇ ಪ್ರಿಯಕರನ ಜೊತೆ ಸಂಚು ರೂಪಿಸಿ, ಪತಿಯನ್ನ ಕೊಲೆ ಮಾಡಿಸಿರೋ ಘಟನೆ ಇಡೀ ಬಳ್ಳಾರಿಯನ್ನೇ ಬೆಚ್ಚಿ ಬೀಳಿಸಿದೆ. ☯

6 ☞

''ಇಷ್ಟಪಡುತ್ತಿದ್ದ ಎಲ್ಲಾ ಹೆಂಗಸರ ಬಗ್ಗೆ ಕುಡಿತದ ಅಮಲಿನಲ್ಲಿ ಹೇಳುತ್ತಿದ್ದರು. ಆದರೆ ಆ ಚೆಲುವೆ ಬಗ್ಗೆ ಹೇಳಿರಲಿಲ್ಲ.

ಪೊಲೀಸ್ ಅಧಿಕಾರಿ, ಶವದ ರೂಮಿನಲ್ಲಿ ಸಿಕ್ಕಿದ್ದ ಗ್ರೀನ್ ಕಾರ್ಡ್ ಅನ್ನು ರೌಡಿಗಳಿಗೆ ತೋರಿಸಿ ''ಈ ಕಾರ್ಡ್‌ನಲ್ಲಿ ಕೋಡ್‌ವರ್ಡ್ ಇದೆ. ಇದು ಯಾವ ರೌಡಿಗೆ ಸಂಬಂಧಪಟ್ಟಿದೆ ಅಂತ ಹೇಳ್ತೀರ'' ಎಂದು ಕೇಳಿದರು.

ಎಕ್ಸ್‌ಎಂ-01-ಎ.ಆರ್.

ಆ ಚೇಲಾಗಳು ಬೆಚ್ಚಿಬಿದ್ದರು. ಭಯ ಮತ್ತು ಗಾಬರಿಯಿಂದ ''ಸಾರ್... ಅಂಡರ್‌ಗ್ರೌಂಡ್ ದಾದ ಅಬ್ದುಲ್ ರೆಹಮಾನ್. ಎಕ್ಸ್‌ಎಂ ಅನ್ನೋದು ಬೆಂಗಳೂರಿನ ಉತ್ತರಭಾಗದ ಅಂಡರ್‌ಗ್ರೌಂಡ್ ಗ್ಯಾಂಗ್‌ನ ಕೋಡ್. ಈ ಅಬ್ದುಲ್ ರೆಹಮಾನ್ ನಮ್ಮದಾದ ರಜಾಕ್‌ನ ಪವರ್‌ಫುಲ್ ಶತ್ರು. ರಜಾಕ್‌ನನ್ನು ಮೇಲಕ್ಕೆ ಕಳಿಸಲು ಟ್ರೈ ಮಾಡಿದ್ದನು.

ಪೊಲೀಸರಿಗೆ ಈ ಮಾಹಿತಿ ತಿಳಿದ ಕೂಡಲೇ ಅವನ ಬೆನ್ನುಹತ್ತಿದರು. ತಮಿಳುನಾಡಿನ ಕಡೆ ಪ್ರಯಾಣ ಮಾಡುತ್ತಿದ್ದ ಅವನನ್ನು ಕೇವಲ ನಾಲ್ಕು ಗಂಟೆಗಳ ಅವಧಿಯಲ್ಲಿ ಹಿಡಿದು ತಂದಿದ್ದರು.

ಅವನು ಕೊಲೆಯಾಗಿರುವ ಜಾಗಕ್ಕೆ ಬಂದಿದ್ದ ಎಂಬುದಕ್ಕೆ ಗ್ರೀನ್ ಕಾರ್ಡ್ ಸಾಕ್ಷಿಯಾಗಿತ್ತು. ಮೊದಲು ಅವನ ಬೆರಳು ಗುರುತುಗಳನ್ನು ಪಡೆದು ಬೆರಳಚ್ಚು ತಜ್ಞರಿಗೆ ಕಳಿಸಲಾಯಿತು.

ವಿಚಾರಣೆ ಪ್ರಾರಂಭವಾಗಿದೆ.

ಅವನನ್ನು ಕುರ್ಚಿಯಲ್ಲಿ ಕೂರಿಸಿ ಅಲ್ಲಾಡದ ರೀತಿ ಹಗ್ಗದಿಂದ ಬಂಧಿಸಲಾಗಿದೆ.

ಪೊಲೀಸ್ ಅಧಿಕಾರಿ ಪೊನ್ನಪ್ಪ ಗಡುಸಾಗಿ ''ನೆನ್ನೆ ರಾತ್ರಿ ನೀನು ರಜಾಕ್ ಮನೆಗೆ ಬಂದಿದ್ದು ನಿಜ ತಾನೆ?''

ಅವನು ಕೂಡಲೇ ಉತ್ತರಿಸಲಿಲ್ಲ. ಮುಖದ ತುಂಬಾ ಗಂಟುಗಳಿವೆ. ಕಣ್ಣುಗಳು ರಕ್ತದಲ್ಲಿ ಅದ್ದಿ ತೆಗೆದಂತೆ ಕಾಣುತ್ತಿದೆ.

ಪೊನ್ನಪ್ಪ ಕೈ ಚಾಚಿದಳು.

ಲಾಠಿ ಅವನ ಕೈ ಸೇರಿತು.

ಲಾಠಿ ಈಗ ಗಿರ್ರನೆ ತಿರುಗುತ್ತಿದೆ.

ಅದರ ತುದಿ ಭಾಗ ಮುಷ್ಠಿ ಗಾತ್ರ ಇದೆ ಮತ್ತು ನಸುಕೆಂಪು ಬಣ್ಣದಿಂದ ಮಿನುಗುತ್ತಿದೆ. ಯಾವ ಕ್ಷಣಗಳಲ್ಲಿ ಬೇಕಾದರೂ ಲಾಠಿ ತನ್ನ ದೇಹದ ಮೇಲೆ ಬ್ರೇಕ್ ಡ್ಯಾನ್ಸ್ ಮಾಡಬಹುದು ಎಂದು ತಿಳಿದಿತ್ತು. ಇಂತಹ ಹೊಡೆತಗಳು ಅವನಿಗೆ ಮೊದಲ ಸಲ ಅಲ್ಲ. ಆದರೂ ಬಾಯಿ ತೆರೆದನು. ''ಹೌದು ಇಲ್ಲಿಗೆ ಬಂದಿದ್ದೆ.''

''ಕೊಲೆ ಮಾಡಲು ತಾನೆ?''

ಅವನಿಂದ ಉತ್ತರ ಬರಲಿಲ್ಲ.

ಕೆಂಪು ಬಣ್ಣದ ಶೂಗಳನ್ನು ಧರಿಸಿದ್ದ ಪೊಲೀಸ್ ಅಧಿಕಾರಿಯ ಕಾಲು ದಿಗ್ಗನೆ ಮೇಲೆದ್ದಿತು. ರೌಡಿಯ ಮುಖದ ಮೇಲೆ ಜಾಡಿಸಿತು. ಈ ರಭಸಕ್ಕೆ ಕುಳಿತಿದ್ದ ಕುರ್ಚಿಯ ಸಮೇತ ಹಿಂದಕ್ಕೆ ವಾಲಿಕೊಂಡು ದಬಾಲನೆ ಬಿದ್ದನು.

ಮುಖ ಬಗಾಲ್ ಆಗಿದೆ.

ಮೂಗಿನ ಸೆಲೆ ಒಡೆದಿದೆ.

ರಕ್ತ ಜಿನುಗುತ್ತಿದೆ.

ಪಿ.ಸಿ.ಗಳು ಅವನನ್ನು ಹಿಡಿದೆತ್ತಿ ಕೂರಿಸಿದರು. ಪೊನ್ನಪ್ಪ ''ಮಗನೆ... ಏ ಇದು ಮರ್ಡರ್ ಕೇಸು. ನನ್ನ ಜೊತೆ ಆಟ ಆಡಿದರೆ ಚಪಾತಿ ಲಟ್ಟಿಸಿಬಿಡ್ತೀನಿ'' ಎಂದು ಲಾಠಿ ತಿರುಗಿಸಿದನು.

''ಕೊಲೆ ಮಾಡಿದ್ದು ನೀನೇ ತಾನೆ?''

ಅವನು ತುಂಬಾ ಮೆಲ್ಲಗೆ ''ಕೊಲೆ ಮಾಡಬೇಕು ಅಂತ ಬಂದಿದ್ದು ನಿಜ. ಆದರೆ ನಾನು ಕೊಲೆ ಮಾಡಲಿಲ್ಲ'' ಎಂದನು.

''ರಜಾಕ್ ನೆರಳನ್ನೂ ಸಹ ನೀನು ದ್ವೇಷ ಮಾಡುತ್ತಿದ್ದೆ. ಕಲಾಸಿಪಾಳ್ಯಂ ಪವರ್‌ಫುಲ್ ರೋಲ್‌ಕಾಲ್ ಸೆಂಟರ್. ಪ್ರತಿದಿವಸ, ಅರವತ್ತರಿಂದ ಎಂಭತ್ತು ಸಾವಿರದತನಕ ವ್ಯಾಪಾರಿಗಳಿಂದ ವಸೂಲಿ ಆಗುತ್ತಿತ್ತು. ರಜಾಕ್ ಪವರ್‌ಫುಲ್ ಆಗಿದ್ದ. ಅವನಿಂದ ನಿನಗೆ ಎರಡು ಸಲ ತೊಂದರೆ ಆಗಿತ್ತು. ಈ ಎರಡು ಕಾರಣಗಳಿಂದ ನೀನು ಅವನನ್ನು ಕೊಲೆ ಮಾಡಿದ್ದೀಯ. ಇಲ್ಲದಿದ್ದರೆ ಇಲ್ಲಿಗೆ ಬರುತ್ತಿರಲಿಲ್ಲ.''

ಮೂಗಿನಿಂದ ರಕ್ತ ಜಿನುಗುತ್ತಾ ತುಟಿಗಳ ಮೇಲೆ ಬಿದ್ದು, ಕತ್ತು ಮತ್ತು ಎದೆ ಭಾಗವನ್ನು ತೋಯಿಸುತ್ತಿದೆ.

ರೌಡಿಸಂಗೆ ಇಳಿದ ಮೇಲೆ ಇಂತಹ ಹೊಡೆತ, ಅದರಿಂದಾಗುವ ನೋವು ಏನು ಕಡಿಮೆ ಅಲ್ಲ.

ಅವನು ನರಳುತ್ತಿದ್ದಾನೆ.

''ಸಾರ್... ಆ ನನ್ನ ಮಗನನ್ನ ಮಟಾಶ್ ಮಾಡ್ಬೇಕು ಅಂತ ಬಂದಿದ್ದೆ. ಆದರೆ ನಾನು ಮಾಡಬೇಕಾಗಿದ್ದ ಕೆಲಸವನ್ನು ಬೇರೆ ಯಾರೋ ಮಾಡಿದ್ದರು. ರಜಾಕ್‌ನಂತವನನ್ನು ಕೊಲೆ ಮಾಡೋದು ಸುಲಭ ಅಲ್ಲ. ಕಡಿಮೆ ಅಂದರೂ ನಾಲ್ಕಾರು ಮಂದಿ ಲಾಂಗ್ ಹಿಡಿದು ಬಂದಿರುತ್ತಾರೆ. ನನ್ನನ್ನು ಕಂಡರೆ ರಹಸ್ಯ ಬಹಿರಂಗವಾಗುತ್ತದೆ ಅಂತ ಕೊಲೆ ಮಾಡಬಹುದು ಅಂತ ಗಾಬರಿಯಾಗಿ ಓಡಿದೆ. ಆಗ ಹೊಸಿಲನ್ನು ಎಡವಿದ್ದರಿಂದ ಬ್ಯಾಲೆನ್ಸ್ ತಪ್ಪಿ ತೂರಾಡುತ್ತಾ ನೆಲದ ಮೇಲೆ ಬಿದ್ದೆ. ಆಗ ಜೇಬಲ್ಲಿದ್ದ ಗ್ರೀನ್ ಕಾರ್ಡ್ ಬಿದ್ದಿದೆ. ಇನ್ನೊಂದು ವಿಚಾರ ಹೇಳಬೇಕು.''

''ಹೂಂ... ಏನದು?''

''ನಾನು ಕೊಲೆ ಮಾಡಲು ಇಂತಹ ತರಕಲಾಂಡಿ ನೈಫ್ ಉಪಯೋಗಿಸಲ್ಲ. ರೌಡಿಗಳಲ್ಲಿ ಯಾರೂ ಈ ರೀತಿ ಸಿಂಪಲ್ ಆಗಿ ಕೊಲೆ ಮಾಡೋಲ್ಲ ರಾಜಕ್ ಮೇಲೆ ದ್ವೇಷ, ಕೋಪ ಇತ್ತು. ನಾನಾಗಿದ್ದರೆ ಲಾಂಗ್ ಉಪಯೋಗಿಸಿ ಅವನ ಬಾಡಿನಾ ಪೀಸ್, ಪೀಸ್ ಮಾಡುತ್ತಿದ್ದೆ.''

''ಅಂದರೆ ನೀನು ಕೊಲೆ ಮಾಡಿಲ್ವ?''

''ಖಂಡಿತಾ ಇಲ್ಲ, ಬೇಕಾದರೆ ಕೊಲೆಗೆ ಉಪಯೋಗಿಸಿರೋ ಆ ನೈಫ್ ಅನ್ನು ಪರೀಕ್ಷೆ ಮಾಡಿ ನೋಡಿ. ಅದರ ಮೇಲೆ ನನ್ನ ಬೆರಳು ಗುರುತು ಇಲ್ಲ.''

ಫಿಂಗರ್ ಪ್ರಿಂಟ್ ತಜ್ಞರಿಗೆ ಫೋನ್ ಮಾಡಿ ವಿಚಾರಿಸಿದಾಗ ಅಬ್ದುಲ್ ರೆಹಮಾನ್ ಕೊಲೆಗಾರ ಅಲ್ಲ ಎಂಬುದು ಖಚಿತವಾಯಿತು. ದಾಖಲೆಯ ವರದಿಯನ್ನು ಪೊಲೀಸ್ ಸ್ಟೇಷನ್‌ಗೆ ಕಳಿಸುವಂತೆ ಹೇಳಿದನು.

''ನೀನು ಇಲ್ಲಿಗೆ ಬಂದಿದ್ದು ಯಾವಾಗ?''

''ಹನ್ನೊಂದು ಗಂಟೆ ಆಗಿತ್ತು.''

ಡಾಕ್ಟರ್ ಅಭಿಪ್ರಾಯದ ಪ್ರಕಾರ ರಾತ್ರಿ ಒಂಭತ್ತರಿಂದ ಹತ್ತರ ಒಳಗೆ ಸಾವು ಸಂಭವಿಸಿದೆ. ಅಬ್ದುಲ್ ರೆಹಮಾನ್ ಕೊಲೆ ಮಾಡಿಲ್ಲ ಎಂಬುದು ಖಚಿತವಾಗಿದೆ. ಆದರೆ ನಿಜವಾದ ಕೊಲೆಗಾರ ಯಾರು ಎಂಬುದು ತಿಳಿಯುವತನಕ ಅವನನ್ನು ಪೊಲೀಸ್ ಕಸ್ಟಡಿಯಲ್ಲಿ ಇಡಲಾಯಿತು.

ಪೊನ್ನಪ್ಪ ಮತ್ತೊಮ್ಮೆ ಶವ ಇದ್ದ ಕೊಠಡಿಯನ್ನು ಎಚ್ಚರಿಕೆಯಿಂದ ನೋಡುತ್ತಿರುವಾಗ ನೆನಪಿಗೆ ಬಂದಿತು.

ಅದೇ ರಜಾಕ್ ಮೊಬೈಲ್...!

ಕುಡಿತದ ಅಮಲಿನಲ್ಲಿ ಎಲ್ಲೋ ಇಟ್ಟಿರಬೇಕು ಎಂದು ಅನಿಸಿದ್ದರಿಂದ ತುಂಬಾ ಎಚ್ಚರಿಕೆಯಿಂದ ಸೋಧನೆ ಮಾಡಿದನು. ಡಬ್ಬಲ್ ಕಾಟ್ ಬೆಡ್ ಮೇಲೆ ಅಲ್ಲಲ್ಲಿ ಹೂವಿನ ಎಸಳುಗಳು ಬಿದ್ದಿವೆ.

ಎರಡು ಬಳೆಯ ಚೂರುಗಳು ಬಿದ್ದಿವೆ. ಸೂಕ್ಷ್ಮವಾಗಿ ನೋಡಿದಾಗ, ದಿಂಬಿನಲ್ಲಿ ಎರಡು ಉದ್ದವಾದ ತಲೆಯ ಕೂದಲು ಬೇರೆ ಬೇರೆ ಕಡೆ ಅಂಟಿಕೊಂಡಿರೋದು ಕಂಡಿತು. ಕೂದಲನ್ನು ಪರೀಕ್ಷೆ ಮಾಡಲು ದಿಂಬನ್ನು ಎತ್ತಿಕೊಂಡಾಗ ಅದರ ಅಡಿಯಲ್ಲಿ ಮೊಬೈಲ್ ಇರೋದು ಕಂಡು ಬಂದಿತು.

ಅದನ್ನು ಎತ್ತಿಕೊಂಡು ಪರೀಕ್ಷೆ ಮಾಡಿದನು. ಕಾಲ್ ಡೀಟೈಲ್ಸ್ ಚೆಕ್ ಮಾಡಿದನು. 'ಮಾಧುರ್ಯ' ಎಂಬ ಹೆಸರಿದ್ದ ಮೊಬೈಲ್ ನಂಬರ್‌ಗೆ, ಎಂಟು ದಿನಗಳ ಅವಧಿಇಯಲ್ಲಿ ಹಲವಾರು ಸಲ ಫೋನ್ ಮಾಡಿದ್ದಾನೆ.

ಯಾರು ಈ ಮಾಧುರ್ಯ ...?

ರಜಾಕ್‌ನ ಚೇಲಾಗಳನ್ನು ಅರೆಸ್ಟ್ ಮಾಡಿ ವಿಚಾರಣೆ ಮಾಡಿದ್ದಾಗ ತಿಳಿದದ್ದೇನು?

ಇಬ್ಬರು ಹೆಂಡತಿಯರಿದ್ದರೂ ಸಹ, ಕೆಲವು ಹೆಂಗಸರ ಮೇಲೆ ಅತ್ಯಾಚಾರ ಮಾಡಿದ್ದರೂ ಸಹ, ಕ್ಯಾಬರೆ ಡ್ಯಾನ್ಸರ್‌ಗೆ ತುಂಬಾ ಹಣ ಕೊಟ್ಟು ಆಗಾಗ ಆಸೆ ತೀರಿಸಿಕೊಳ್ಳುತ್ತಿದ್ದರೂ ಸಹ, ಇತ್ತೀಚೆಗೆ ಒಬ್ಬಳು ಚೆಲುವೆಯ ಕಾರಣದಿಂದ ಹುಚ್ಚ ಆಗಿದ್ದನು. ಪಡ್ಡೆಯುವಕನ ರೀತಿ ಅವಳಿಗಾಗಿ ಹಂಬಲಿಸುತ್ತಾ ರೌಡಿಸಂ ಮರೆತಿದ್ದನು. ಅವಳು ಯಾವಾಗ ಎಲ್ಲೆಲ್ಲಿಗೆ ಹೋಗುತ್ತಾಳೆ ಎಂಬುದನ್ನು ತಿಳಿದು ನಾಯಿಯ ರೀತಿಯಲ್ಲಿ ಹಿಂಬಾಲಿಸುತ್ತಿದ್ದನು ಎಂದಿದ್ದರೇ ವಿನಹ ಆ ಹೆಣ್ಣು ಯಾರು, ಎಲ್ಲಿದ್ದಾಳೆ ಎಂಬುದು ಅವರಿಗೆ ಗೊತ್ತಿರಲಿಲ್ಲ.

ಫೋಟೋ ಗ್ಯಾಲರಿಗೆ ಹೋಗಿ ಚೆಕ್ ಮಾಡಿದನು. ಅಂದವಾದ ಹೆಂಗಸರನ್ನು ಮಜಾ ಮಾಡುತ್ತಿದ್ದನೇ ವಿನಹ ಫೋಟೋ ನೋಡುತ್ತಾ ಭಾವುಕನಾಗುತ್ತಿರಲಿಲ್ಲ. ಹಾಗಾಗಿ ಅವನ ಹೆಂಡತಿಯರ ಅಥವಾ ಹಣ ಕೊಟ್ಟು ಸುಖ ಅನುಭವಿಸುತ್ತಿದ್ದ ಕ್ಯಾಬರೆ ಡ್ಯಾನ್ಸರ್ ಫೋಟೋ ಇರಲಿಲ್ಲ.

ಆದರೆ ಬಲು ಅಪರೂಪದ ಚೆಲುವೆಯೊಬ್ಬಳ ಇಪ್ಪತ್ತು ಫೋಟೋಗಳಿವೆ!

ಅತ್ಯಾಕರ್ಷಕ ರೂಪವತಿ!

ಬೇರೆ ಬೇರೆ ಭಂಗಿಗಳಲ್ಲಿ ಅವಳು, ವಿಶೇಷವಾದ ಸೀರೆ ಮತ್ತು ಡ್ರೆಸ್‌ಗಳಲ್ಲಿದ್ದಾಗ ತೆಗೆದಿದ್ದ ಫೋಟೋಗಳು.

ಆ ಚೆಲುವೆ ಮಾಧುರ್ಯ !

ಅವಳೇನು ಇವನಿಗೆ ಪೋಸ್ ಕೊಟ್ಟು ಫೋಟೋ ತೆಗೆಸಿಕೊಂಡಿರಲಿಲ್ಲ. ಅವಳು ಆಗಾಗ ಮೊಬೈಲ್‌ನಿಂದ ಸೆಲ್ಫಿ ತೆಗೆದುಕೊಳ್ಳುತ್ತಿದ್ದಳು. ಆ ಮನೆಯ ಸಂಬಂಧಿಯೊಬ್ಬನಿಗೆ ಹಣದ ಆಸೆ ತೋರಿಸಿ, ಅವಳ ಫೋಟೋಗಳನ್ನು ತನ್ನ ಮೊಬೈಲ್‌ಗೆ ಕಳಿಸುವಂತೆ ಮಾಡಿದ್ದನು.

ಈ ಮಾಧುರ್ಯ ಯಾರು?

ಟಿ.ವಿ. ಚಾನಲ್‌ವೊಂದರ ಧಾರಾವಾಹಿಯಲ್ಲಿ ನಾಯಕಿಯ ಪಾತ್ರ ಮಾಡುತ್ತಿದ್ದವಳು ಮತ್ತು ಇತ್ತೀಚೆಗೆ ಸಿನಿಮಾಕ್ಕೆ ಸೆಲೆಕ್ಟ್ ಆಗಿದ್ದಳು. ಅವಳನ್ನು ಯಾವ ಸನ್ನಿವೇಶದಲ್ಲಿ ನೋಡಿದ್ದನೋ ಗೊತ್ತಿಲ್ಲ. ಅವಳ ಸೌಂದರ್ಯದಿಂದ ಹುಚ್ಚನಾಗಿ, ಅವಳನ್ನು ಕಾಡಿಸಿ ಪೀಡಿಸಿದ್ದನು.

ಆದರೆ ಅವಳು ಇಲ್ಲಿಗೆ ಬಂದಿದ್ದಳು ಎಂಬುದಕ್ಕೆ ಸಾಕ್ಷಿ, ಆಧಾರ ಇರಲಿಲ್ಲ. ತನ್ನ ಸೌಂದರ್ಯ ಮತ್ತು ಅಭಿನಯದಿಂದ ಕರ್ನಾಟಕದಾದ್ಯಂತ ಪ್ರಸಿದ್ಧಳಾಗಿರುವ ಮಾಧುರ್ಯಳನ್ನು ಅರೆಸ್ಟ್ ಮಾಡಿ ವಿಚಾರಣೆ ಮಾಡುವ ಹಾಗಿರಲಿಲ್ಲ.

ಪೊನ್ನಪ್ಪ ಅವಳಿಗೆ ಫೋನ್ ಮಾಡಿ ವಿಷಯ ತಿಳಿಸಿ, ಗೌಪ್ಯವಾಗಿ ಭೇಟಿ ಮಾಡುವಂತೆ ಸೂಚನೆ ನೀಡಿದನು. ಅವಳು ''ಆಗಲಿ ಸಾರ್ ಮೀಟ್ ಮಾಡ್ತೀನಿ. ಆದರೆ ನಾನು ಕೊಲೆ ಮಾಡಿಲ್ಲ' ಎಂದು ದೃಢವಾಗಿ ಹೇಳಿದಳು.

''ನೀನು ಅಪರಾಧ ಮಾಡಿದ್ದೀಯೋ ಇಲ್ಲವೋ ಎಂಬುದನ್ನು ನಾವು ಕಂಡು ಹಿಡಿಯುತ್ತೇವೆ. ಬಹಿರಂಗವಾಗಿ ನಿಮ್ಮ ಕೆರಿಯರ್‌ಗೆ ಡ್ಯಾಮೇಜ್ ಆಗಬಾರದು ಅಂತ ಸಲಹೆ ನೀಡುತ್ತಿದ್ದೇನೆ.''

●●●

ಪ್ರತ್ಯೇಕವಾದ ಸ್ಥಳದಲ್ಲಿ ಅವಳನ್ನು ವಿಚಾರಣೆಗೆ ಒಳಪಡಿಸಲಾಯಿತು. ಅದಕ್ಕೆ ಮೊದಲು ಅವಳ ಫಿಂಗರ್ ಪ್ರಿಂಟ್ ಪಡೆದು ತಜ್ಞರ ಪರಿಶೀಲನೆಗೆ ಕಳಿಸಲಾಯಿತು. ಆ ಕ್ಷಣಗಳಲ್ಲಿ ಅವಳು ''ನನ್ನನ್ನು ಆ ರೌಡಿ ತುಂಬಾ ಕಾಡಿಸುತ್ತಿದ್ದ. ಮದುವೆ ಆಗೋಣ ಅಂತ ಒತ್ತಾಯ ಮಾಡುತ್ತಿದ್ದ. ಪಾಗಲ್ ಪ್ರೇಮಿಯ ರೀತಿ ಪೀಡಿಸುತ್ತಿದ್ದ. ಇವನನ್ನು ಉಪಾಯವಾಗಿ ದೂರ ಮಾಡಿಕೊಳ್ಳಬೇಕು ಅಂತ ವಾಸನೆ ಮತ್ತು ರುಚಿ ಇಲ್ಲದ ವಿಷ ತೆಗೆದುಕೊಂಡು ಹೋಗಿದ್ದೆ.''

''ವಿಷ ಬೆರೆಸಿ ಕೊಲೆ ಮಾಡಿದ್ದೀರ?''

ಅವಳು ಗಂಭೀರವಾಗಿ ''ಶವದ ರಕ್ತದಲ್ಲಿ ವಿಷ ಬೆರೆತಿದೆ ಅಂತ ರಿಪೋರ್ಟ್ ಬಂದಿರುವುದೇ ಸಾರ್'' ಎಂದು ಕೇಳಿದಳು.

ಪೊನ್ನಪ್ಪ ತಡಬಡಿಸಿದನು.

''ಅವನನ್ನು ಮರುಳು ಮಾಡಲು ರೋಮ್ಯಾನ್ಸ್ ಮಾಡಿದೆ. ಅವನಿಗೆ ಒಲಿದವಳಂತೆ ನಟಿಸಿದೆ. ಆದರೆ ಆ ಸನ್ನಿವೇಶದಲ್ಲಿ ಲೈಟ್ ಆಫ್ ಆಯಿತು. ಯಾರೋ ದಡಬಡನೆ ಓಡಿ ಬಂದ ಶಬ್ದ ಕೇಳಿಸಿತು. ರಜಾಕ್ ಪ್ರಾಣಾಂತಿಕ ಯಾತನೆಯಿಂದ ಕಿರುಚಿಕೊಂಡನು. ನಾನು ಕತ್ತಲಲ್ಲಿ ಹಿಂದೆ ಸರಿಯುತ್ತಾ ಮರೆಯಾಗಿ ನಿಂತೆ. ಲೈಟ್ ಬೆಳಕು ಬಂದಾಗ ಡೆಡ್‌ಬಾಡಿ ಎದೆಯಲ್ಲಿ ಚಾಕು ಚುಚ್ಚಿಕೊಂಡಿತ್ತು. ಎದುರಿಗೆ ಮತ್ತೊಬ್ಬ ರೌಡಿ ನಿಂತಿದ್ದ. ರಜಾಕ್‌ನ ಹೋಲಿಕೆ ಅವನ ಮುಖದಲ್ಲಿತ್ತು. ನನಗೆ ಎಚ್ಚರಿಕೆ ನೀಡಿ ಅಲ್ಲಿಂದ ಹೊರಟು ಹೋದ.''

ಪೊಲೀಸರು ಚುರುಕಾದರು. ರಜಾಕ್ ಹೋಲಿಕೆ ಇರೋದು ಅವನ ತಮ್ಮ ರಫಿಕ್ ಎಂಬ ಸಾಮಾನ್ಯ ರೌಡಿಗೆ, ಪೊಲೀಸರು ಅವನನ್ನು ಅರೆಸ್ಟ್ ಮಾಡಿದರು. ರಜಾಕ್ ತನ್ನ ತಮ್ಮನ ಹೆಂಡತಿ ಮೇಲೆ ಸಹ ಹಲವಾರು ಸಲ ಅತ್ಯಾಚಾರ ಮಾಡಿದ್ದ. ಆ ಸೇಡನ್ನು ತೀರಿಸಿಕೊಳ್ಳಲು ಕೊಲೆ ಮಾಡಿದ್ದನು. ಕೊಲೆಗೆ ಉಪಯೋಗಿಸಿದ್ದ ಆಯುಧದ ಮೇಲೆ ಅವನ ಬೆರಳು ಗುರುತುಗಳು ಮೂಡಿರೋದು ವರದಿಯಿಂದ ತಿಳಿದು ಬಂದಿದೆ.

☯

## ಓದುಗರ ಗಮನಕ್ಕೆ

### ರಾಜಕೀಯ ಸುದ್ದಿಯೂ ಇರುತ್ತದೆ...

'ಪೊಲೀಸ್ ನ್ಯೂಸ್' ವಾರಪತ್ರಿಕೆಯಲ್ಲಿ ಬರೀ ಅಪರಾಧ ವರದಿಗಳು ಮಾತ್ರ ಬರುತ್ತದೆ ಅಂದುಕೊಳ್ಳಬೇಡಿ. ಬದಲಾದ ಕಾಲಮಾನದಲ್ಲಿ ಇನ್ನು ಮುಂದೆ ರಾಜಕೀಯ, ಭ್ರಷ್ಟಾಚಾರ, ಮುಚ್ಚಿ ಹೋಗಿರುವ 'ಕ್ರೈಂ' ಮುಂತಾದ ರಹಸ್ಯ ವರದಿಗಳನ್ನು ಬ್ಲಾಸ್ಟ್ ಮಾಡಲಿದ್ದೇವೆ. ನಿಮ್ಮ ಊರುಗಳಲ್ಲಿ ಇಂತಹ ಬ್ಲಾಸ್ಟ್ ಮಾಡುವಂತಹ ಸುದ್ದಿಗಳಿದ್ದರೆ ನಮಗೆ ಕಳುಹಿಸಿ ಕೊಡಿ. ನಿಮ್ಮ ಹೆಸರು, ವಿಳಾಸವನ್ನು ರಹಸ್ಯವಾಗಿಡುವ ಜವಾಬ್ದಾರಿ ನಮ್ಮದು. ನೀವು ಕಳುಹಿಸುವ ವರದಿಗೆ ದಾಖಲೆಗಳಿದ್ದರೆ ಒಳ್ಳೆಯದು. ಅಕಸ್ಮಾತ್ ದಾಖಲೆಗಳು ಇಲ್ಲದಿದ್ದಲ್ಲಿ, ನೀವು ಕಳುಹಿಸುವ ವರದಿಯಲ್ಲಿ ದಾಖಲೆಗಳು ಸಿಗುವ ಜಾಗವನ್ನು ನಮೂದಿಸಿದರೆ ಸಾಕು, ದಾಖಲೆ ಎತ್ತುವ ಜವಾಬ್ದಾರಿ ನಮ್ಮದು.

ನಮ್ಮ ವಿಳಾಸ :

8884452699 policenewsreporter@gmail.com ☎ 080-23588510

ನಂ. 165, 8ನೇ ಮುಖ್ಯರಸ್ತೆ, ಬಿಇಎಂಎಲ್ ಬಡಾವಣೆ, ಬಸವೇಶ್ವರನಗರ, ಬೆಂಗಳೂರು-560 079

# ದೇಶದಲ್ಲಿ ಕಾಂಗ್ರೆಸ್ ಪುನರುತ್ಥಾನ ಯಾವಾಗ?

ಬಿ.ಎಂ. ಲವಕುಮಾರ್



ಸುಮಾರು ಎಪ್ಪತ್ತು ವರ್ಷಗಳ ಕಾಲ ದೇಶವನ್ನು ಆಳಿದ ರಾಷ್ಟ್ರೀಯ ಪಕ್ಷ ಇವತ್ತು ಪಕ್ಷ ಸಂಘಟನೆ ವಿಚಾರದಲ್ಲಿ ನಿರ್ಧಿಷ್ಟ ತೀರ್ಮಾನಕ್ಕೆ ಬರಲಾಗದೆ ಒದ್ದಾಡುತ್ತಿರುವುದು ಗೋಚರಿಸುತ್ತಿದೆ. ಈಗಾಗಲೇ ಹಲವು ರಾಜ್ಯಗಳಲ್ಲಿ ಅಸ್ತಿತ್ವ ಕಳೆದುಕೊಂಡಿರುವ ಕಾಂಗ್ರೆಸ್ ಪುನರುತ್ಥಾನಗೊಳ್ಳುವುದು ಯಾವಾಗ ಎಂಬ ಪ್ರಶ್ನೆಗಳು ಹುಟ್ಟಿಕೊಳ್ಳಲಾರಂಭಿಸಿವೆ. ಎದುರಾಳಿಗಳನ್ನು ಬರೀ ಟೀಕೆ ಮಾಡಿದರೆ ಸಾಲದು ಪಕ್ಷವನ್ನು ಸಂಘಟಿಸುವ ಮೂಲಕ ಮತ್ತೆ ತಳಮಟ್ಟದಿಂದ ಮೇಲೆದ್ದು ಬರಬೇಕಾದ ಅನಿವಾರ್ಯತೆ ಎದುರಾಗಿದೆ.

ಕೆಲವು ದಿನಗಳ ಹಿಂದೆಯಷ್ಟೇ ಗುಜರಾತಿನ ಅಹಮದಾಬಾದ್‌ನಲ್ಲಿ ಎಐಸಿಸಿ ಮಹಾ ಅಧಿವೇಶನ ನಡೆಯಿತು ಎಂಬುದನ್ನು ಬಿಟ್ಟರೆ ಅಧಿವೇಶನದ ಬಳಿಕ ಪಕ್ಷದ ಕಡೆಯಿಂದ ನಾಯಕರು, ಕಾರ್ಯಕರ್ತರು ಉತ್ಸಾಹಗೊಂಡು ಪಕ್ಷ ಸಂಘಟನೆಗೆ ಮುಂದಾಗುವಂತಹ ಸಲಹೆ ಸೂಚನೆಗಳು ಬರಲಿಲ್ಲ, ಬದಲಿಗೆ ಎಚ್ಚರಿಕೆ ಸಂದೇಶಗಳು ರವಾನೆಗೊಂಡವಷ್ಟೆ. ಕಾರ್ಯಕರ್ತರೇ



ಪಕ್ಷದ ಆಸ್ತಿಯಾಗಿದ್ದು ಅದನ್ನು ಗಟ್ಟಿಗೊಳಿಸುವ ತೀರ್ಮಾನ ಅಧಿವೇಶನದಲ್ಲಿ ಮಾಡಿದಂತೆ ಕಂಡು ಬರಲಿಲ್ಲ.

ಮೊದಲಿನಿಂದ ಇಲ್ಲಿವರೆಗೆ ಕಾಂಗ್ರೆಸ್‌ನ ಹೈಕಮಾಂಡ್ ಎನ್ನುವುದು ಸೋನಿಯಾ ಗಾಂಧಿ, ರಾಹುಲ್ ಗಾಂಧಿ ಮತ್ತು ಪ್ರಿಯಾಂಕ ಗಾಂಧಿ ಎನ್ನುವಂತಾಗಿದೆ. ಪಕ್ಷದಲ್ಲಿ ಏನೇ ಸಭೆ, ಚರ್ಚೆ ಮಾಡಿದರೂ ಅಂತಿಮವಾಗಿ ತೀರ್ಮಾನ ತೆಗೆದುಕೊಳ್ಳುವವರು ಅವರೇ ಆಗಿದ್ದಾರೆ. ಜತೆಗೆ ರಾಷ್ಟ್ರಮಟ್ಟದಲ್ಲಿ ಪಕ್ಷದ ತುಂಬಾ ಹಿರಿಯ ನಾಯಕರೇ ತುಂಬಿ ಹೋಗಿದ್ದಾರೆ. ಮತ್ತು ಎಲ್ಲ ಜವಾಬ್ದಾರಿಗಳು ಅವರ ಬಳಿಯೇ ಇದೆ. ಹೀಗಾಗಿ ಅವರು ಕೇವಲ ಎಚ್ಚರಿಕೆ ಮತ್ತು ಸಲಹೆಗಳನ್ನಷ್ಟೆ ನೀಡಲು ಸೀಮಿತರಾಗುತ್ತಿರುವುದು ಪಕ್ಷ ಸಂಘಟನೆಗೆ ತೊಡಕಾಗುತ್ತಿದೆ. ಸುಮಾರು 64 ವರ್ಷಗಳ ಬಳಿಕ ಗುಜರಾತ್‌ನಲ್ಲಿ ನಡೆದ ಮಹಾ ಅಧಿವೇಶನ ಪಕ್ಷದ ಮುಂದಿನ ಪುನರುತ್ಥಾನಕ್ಕೆ ವೇದಿಕೆಯಾಗುತ್ತೆ ಎಂದು ನಂಬಲಾಗಿತ್ತು. ಆದರೆ ಅಂತಹ ಯಾವುದೇ ಪ್ರಮುಖ ನಿರ್ಧಾರಗಳು ಅಲ್ಲಿ ಆದಂತೆ ಕಾಣುತ್ತಿಲ್ಲ.

ಲೋಕಸಭೆ ಸೇರಿದಂತೆ ರಾಜ್ಯಗಳಲ್ಲಿ ನಡೆಯುತ್ತಿರುವ ವಿಧಾನಸಭಾ ಚುನಾವಣೆಗಳಲ್ಲಿ ಕಾಂಗ್ರೆಸ್ ಪಕ್ಷ ಸೋಲುಗಳನ್ನು ಕಾಣುತ್ತಿರುವುದಕ್ಕೆ ಕಾರ್ಯಕರ್ತರ ಪಡೆಯಿಲ್ಲದಿರುವುದೇ ಕಾರಣವಾಗುತ್ತಿದೆ. ತಳಮಟ್ಟದಲ್ಲಿ ಕೆಲಸ ಮಾಡುವ ನಿಷ್ಠಾವಂತ ಕಾರ್ಯಕರ್ತರು ಇದೀಗ ಬೇರೆ, ಬೇರೆ ಪಕ್ಷಗಳಲ್ಲಿ ಹಂಚಿಹೋಗಿದ್ದಾರೆ. ಕಾಂಗ್ರೆಸ್‌ನ ಕೆಲವೊಂದು ನಿಲುವುಗಳು ಕಾರ್ಯಕರ್ತರಲ್ಲಿ ನಿರಾಸಕ್ತಿ ತಂದಿದೆ. ಅದಕ್ಕಿಂತ ಹೆಚ್ಚಾಗಿ ಬಹುತೇಕ ರಾಜ್ಯಗಳಲ್ಲಿ ಯಾವ ಸ್ಥಳೀಯ ಪ್ರಾದೇಶಿಕ ಪಕ್ಷಗಳೊಂದಿಗೆ ಹೋರಾಟ ಮಾಡಿಕೊಂಡು ಬಂದಿದ್ದರೋ ಅವರ ಜತೆಯಲ್ಲಿ ಮೈತ್ರಿ ಮಾಡಿಕೊಂಡಿರುವ ಕಾರಣದಿಂದಾಗಿ ಕೆಲವು ತಳಮಟ್ಟದ ನಾಯಕರಿಗೆ ಅಸ್ಥಿತ್ವ ಇಲ್ಲದಂತಾಗಿದೆ.

ಪಕ್ಷದ ನಾಯಕತ್ವವನ್ನು ವಹಿಸಿಕೊಂಡು ಮುನ್ನಡೆಸಲು, ಇಡೀ ದೇಶ ಸುತ್ತಿ ಪಕ್ಷದ ಸಂಘಟನೆ ಮಾಡಲು ಬಹುತೇಕ ನಾಯಕರು ಮುಂದಾದಂತೆ ಕಾಣುತ್ತಿಲ್ಲ. ಸದ್ಯ ಮಲ್ಲಿಕಾರ್ಜುನ ಖರ್ಗೆ ಅವರು ಎಐಸಿಸಿ ಅಧ್ಯಕ್ಷ ಸ್ಥಾನ ವಹಿಸಿಕೊಂಡರೂ ಅವರ ಆಡಳಿತಾವಧಿಯಲ್ಲಿ ಹೇಳಿಕೊಳ್ಳುವ ಸಾಧನೆಯಾಗಿಲ್ಲ. ಹಲವು ಕಾರಣಗಳಿಂದ 2019ಕ್ಕೆ ಹೋಲಿಸಿದರೆ 2024ರಲ್ಲಿ ಕಾಂಗ್ರೆಸ್‌ಗೆ ಅಧಿಕ ಸ್ಥಾನಗಳು ಬಂದರೂ ಎಪ್ಪತ್ತು ವರ್ಷ ದೇಶವನ್ನಾಳಿದ ರಾಷ್ಟ್ರೀಯ ಪಕ್ಷ ನೂರರ ಗಡಿ ದಾಟಲು ಸಾಧ್ಯವಾಗಲಿಲ್ಲ, ಹಾಗೆಯೇ ಅದಾದ ನಂತರದ ವಿಧಾನಸಭಾ ಚುನಾವಣೆಗಳಲ್ಲಿ ಹೀನಾಯ ಸೋಲು ಅವರಿಗೆ ಮುಜುಗರ ತಂದಿದೆ.

ಈ ಸೋಲಿಗೆ ಆಯಾಯ ರಾಜ್ಯದ ನಾಯಕರನ್ನು ಹೊಣೆ ಮಾಡಿದನ್ನು ಬಿಟ್ಟರೆ ರಾಷ್ಟ್ರಮಟ್ಟದ ನಾಯಕರು ಯಾರೂ ಸೋಲಿನ ಹೊಣೆ ಹೊತ್ತುಕೊಳ್ಳಲಿಲ್ಲ. ಜತೆಗೆ ಸೋಲನ್ನು ಮತಯಂತ್ರದ ಮೇಲೆ ಹಾಕಿ ಕೈತೊಳೆದುಕೊಂಡು ಬಿಟ್ಟರು. ಇವತ್ತಿಗೂ ಕಾಂಗ್ರೆಸ್ ಮತಯಂತ್ರದ ಮೇಲೆ ರಾಷ್ಟ್ರಮಟ್ಟದಲ್ಲಿ ಅನುಮಾನ ವ್ಯಕ್ತಪಡಿಸುವುದು ಹಾಸ್ಯಾಸ್ಪದವಾಗಿ ಕಾಣಿಸುತ್ತಿದೆ. ಹಿರಿಯ ನಾಯಕರೆಲ್ಲರೂ ತಮ್ಮ, ತಮ್ಮ ಕ್ಷೇತ್ರಕ್ಕೆ ಹೋಗಿ ಒಂದಷ್ಟು ಸಮಯ ಕ್ಷೇತ್ರದಲ್ಲಿ ವಾಸ್ತವ್ಯ ಹೂಡಿ ಕಾರ್ಯಕರ್ತರನ್ನು ಒಟ್ಟಾಗಿ ಸೇರಿಸಿ ಅವರ ಕುಂದು ಕೊರತೆಗಳನ್ನು ಆಲಿಸಿ ಅದಕ್ಕೆ ಪರಿಹಾರ ರೂಪಿಸುವ ಕೆಲಸ ಮಾಡಿ ತಳಮಟ್ಟದಿಂದಲೇ ಕಾರ್ಯಕರ್ತರ ಪಡೆಯನ್ನು ಕಟ್ಟಬೇಕಾಗುತ್ತದೆ. ಆದರೆ ಆ ಕೆಲಸ ಆದಂತೆ ಕಾಣಿಸುತ್ತಿಲ್ಲ.

ಇನ್ನು 2024ರ ಲೋಕಸಭಾ ಚುನಾವಣೆಯ ಸೋಲಿನ ಬಳಿಕ ಇಂಡಿಕೂಟದ ಸಾರಥ್ಯ ವಹಿಸಿದ್ದ ಕಾಂಗ್ರೆಸ್ ನಾಯಕರು ಮೌನಕ್ಕೆ ಶರಣಾಗಿದ್ದಾರೆ. ಮತ್ತೆ ಸಭೆ ಕರೆದು ಮುಂದಿನ ತೀರ್ಮಾನಗಳ ಬಗ್ಗೆ ಚರ್ಚೆ ನಡೆಸಿಲ್ಲ. ಈಗಾಗಲೇ ಇಂಡಿಕೂಟದಲ್ಲಿರುವ ಪ್ರಾದೇಶಿಕ ಪಕ್ಷಗಳು ಕಾಂಗ್ರೆಸ್‌ನಿಂದ ಅಂತರ ಕಾಪಾಡಲು ಆರಂಭಿಸಿವೆ. ಮುಂಬರುವ ವಿಧಾನಸಭಾ ಚುನಾವಣೆಗೆ ಅವು ಸ್ವಂತ ಬಲದಲ್ಲಿ ಗೆಲುವು ಕಾಣುವ ಪ್ರಯತ್ನದಲ್ಲಿವೆ. ಹೀಗಾಗಿ ಅವು ಕಾಂಗ್ರೆಸ್ ಜತೆಗೆ ಚುನಾವಣೆಗೆ ಹೋಗಲು ತಯಾರಿದ್ದಂತೆ ಕಾಣಿಸುತ್ತಿಲ್ಲ.

ಶಿವಸೇನೆಯ ಉದ್ಧವ್ ಠಾಕ್ರೆ ಈಗಾಗಲೇ ಕಾಂಗ್ರೆಸ್ ನಾಯಕರ ವಿರುದ್ಧ ಹರಿಹಾಯ್ದಿದ್ದಾರೆ. ಮುಂದಿನ ದಿನಗಳಲ್ಲಿ ಇಂಡಿ ಕೂಟ ಸಂಘಟನೆಯಾಗುವುದಕ್ಕಿಂತ ಹೆಚ್ಚಾಗಿ ವಿಘಟನೆಗೊಳ್ಳುವ ಎಲ್ಲ ಲಕ್ಷಣಗಳು ಕಾಣಿಸುತ್ತಿವೆ. ಸದ್ಯಕ್ಕೆ ಕಾಂಗ್ರೆಸ್ ನಾಯಕರು ಗೊಂದಲದಲ್ಲಿದ್ದಾರೆ. ಮೈತ್ರಿ ಪಕ್ಷಗಳನ್ನು ತಮ್ಮೊಂದಿಗಿಟ್ಟುಕೊಳ್ಳುವತ್ತ ಗಮನಹರಿಸಲು ಮುಂದಾದರೆ ಇತ್ತ ಪಕ್ಷ ಸಂಘಟನೆ ಹಳ್ಳ ಹಿಡಿಯುತ್ತದೆ.



ಒಂದು ವೇಳೆ ಮೈತ್ರಿ ಪಕ್ಷಗಳನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೆ ಹೋದರೆ ದೆಹಲಿಯಲ್ಲಿ ಆದಂತೆ ಹೀನಾಯ ಸೋಲು ಮಾತ್ರವಲ್ಲದೆ, ಬಿಜೆಪಿಗೆ ಲಾಭವಾಗುತ್ತದೆ.

ಇಂಡಿ ಒಕ್ಕೂಟವನ್ನು ಕಟ್ಟಿಕೊಂಡು ಲೋಕಸಭಾ ಚುನಾವಣೆಗಳನ್ನು ಎದುರಿಸಿದಷ್ಟು ಸುಲಭ ಮುಂದೆ ಬರಲಿರುವ ವಿವಿಧ ರಾಜ್ಯಗಳ ವಿಧಾನಸಭಾ ಚುನಾವಣೆಯಿಲ್ಲ ಎಂಬುದು ಕಾಂಗ್ರೆಸ್ ನಾಯಕರಿಗೆ ಗೊತ್ತಾಗಿದೆ. ಹೀಗಾಗಿಯೇ ನಾಯಕರಿಗೆ ಆತಂಕ ಶುರುವಾಗಿದೆ. ಚುನಾವಣೆ ಎನ್ನುವುದು ಬರೀ ಭಾಷಣವಲ್ಲ ಅದರಾಚೆಗೆ ಬಹುದೊಡ್ಡ ಶ್ರಮವಿದೆ. ಪಕ್ಷದ ಕಾರ್ಯಕರ್ತರ ಪಡೆಯನ್ನು ಬೆಳೆಸುವುದು ಸುಲಭವೇನಲ್ಲ, ಆ ಕೆಲಸವನ್ನು ಕೇಂದ್ರದ ಕಾಂಗ್ರೆಸ್ ನಾಯಕರು ಮಾಡಲಿಲ್ಲ, ದಕ್ಷಿಣ ಭಾರತದಲ್ಲಿ ಕರ್ನಾಟಕ ಮತ್ತು ತೆಲಂಗಾಣದಲ್ಲಿ ಕಾಂಗ್ರೆಸ್ ಭದ್ರವಾಗಿದೆ. ಇಲ್ಲಿ ಕಾರ್ಯಕರ್ತರು ಮತ್ತು ನಾಯಕರ ದೊಡ್ಡದೊಂದು ಪಡೆಯಿದೆ. ಆದರೆ ಬೇರೆ ರಾಜ್ಯಗಳಲ್ಲಿ ಅಂತಹ ಯಾವ ವಾತಾವರಣವೂ ಇಲ್ಲದಾಗಿದೆ.

ಕಾಂಗ್ರೆಸ್ ನಾಯಕರು ಪ್ರಧಾನಿ ನರೇಂದ್ರ ಮೋದಿಯನ್ನು, ಆರ್‌ಎಸ್‌ಎಸ್‌ನ್ನು ಟೀಕಿಸುತ್ತಾ ಮತ್ತೊಂದು ಸಮುದಾಯವನ್ನು ಓಲೈಸಿಕೊಂಡು ಚುನಾವಣೆ ಗೆಲ್ಲಬಹುದು ಎಂಬ ಭ್ರಮೆಯಿಂದ ಹೊರ ಬರಬೇಕಾಗಿದೆ. ಕೇವಲ ವಿರೋಧಿಸಬೇಕೆನ್ನುವ ಕಾರಣಕ್ಕೆ ವಿರೋಧ ಮಾಡುವ ಬದಲು ಮಾಡುವ ಟೀಕೆಗಳಲ್ಲಿ ತೂಕವಿರುವಂತೆ ನೋಡಿಕೊಳ್ಳಬೇಕಾಗಿದೆ. ಅದಕ್ಕಿಂತ ಹೆಚ್ಚಾಗಿ ಹಿರಿಯ ನಾಯಕರು ತಮ್ಮ ಕುರ್ಚಿಗೆ ಅಂಟಿಕೊಂಡು ಕೂರುವ ಬದಲಿಗೆ ಅದನ್ನು ಯುವ ಪೀಳಿಗೆಗೆ ಬಿಟ್ಟು ಕೊಟ್ಟು ಆ ಮೂಲಕ ಸಲಹೆ ಸೂಚನೆಗಳನ್ನು ನೀಡುತ್ತಾ ಯುವ ನಾಯಕರನ್ನು ಬೆಳೆಸುವುದರೊಂದಿಗೆ ಪಕ್ಷ ಸಂಘಟನೆಯ ಜವಾಬ್ದಾರಿಗಳನ್ನು ನೀಡಬೇಕಾಗಿದೆ. ಇದನ್ನು ಕಾಂಗ್ರೆಸ್‌ನಲ್ಲಿ ನಿರೀಕ್ಷಿಸಲು ಸಾಧ್ಯನಾ ಕಾದು ನೋಡಬೇಕಿದೆ. ☯

## ಕಾರ್ಯಕರ್ತರ ಪಡೆ ಕಟ್ಟದಿದ್ದರೆ ಭವಿಷ್ಯವಿಲ್ಲ

2029ರ ಲೋಕಸಭಾ ಚುನಾವಣೆಗೆ ಮೊದಲು ದೇಶದಲ್ಲಿ ಸುಮಾರು 19 ರಾಜ್ಯಗಳಲ್ಲಿ ವಿಧಾನಸಭಾ ಚುನಾವಣೆಗಳು ನಡೆಯಲಿದ್ದು, ಈ ಚುನಾವಣೆಗಳಲ್ಲಿನ ಕಾಂಗ್ರೆಸ್ ಸಾಧನೆ ಮುಂದಿನ ಲೋಕಸಭಾ ಚುನಾವಣೆಗೆ ಮುನ್ನುಡಿಯಾಗಲಿದೆ. ಹೀಗಾಗಿಯೇ ವಿಧಾನಸಭಾ ಚುನಾವಣೆಗಳನ್ನು ಗೆಲ್ಲಲು ಬೇಕಾದ ತಂತ್ರಗಳನ್ನು ಕೈನಾಯಕರು ರಾಷ್ಟ್ರಮಟ್ಟದಲ್ಲಿ ಮಾಡುತ್ತಿರುವುದು ಈಗ ಕಂಡು ಬರುತ್ತಿದೆ. ಪಕ್ಷವನ್ನು ತಳಮಟ್ಟದಿಂದ ಸಂಘಟಿಸಲು ಕಾರ್ಯಕರ್ತರ ಪಡೆಯನ್ನು ಹುಟ್ಟುಹಾಕದೆ ಹೋದರೆ ಪಕ್ಷಕ್ಕೆ ಭವಿಷ್ಯವಿಲ್ಲ ಎನ್ನುವುದು ಅಷ್ಟೇ ಸತ್ಯ.

ಕಾಂಗ್ರೆಸ್ ಇವತ್ತು ಪಕ್ಷ ಸಂಘಟನೆ ವಿಚಾರದಲ್ಲಿ ಹೀನಾಯ ಸ್ಥಿತಿಯಲ್ಲಿದೆ. ರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲಿ ಪಕ್ಷಕ್ಕೆ ದೊಡ್ಡ ಮಟ್ಟದಲ್ಲಿ ನಾಯಕರಿದ್ದಾರೆ. ಆದರೆ ತಳಮಟ್ಟದಲ್ಲಿ ಕಾರ್ಯಕರ್ತರ ಕೊರತೆಯಿದೆ. ಹೀಗಾಗಿಯೇ ಸೋಲುಗಳು ಮೇಲಿಂದ ಮೇಲೆ ಪಕ್ಷವನ್ನು ಸುತ್ತಿಕೊಳ್ಳುತ್ತಿದೆ. ನಾಯಕರು ಕೇವಲ ಭಾಷಣಕ್ಕಷ್ಟೆ ಸೀಮಿತರಾಗುತ್ತಿದ್ದು, ಚುನಾವಣೆ ಸಮೀಪಿಸಿದಾಗ ಕ್ಷೇತ್ರಕ್ಕೆ ಆಗಮಿಸಿ ಸಭೆ, ಸಮಾವೇಶ ಮಾಡಿಬಿಟ್ಟರೆ ಮತಗಳು ಬೀಳಲ್ಲ, ಜತೆಗೆ ಉಚಿತ ಯೋಜನೆಗಳನ್ನು ಘೋಷಿಸಿದರೂ ದೆಹಲಿ ವಿಧಾನಸಭಾ ಚುನಾವಣೆಯಲ್ಲಿ ಒಂದೇ ಒಂದು ಸ್ಥಾನವನ್ನು ಗೆಲ್ಲಲು ಸಾಧ್ಯವಾಗಿಲ್ಲ, ಮುಂದಿನ ದಿನಗಳಲ್ಲಿ ಕೆಲವು ರಾಜ್ಯಗಳಲ್ಲಿ ಅಧಿಕಾರ ಹಿಡಿಯದೆ ಹೋದರೆ ಕಾಂಗ್ರೆಸ್‌ನ ರಾಜಕೀಯ ಭವಿಷ್ಯಕ್ಕೆ ಮಾರಕವಾಗಲಿದೆ.

ಕೆಲವು ರಾಜ್ಯಗಳಲ್ಲಿ ಪ್ರಾದೇಶಿಕ ಪಕ್ಷಗಳು ರಾಷ್ಟ್ರೀಯ ಪಕ್ಷ ಕಾಂಗ್ರೆಸ್ ಗಿಂತ ಸಾಮರ್ಥ್ಯ ಹೊಂದಿವೆ. ಹೀಗಾಗಿ ಅವು ಕಾಂಗ್ರೆಸ್ ಜತೆಗೆ ತಯಾರಿಲ್ಲ, ಅಂಥ ಪರಿಸ್ಥಿತಿಯನ್ನು ದೆಹಲಿ ವಿಧಾನಸಭಾ ಚುನಾವಣೆಯಲ್ಲಿ ಎಎಪಿ ಜತೆಗೆ ಎದುರಿಸುವಂತಾಯಿತು. ಮುಂದೆ ಪಶ್ಚಿಮ ಬಂಗಾಳದಲ್ಲಿಯೂ ಇದೇ ಆಗಲಿದೆ. ತೃಣಮೂಲ ಕಾಂಗ್ರೆಸ್ ಅಲ್ಲಿ ಪ್ರಾಬಲ್ಯ ಸಾಧಿಸಿದ್ದು, ಮಮತಾ ಬ್ಯಾನರ್ಜಿ ಕಾಂಗ್ರೆಸ್‌ನ್ನು ಹತ್ತಿರಕ್ಕೆ ಬಿಟ್ಟುಕೊಳ್ಳುವ ಲಕ್ಷಣಗಳು ಕಾಣಿಸುತ್ತಿಲ್ಲ, ತಮಿಳುನಾಡಿನಲ್ಲಿಯೂ ಇದೇ ಪರಿಸ್ಥಿತಿ ಮುಂದುವರೆದರೂ ಅಚ್ಚರಿಯಿಲ್ಲ, ಹೀಗಾಗಿಯೇ ತಮ್ಮ ಐಎನ್‌ಡಿಐಎ ಸದಸ್ಯ ಪಕ್ಷಗಳ ನಾಯಕರನ್ನು ವಿಧಾನಸಭಾ ಚುನಾವಣೆಯಲ್ಲಿ ಸಂಪೂರ್ಣ ನಂಬುವ ಪರಿಸ್ಥಿತಿಯಲ್ಲಿ ಕಾಂಗ್ರೆಸ್ ಇಲ್ಲದಂತಾಗಿದೆ.

ಕಾಂಗ್ರೆಸ್‌ನಲ್ಲಿ ನಾಯಕರ ಪಡೆ ಮಾತ್ರವಿದ್ದು ಕಾರ್ಯಕರ್ತರ ಪಡೆಯಿಲ್ಲ ಎಂಬ ಆರೋಪವಿದೆ. ಜತೆಗೆ ಬಹುತೇಕ ನಾಯಕರಲ್ಲಿ ತಳಮಟ್ಟಕ್ಕಿಳಿದು ಕಾರ್ಯಕರ್ತರನ್ನು ಭೇಟಿ ಮಾಡಿ ಪಕ್ಷ ಸಂಘಟನೆ ಮಾಡುವ ಸಾಮರ್ಥ್ಯವಿಲ್ಲ, ಅವರೇನಿದ್ದರೂ ಮಾರುದ್ದ ಭಾಷಣ, ಆರೋಪ ಮಾಡುವುದಕ್ಕೆ ಸೀಮಿತರಾಗಿದ್ದಾರೆ. ಅದನ್ನು ಮೀರಿ ಜನತೆಯೊಂದಿಗೆ ಬೆರೆತು ಪಕ್ಷ ಸಂಘಟನೆ ಮಾಡಿ ಚುನಾವಣೆಗೆ ತಯಾರಾಗುವ ಸಾಹಸಕ್ಕೆ ಮುಂದಾದರೆ ಮಾತ್ರ ಉಳಿಗಾಲ. ☯



# ರಾಜ್ಯದಲ್ಲೇ ಮೊದಲು ಎಐ ಕ್ಯಾಮೆರಾ ಕಣ್ಗಾವಲು ಅಳವಡಿಸಿದ ವಾರದಲ್ಲಿ ಮೂರು ಪ್ರಕರಣ ಪತ್ತೆ

ಕರುನಾಡನ್ನೇ ಬೆಚ್ಚಿಬೀಳಿಸಿದ ಸಿನಿಮೀಯಾ ಮಾದರಿಯಲ್ಲಿ ಹಾಡುಹಗಲೇ ಫೈರಿಂಗ್ ಮಾಡಿ ಎಟಿಎಂ ಹಣ ದರೋಡೆ ಪ್ರಕರಣದಿಂದ ಎಚ್ಚೆತ್ತುಕೊಂಡಿರುವ ಬೀದರ ಜಿಲ್ಲಾ ಪೊಲೀಸ್ ಇಲಾಖೆ ತೆಲಂಗಾಣ ಮತ್ತು ಮಹಾರಾಷ್ಟ್ರ ರಾಜ್ಯಗಳ ಹೊಂದಿಕೊಂಡಿರುವ ಬೀದರ ಜಿಲ್ಲೆಯ ನಾಗರೀಕರ ಸುರಕ್ಷತೆ ಮತ್ತು ಕಾನೂನು ಸುವ್ಯವಸ್ಥೆ ಬಲಪಡಿಸುವ ಮಹತ್ವದ ಹೆಜ್ಜೆಯನ್ನಿರಿಸಿದೆ.

ಅಪರಾಧಿಗಳ ಮೇಲೆ ನಿಗಾ ಇಡಲು ಬೀದರ ನಗರ ಸೇರಿದಂತೆ ಜಿಲ್ಲೆಯ ಗಡಿರೇಖೆಯಲ್ಲಿ ಎಎನ್ ಪಿಆರ್ ಮತ್ತು ಎಫ್‌ಆರ್ ಮಾದರಿಯ ಕ್ಯಾಮೆರಾಗಳನ್ನು ಅಳವಡಿಸಿದ್ದು, ಅತ್ಯಾಧುನಿಕ ವ್ಯವಸ್ಥೆ ಹೊಂದಿರುವ ರಾಜ್ಯದ ಮೊದಲು ಜಿಲ್ಲೆ ಬೀದರ ಆಗಿದೆ.








ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ ಮತ್ತು ಬೀದರ ಜಿಲ್ಲೆಯ ಉಸ್ತುವಾರಿ ಸಚಿವರಾದ ಈಶ್ವರ ಖಂಡ್ರೆ ಸೇರಿ ಒಟ್ಟು 2 ಕೋಟಿ ರೂಪಾಯಿ ಅನುದಾನ ವೆಚ್ಚದಲ್ಲಿ ಎಐ ಕೃತಕ ಬುದ್ಧಿಮತೆ ತಂತ್ರಜ್ಞಾನ ಆಧಾರಿತ ಎಎನ್‌ಪಿಆರ್ ಸ್ವಯಂ ಚಾಲಿತ ನಂಬರ್ ಪ್ಲೇಟ್ ಗುರುತಿಸುವಿಕೆ 20 ಸಿಸಿ ಕ್ಯಾಮೆರಾ ಎಫ್‌ಆರ್ ಮಾದರಿಯ 16 ಸಿಸಿ ಕ್ಯಾಮೆರಾ ಮುಖ ಗುರುತಿಸುವುದು ಸೇರಿ ಒಟ್ಟು 36 ಕ್ಯಾಮೆರಾಗಳನ್ನು ಅಳವಡಿಸಲಾಗಿದೆ. ಇವುಗಳ ನಿಯಂತ್ರಣಕ್ಕಾಗಿ ಪೊಲೀಸ್ ವರಿಷ್ಠಾಧಿಕಾರಿಗಳು ಕಚೇರಿಯಲ್ಲಿ ಸಿಸಿಟಿವಿ ಕಮಾಂಡ್ ಮತ್ತು ನಿಯಂತ್ರಣ ಕೇಂದ್ರ ಸ್ಥಾಪಿಸಲಾಗಿದ್ದು, ಇದನ್ನು ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಅರಣ್ಯ ಮಂತ್ರಿ ಈಶ್ವರ ಖಂಡ್ರೆಯವರು ಉದ್ಘಾಟಿಸಿದರು.

ಹಾಡುಹಗಲಲ್ಲೇ ನಗರದ ಪ್ರದೇಶವಾದ ಎಸ್‌ಬಿಐ ಬ್ಯಾಂಕ್ ಎದುರು 16-1-2025ರಂದು ಇಬ್ಬರು ದರೋಡೆಕೋರರು ಎಟಿಎಂ ಸಿಬ್ಬಂದಿಯನ್ನು ಗುಂಡಿಕ್ಕಿ ಒಬ್ಬನನ್ನು ಕೊಂದು 86 ಲಕ್ಷ ರೂಪಾಯಿ ಪೆಟ್ಟಿಗೆ ಸಮೇತ ದೋಚಿ ಪರಾರಿಯಾಗಿದ್ದರು. ಈ ದುಷ್ಕೃತ್ಯ ಗಡಿನಾಡಿನಲ್ಲಿ ಕಾನೂನು ಸುವ್ಯವಸ್ಥೆ ಬಗ್ಗೆ ಪ್ರಶ್ನಿಸುವಂತೆ ಮಾಡಿತ್ತು. ಬೀದರ ಮಹಾರಾಷ್ಟ್ರ ಮತ್ತು ಬೀದರ ತೆಲಂಗಾಣ ಗಡಿ ಹೊಂದಿಕೊಂಡಿರುವ ಬೀದರ ಜಿಲ್ಲೆಯಾದ ಹಿನ್ನೆಲೆಯಲ್ಲಿ ದುಷ್ಕೃತ್ಯಗಳನ್ನು ಸುಲಭವಾಗಿ ನಡೆಸಲು ಮಾರ್ಗವಾಗುತ್ತಿದೆ ಎಂಬ ಆತಂಕ ಹೆಚ್ಚಾಗಿತ್ತು.



ಇದನ್ನು ಗಂಭೀರವಾಗಿ ಪರಿಗಣಿಸಿದ ಉಸ್ತುವಾರಿ ಸಚಿವ ಈಶ್ವರ ಖಂಡ್ರೆಯವರು ಜಿಲ್ಲೆಯಲ್ಲಿ ಕಾನೂನು ಸುವ್ಯವಸ್ಥೆ ಉತ್ತಮಗೊಳಿಸಲು ಪೊಲೀಸ್ ಇಲಾಖೆಗೆ ನಿರ್ದೇಶನ ನೀಡಿದರು. ಅದರಂತೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪ್ರದೀಪ್ ಗುಂಟಿ ಹಾಗೂ ಹೆಚ್ಚುವರಿ ಎಸ್ಪಿ ಚಂದ್ರಕಾಂತ್ ಪೂಜಾರಿರವರುಗಳು ಸುಧಾರಿತ ಕ್ರಮಗಳಿಗೆ ಮುಂದಾಗಿದ್ದಾರೆ. ದೇಶ ವಿದೇಶದ ಅತ್ಯಾಧುನಿಕ ತಂತ್ರಜ್ಞಾನವುಳ್ಳ ಕ್ಯಾಮೆರಾಗಳ ಅಧ್ಯಯನ ನಡೆಸಿದ್ದು, ಹುಬ್ಬಳ್ಳಿ ಮೂಲದ ಧಾವಾ ಕಂಪನಿ ಮೂಲಕ ಸಿಸಿಟಿವಿ ಕಮಾಂಡ್ ಕೇಂದ್ರ ಸ್ಥಾಪಿಸಲಾಗಿದೆ.



ಬೀದರ ನಗರದ 11 ಪ್ರಮುಖ ವೃತ್ತ ಮತ್ತು ಮಹಾರಾಷ್ಟ್ರ ಮತ್ತು ತೆಲಂಗಾಣ ಐದು ಗಡಿರೇಖೆಗಳಲ್ಲಿ ಎಎನ್‌ಪಿಆರ್ ಹಾಗೂ ಎಫ್‌ಆಫ್ ಮಾದರಿಯ ಒಟ್ಟು 36 ಸಿಸಿ ಕ್ಯಾಮೆರಾಗಳನ್ನು ಅಳವಡಿಸಲಾಗಿದೆ. ಮೊದಲ ಹಂತದ ಯೋಜನೆ ಯಶಸ್ವಿಯಾಗಿದ್ದು, ಬರುವ ದಿನಗಳಲ್ಲಿ ಜಿಲ್ಲೆಯ ತಾಲ್ಲೂಕುಗಳಾದ ಹುಮನಾಬಾದ, ಭಾಲ್ಕಿ ಮತ್ತು ಬಸವಕಲ್ಯಾಣ ಮತ್ತು ಬೀದರ ನಗರದ ಸಂಚಾರಿ ವ್ಯವಸ್ಥೆ ಸುಧಾರಣೆಗೆ ಹೆಚ್ಚುವರಿ ಕ್ಯಾಮರಾಗಳನ್ನು ಅಳವಡಿಸಲು ಯೋಜನೆ ತಯಾರಿಸಲಾಗುತ್ತಿದೆ.

ಸಾರ್ವಜನಿಕರ ಭದ್ರತೆ ಸುರಕ್ಷತೆ ಕಾನೂನು ಸುವ್ಯವಸ್ಥೆ ಕಾಪಾಡಲು ಅಪರಾಧ ಪ್ರಕರಣಗಳಲ್ಲಿ ತನಿಖೆ ಮತ್ತು ಅಪರಾಧಿಗಳ ಮೇಲೆ ನಿಗಾ ಇಡಲು ಎಐಸಿಸಿ ಟಿವಿ ಮಹತ್ವದ ಮಾಹಿತಿ ಸುಳಿವು ನೀಡುವ ತಾಂತ್ರಿಕ ಅಂಶವಾಗಿದ್ದು, ತಾಂತ್ರಿಕ ಕಾಲಮಾನದಲ್ಲಿ ಜಿಲ್ಲೆಯಲ್ಲಿ ಸುರಕ್ಷಾ ಕಾನೂನು ಸೇಫ್ಟಿ ಆಕ್ಟ್ ಪರಿಣಾಮಕಾರಿಯಾಗಿ ಬಳಸಲು ಈ ಕೇಂದ್ರ ಸಹಕಾರಿಯಾಗಲಿದೆ. ಈ ಕಮಾಂಡ್‌ನಲ್ಲಿ ಎಂಒಬಿ, ರೌಡಿ ಶೀಟರ್‌ಗಳ ಭಾವಚಿತ್ರ ಸಮೇತ ಸ್ವವಿವರಗಳನ್ನು ಅಪ್‌ಲೋಡ್ ಮಾಡಲಾಗಿದೆ. ಈ ಕ್ಯಾಮರಾಗಳು ಅವರ ಚಲನವಲನಗಳ ಮೇಲೆ ನಿಗಾ ಇಡುವುದು ವಿಶೇಷ. ಯಾವ ಜಾಗ ಮತ್ತು ಯಾವ ಸಮಯದಲ್ಲಿ ಸುತ್ತಾಡಿದ್ದಾರೆ ಎಂಬುದನ್ನು ಅಲರ್ಟ್ ಮೂಲಕ ತಿಳಿಸುತ್ತದೆ. ಮುಖ ಗುರುತಿಸುವಿಕೆ, ವಾಹನಗಳ ನಂಬರ್ ಮತ್ತು ಕಲರ್‌ಗಳನ್ನು ಸಹ ಗುರುತಿಸುತ್ತದೆ. ಈ ಕ್ಯಾಮೆರಾಗಳನ್ನು ಅಳವಡಿಸಿದ ವಾರದಲ್ಲಿ ಜಿಲ್ಲೆಯಲ್ಲಿ ಮೂರು ಪ್ರಕರಣಗಳನ್ನು ಪತ್ತೆಯಾಗಿವೆ ಎಂದು ಪೊಲೀಸ್ ಮೂಲಗಳಿಂದ ತಿಳಿದು ಬಂದಿದೆ.

-ವೀರಶೆಟ್ಟಿ ಕುಂಬಾರ

# ಪ್ರೀತಿಸಿ ಮದುವೆಯಾದವರ ಜಗಳ; ಗಂಡನಿಗೆ ಕಟ್ಟಿದಳು ಚಟ್ಟ!



ಕೊಲೆಯಾದ ಶ್ರೀಧರ

ಬೀದರ ಜಿಲ್ಲೆಯ ಔರಾದ ತಾಲ್ಲೂಕಿನ ಬಾಚೇಪಳ್ಳಿ ಗ್ರಾಮದ ಶಿವರಾಜ-ಶೋಭಾವತಿ ದಂಪತಿಗಳಿಗೆ ಗಂಡಪ್ಪಾ, ರವಿ ಮತ್ತು ಶ್ರೀಧರ ಎಂಬ ಮೂರು ಜನ ಗಂಡು ಮಕ್ಕಳಿದ್ದು, ಎಲ್ಲರೂ ಮದುವೆಯಾಗಿ ಬೇರೆಯಾಗಿ ವಾಸ ಮಾಡುತ್ತಿದ್ದು, ವೃದ್ಧ ಜೀವಿಗಳಾದ ಶಿವರಾಜ, ಶೋಭಾವತಿಯು ಒಂದು ಮನೆ ಮಾಡಿಕೊಂಡು ವಾಸಿಸುತ್ತಿದ್ದರು. ಇವರ ಮೂರನೆಯ ಮಗ ಶ್ರೀಧರ ಹೆಂಡತಿ, ಅತ್ತೆ, ಮಾವನಿಂದ ಕೊಲೆಯಾದ ನತದೃಷ್ಟ.

ಶ್ರೀಧರ ಕಳೆದ 5-6 ವರ್ಷಗಳ ಹಿಂದೆ ಲಾದಾ ಗ್ರಾಮದ ಶಶಿಕಾಂತ-ವಿಜಯಲಕ್ಷ್ಮಿ ಎಂಬ ದಂಪತಿಗಳ ಮಗಳಾದ ಸವಿತಾಳನ್ನು ಪ್ರೀತಿಸಿ ಮದುವೆಯಾದರು. ಶ್ರೀಧರ, ಸವಿತಾ ದಂಪತಿಗಳಿಗೆ ಸಾತ್ವಿಕ (5), ಆಶಯ (3) ಎಂಬ ಇಬ್ಬರು ಮುದ್ದಾದ ಗಂಡು ಮಕ್ಕಳಾದರು. ಶ್ರೀಧರ ಚಾಲಕ ಕೆಲಸ ಮಾಡುತ್ತಿದ್ದು, ಆಗಾಗ ಎಣ್ಣೆ ಹಾಕುವ ಚಟ ಹೊಂದಿದನು. ಸವಿತಾ ಕಳೆದ 2-3 ತಿಂಗಳಿಂದ ಗ್ರಾಮದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಹೆಡ್ ಕುಕ್ಕರ್ ಆಗಿ ಕೆಲಸ ಮಾಡತೊಡಗಿದಳು.



ಸಿಪಿಐ ರಘುವೀರ್ ಸಿಂಗ್ ಠಾಕೂರ್




ಪಿಎಸ್‌ಐ ನಂದಕುಮಾರ್

ಸವಿತಾ ಮತ್ತು ಶ್ರೀಧರ ದಂಪತಿಗಳ ಮಧ್ಯೆ ಅನೇಕ ಬಾರಿ ಜಗಳವಾಗಿವೆ. ಪತಿ ಶ್ರೀಧರ ಕೊಲೆ ಮಾಡುವ ಉದ್ದೇಶದಿಂದ ಕೈಕಾಲು ಕಟ್ಟಿ ಹಾಕಿ ತಲೆಗೆ ಹೊಡೆದಿದ್ದರಿಂದ ಪತಿ ಶ್ರೀಧರ ಮೃತಪಟ್ಟಿದ್ದಾನೆ.

ಮೃತನ ತಂದೆ ಶಿವರಾಜ ಜೋಜನೆ ಅವರು ಸಂತಪೂರ ಪೊಲೀಸ್ ಠಾಣೆಗೆ ಪತ್ನಿ ಸವಿತಾ, ಅತ್ತೆ ವಿಜಯಲಕ್ಷ್ಮಿ ಮತ್ತು ಶಶಿಕಾಂತ ಸೇರಿ ತನ್ನ ಮಗನಿಗೆ ಕೊಲೆ ಮಾಡಿದ್ದಾರೆ ಎಂದು ದೂರು ನೀಡಿದರು.

ಪಿಎಸ್‌ಐ ನಂದಕುಮಾರ್‌ರವರು ಠಾಣೆಯ ಅಪರಾಧ ಸಂಖ್ಯೆ 27/2025 ಕಲಂ 103, 118(1) ಜೊತೆ 3(5) ಬಿಎನ್‌ಎಸ್ ಪ್ರಕಾರ ಕೇಸು ದಾಖಲಿಸಿಕೊಂಡು ಮೇಲಾಧಿಕಾರಿಗಳಿಗೆ ಮಾಹಿತಿ ನೀಡಿದರು.



ಆರೋಪಿಗಳಾದ ಸವಿತಾ, ಶಶಿಕಾಂತ ಹಾಗೂ ವಿಜಯಲಕ್ಷ್ಮಿ

ಘಟನೆ ಸ್ಥಳಕ್ಕೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪ್ರದೀಪ್ ಗುಂಟೆ, ಹೆಚ್ಚುವರಿ ಎಸ್ಪಿ ಚಂದ್ರಕಾಂತ ಪೂಜಾರಿ, ಡಿವೈಎಸ್ಪಿ ಶಿವಾನಂದ ಪವಾಡಶೆಟ್ಟಿ ಭೇಟಿ ನೀಡಿ ಸೂಕ್ತ ಮಾರ್ಗದರ್ಶನ ನೀಡಿದರು.

ಸಿಪಿಐ ರಘುವೀರ್ ಸಿಂಗ್ ಠಾಕೂರ್‌ರವರು ಮುಂದಿನ ತನಿಖೆ ಕೈಗೊಂಡು ಆರೋಪಿಗಳಾದ ಪತ್ನಿ ಸವಿತಾ, ಮಾವ ಶಶಿಕಾಂತ, ಅತ್ತೆ ವಿಜಯಲಕ್ಷ್ಮಿಯನ್ನು ಬಂಧಿಸಿ ಮುಂದಿನ ತನಿಖೆ ಕೈಗೊಂಡಿದ್ದಾರೆ.

-ವೀರಶೆಟ್ಟಿ ಕುಂಬಾರ

# ಪಾತಕ ಪ್ರಪಂಚ

# ನಾನು ಪೊಲೀಸ್ ಆಫೀಸರ್

ಮನಸ್ಸು ಎಂಬುದು ತುಂಬಾ ಸೂಕ್ಷ್ಮ. ನೂರಕ್ಕೆ ಎಂಭತ್ತು ಭಾಗ ದುರ್ಬಲ ಮನಸ್ಸಿನವರೆ ಇದ್ದಾರೆ ಎಂದು ಮನಃಶಾಸ್ತ್ರಜ್ಞರು ಅಭಿಪ್ರಾಯ ಪಡುತ್ತಾರೆ.

ಜಾಗೃತ ಮನಸ್ಸು, ಸುಪ್ತ ಮನಸ್ಸು, ವ್ಯಕ್ತಿ ಯಾರೇ ಆಗಿರಲಿ ಅವನಲ್ಲಿ ಈ ಎರಡು ಮನಸ್ಸುಗಳು ಕ್ರಿಯಾಶೀಲ ವಾಗಿರುತ್ತದೆ.

ವ್ಯತ್ಯಾಸ ಏನು? ಜಾಗೃತ ಮನಸ್ಸಿನ ಚಟುವಟಿಕೆಗಳು ನಮಗೆ ಗೊತ್ತಿರುತ್ತದೆ. ನಮ್ಮ ಅರಿವಿಗೆ ಬರುತ್ತದೆ. ಆದರೆ ಸುಪ್ತಮನಸ್ಸು ಅಂತರ್ಯದಲ್ಲಿ ಹೆಪ್ಪುಗಟ್ಟಿರುತ್ತದೆ.

ನಾವು ದುರ್ಬಲರಾದರೆ ಸುಪ್ತಮನಸ್ಸಿನ ಪ್ರಭಾವ ಮತ್ತು ಪ್ರಚೋದನೆಗೆ ಬೇಗ ಒಳಗಾಗುತ್ತೇವೆ ಎಂಬುದು ನಿಜ.

ಈಡೇರಲಾರದ ಆಸೆ, ಬಯಕೆಗಳು ಮತ್ತು ಹತಾಶ ಮನೋಭಾವನೆಗಳನ್ನು ನಿಯಂತ್ರಿಸಲಾರದೆ ಅಸಹಾಯಕರಾದಾಗ, ಇವೆಲ್ಲವೂ ಸುಪ್ತಮನಸ್ಸಿನಲ್ಲಿ ಹಂತ, ಹಂತವಾಗಿ ಘನೀಭೂತವಾಗುತ್ತಾ ಹೆಪ್ಪುಗಟ್ಟುತ್ತಾ ಗಟ್ಟಿ ಆಗುತ್ತಿರುತ್ತದೆ.

ಯಾವುದೋ ಒಂದು ಸನ್ನಿವೇಶದಲ್ಲಿ ಸುಪ್ತಮನಸ್ಸು ಒಮ್ಮೆಲೇ ಸ್ಫೋಟಗೊಳ್ಳುತ್ತವೆ. ಈಡೇರಲಾರದ ಆಸೆ, ಅತೃಪ್ತ ಬಯಕೆಗಳು ಪ್ರಚೋದನೆಗೆ ಒಳಗಾಗಿ, ವಿಲಕ್ಷಣತೆ ಉಂಟಾಗುತ್ತದೆ.

ಇದರ ಪರಿಣಾಮ ಏನು?

ಆ ವ್ಯಕ್ತಿ ಪ್ರಭಾವಕ್ಕೆ ಒಳಗಾಗುತ್ತಾನೆ.

ಸುಪ್ತಮನಸ್ಸಿನ ಪ್ರಚೋದನೆಗೆ ಒಳಗಾಗಿ ಅವನು ತನ್ನ ಅತೃಪ್ತ ಮತ್ತು ಗೌಪ್ಯವಾಗಿದ್ದ ಆಸೆ ಮತ್ತು ವಿಲಕ್ಷಣ ಬಯಕೆ ಈಡೇರಿಸಿಕೊಳ್ಳಲು ಏನು ಬೇಕಾದರೂ ಮಾಡುತ್ತಾನೆ.

ವಿಲಕ್ಷಣ ವರ್ತನೆಯ ಮತ್ತು ಅಸಹಜ ಎನಿಸುವ ವ್ಯಕ್ತಿಯ ವರ್ತನೆಯೇ ಕಥಾ ನಿರೂಪಕ ಶೈಲಿಯಲ್ಲಿ ಪ್ರಕಟಗೊಂಡಿದೆ.

●●●

ಅವಳು ಮಾಧುರ್ಯ...! ಕಾಲೇಜ್ ಕ್ವೀನ್...! ಆಕರ್ಷಕ ರೂಪವತಿಯಾಗಿರುವ ಅವಳು ರತಿ... ರತಿ ವರ್ಚಸ್ಸಿನ ಬೆಡಗಿ.

ಅವಳಿಗೆ ಗೊತ್ತಿದೆ. ತನ್ನಸೌಂದರ್ಯದ ಬಗ್ಗೆ ಹೆಮ್ಮೆ ಇದೆ. ಅವರೊಂದಿಗೆ ಅಂತರ್ಯದಲ್ಲಿ ತಾನೇ ಸೌಂದರ್ಯವತಿ ಎಂಬ ಅಹಂಕಾರ ತುಂಬಿದೆ.

ಇವಳಿಗಾಗಿ ಹಂಬಲಿಸುವ ಕಾಲೇಜಿನ ಪಡ್ಡೆ ಯುವಕರನ್ನು ಮತ್ತು ಲೆಕ್ಚರರ್‌ಗಳಲ್ಲಿ ಕೆಲವರನ್ನು ಆಟ ಆಡಿಸುತ್ತಾಳೆ. ಎಲ್ಲರ ಎದುರಿಗೆ, ಇನ್ನೆಂದೂ ತಲೆ ಎತ್ತದ ರೀತಿಯಲ್ಲಿ ಅವಮಾನ ಮಾಡುತ್ತಾಳೆ.

ಇದೇನು ಸಾಮಾನ್ಯ ಅಲ್ಲ.

ಎಷ್ಟೋ ಮಂದಿ ಯುವಕರು ಅವಮಾನ ತಡೆಯಲಾಗದೆ ಆ ಕಾಲೇಜಿಗೆ ಗುಡ್‌ಬೈ ಹೇಳಿದ್ದಾರೆ.

ಪೊಲೀಸ್ ಆಫೀಸರ್‌ಗೆ ಮತ್ತು ಮಾಧುರ್ಯಳ ಸೌಂದರ್ಯ ಮದದ ಕತೆಗೆ ಎಲ್ಲಿಂದ ಎಲ್ಲಿಗೆ ಸಂಬಂಧ?

ಸಂಬಂಧ ಸೃಷ್ಟಿ ಆಗಲಿದೆ.

●●●

ಮಾಧುರ್ಯಳ ಬರ್ತ್‌ಡೇ...!

ಅವಳ ತಂದೆ-ತಾಯಿ ಮಧ್ಯಮ ವರ್ಗದವರು. ಹಾಗಾಗಿ ಕೆಲವೇ ಗೆಳತಿಯರು ಮತ್ತು ಇಬ್ಬರು ಯುವಕರನ್ನು ಬರ್ತ್‌ಡೇ ಪಾರ್ಟಿಗೆ ಆಹ್ವಾನ ನೀಡಿ ಕರೆಸಿಕೊಂಡಿದ್ದಾಳೆ.

ನೋ ಡ್ರಿಂಕ್ಸ್... ನೋ ನಾನ್‌ವೆಜ್...!

ಡ್ರೈ ಜಾಮೂನು, ವೆಜಿಟೇಬಲ್ ವಡೆ, ಪುಳಿಯೋಗರೆ, ಗಸಗಸೆ ಪಾಯಸ, ಅನ್ನ-ಸಾಂಬಾರ್-ಹಪ್ಪಳ, ಸಂಡಿಗೆ, ಮೊಸರು.

ಬರ್ತ್‌ಡೇ ಕೇಕ್ ರೆಡಿಯಾಗಿದೆ.

ಅವಳು ತನ್ನ ಸಹಜ ಸೌಂದರ್ಯಕ್ಕೆ ಮೆರಗು ಬರುವ ರೀತಿಯಲ್ಲಿ ಡ್ರೆಸ್ ಮತ್ತು ಮೇಕಪ್ ಮಾಡಿಕೊಂಡು ಬೆಡ್ ರೂಮಿನಿಂದ ಫಂಕ್ಷನ್ ಹಾಲ್‌ಗೆ ಬಂದಳು.

ಗೆಳತಿಯರು ಮತ್ತು ಆ ಇಬ್ಬರು ಯುವಕರ ಕಡೆ ನೋಡಿ ಕೈ ಆಡಿಸಿ ನಗುತ್ತಾ ಡಯಾಸ್ ಹತ್ತಿರ ಬಂದಳು.

ಆದರೆ ಕೇಕ್ ಕಟ್ ಮಾಡಲಿಲ್ಲ.

ಅವನಿಗಾಗಿ ಕಾಯುತ್ತಿದ್ದಾಳೆ.

ಅವನು ವಿಕ್ರಂ ಬಾಟಿಯ...!

ನಗರದ ಶ್ರೀಮಂತ ಉದ್ಯಮಿಯೊಬ್ಬರ ಏಕೈಕ ಪುತ್ರ. ಆಕರ್ಷಕ ರೂಪವಂತ. ಅವರಿಬ್ಬರು ಪರಸ್ಪರ ಇಷ್ಟಪಟ್ಟಿದ್ದರು.

ಅವಳ ಪರೀಕ್ಷೆ ಮುಗಿದ ಕೂಡಲೇ ಎಂಗೇಜ್‌ಮೆಂಟ್ ಮತ್ತು ಮೇ ತಿಂಗಳಲ್ಲಿ ಮದುವೆ ಎಂದು ಎರಡು ಕುಟುಂಬಗಳ ನಡುವೆ ಒಪ್ಪಂದ ಆಗಿತ್ತು.

ವಿಕ್ರಂಗಾಗಿ ಕಾಯುತ್ತಿದ್ದಾಳೆ. ಅವನು ಬೇಗ ಬರುತ್ತೇನೆ ಎಂದು ಹೇಳಿ ಫೋನ್ ಮಾಡಿದ್ದನು.

ಅಲ್ಲಿದ್ದ ಯುವಕರಲ್ಲಿ ಒಬ್ಬನಿಗೆ ಫೋನ್ ಕಾಲ್ ಬಂದಿತು.

ಅವನು ಗಾಬರಿಯಾದನು.

ಮತ್ತೊಬ್ಬ ಯುವಕನಿಗೆ ತಿಳಿಸಿದರು.

ಸುದ್ದಿ ವೈರಲ್ ಆಯಿತು.

ಇವರ ಜೊತೆ ಕಾಲೇಜಿನಲ್ಲಿ ಓದುತ್ತಿದ್ದ ಸಹ ವಿದ್ಯಾರ್ಥಿ ರೋಹನ್ ಆತ್ಮಹತ್ಯೆ ಮಾಡಿಕೊಂಡಿದ್ದನು. ಮಾಧುರ್ಯಳ ತಂದೆ ಗಂಭೀರವಾಗಿ ''ಬರ್ತ್‌ಡೇ ಫಂಕ್ಷನ್ ಮುಗಿಯೋತನಕ ಈ ಸಾವಿನ ವಿಚಾರ ಮಾತಾಡ್ಬೇಡಿ'' ಎಂದರು.

ಎಲ್ಲರೂ ಪಿಸುಧ್ವನಿಯಲ್ಲಿ ಮಾತಾಡಿಕೊಳ್ಳುತ್ತಿದ್ದಾರೆ. ರೋಹನ್ ಯಾಕೆ ಆತ್ಮಹತ್ಯೆ ಮಾಡಿಕೊಂಡ?

ಟಯೋಟ ಕಾರು ಬಂದಿತು.

ಶ್ರೀಮಂತ ಉದ್ಯಮಿಯ ಮಗ ವಿಕ್ರಂ ಬಾಟಿಯ ಭಾರೀ ಪ್ರಮಾಣದ ಗಿಫ್ಟ್ ಪ್ಯಾಕೇಟ್ ಹಿಡಿದು ಒಳಗೆ ಬಂದನು.

ಅವಳ ಮುಖ ಅರಳಿತು. ನಗು ಮೂಡಿತು. ಕಣ್ಣುಗಳು ಮಿನುಗಿದವು.

ಅವನು ಡಯಾಸ್ ಹತ್ತಿರ ಬಂದು ಅವಳ ಸಮೀಪ ನಿಂತುಕೊಂಡನು.

ಅವಳು ನಗಾಡಿದಳು.

''ಕೇಕ್ ಕಟ್ ಮಾಡು ಮಾಧುರ್ಯ.''

ಆಗ ಕೇಳಿ ಬಂತು ಘರ್ಜನೆ!

''ನೋ... ಕೇಕ್ ಕಟ್ ಮಾಡ್ಬೇಡಿ'' ಎಂಬ ಧ್ವನಿ ಕೇಳಿ ಬಂದ ಕಡೆ ತಿರುಗಿದರು.

ಪೊಲೀಸ್ ಆಫೀಸರ್...!

ಅವನು ಪೊಲೀಸ್ ಅಧಿಕಾರದ ಗತ್ತಿನಲ್ಲಿ ಹೆಜ್ಜೆ ಹಾಕುತ್ತಿದ್ದಾನೆ. ಇಲಾಖೆಯ ಯೂನಿಫಾರಂ ಅನ್ನು ಧರಿಸಿ ಗತ್ತಿನಿಂದ ಬರುತ್ತಿದ್ದಾನೆ.

ಎಲ್ಲರೂ ಗಾಬರಿಯಾಗಿದ್ದಾರೆ.

ಮಾಧುರ್ಯ ನಡುಗುತ್ತಿದ್ದಾಳೆ.

ವಿಕ್ರಂ ಬಾಟಿಯ ಪ್ರಭಾವಶಾಲಿ ಶ್ರೀಮಂತರ ಮಗ. ಅವನು ಗತ್ತಿನಿಂದಲೇ ''ಇನ್ಸ್‌ಪೆಕ್ಟರ್... ಕೇಕ್ ಕಟ್ ಮಾಡ್ಬೇಡ ಅಂತ ಯಾಕೆ ಹೇಳಿದ್ರಿ? ಇದು ಫ್ಯಾಮಿಲಿ ಫಂಕ್ಷನ್. ಇದನ್ನ ಮಾಡ್ಬೇಡಿ ಅಂತ ತಡೆಯಲು ನಿಮಗೇನು ಅಧಿಕಾರ ಇದೆ'' ಎಂದು ಕೇಳಿದನು.

ಪೊಲೀಸ್ ಅಧಿಕಾರಿ ಗತ್ತಿನಿಂದ ''ಐಯಾಮ್ ಸೀನಿಯರ್ ಪೊಲೀಸ್ ಆಫೀಸರ್ ಚಂದ್ರ... ಚಂದ್ರ ಚೂಡನ್. ಶೇಷಾದ್ರಿಪುರಂ ಕಾಲೇಜಿನ ಯುವಕ ರೋಹನ್ ಮನೆ ಹಿಂಭಾಗದಲ್ಲಿರುವ ಮರದಲ್ಲಿ ನೇಣು ಹಾಕಿಕೊಂಡು ಸತ್ತಿದ್ದಾನೆ.''

ವಿಕ್ರಂ ಗಡುಸಾಗಿ ''ಎಲ್ಲೋ ಯಾರೋ ಆತ್ಮಹತ್ಯೆ ಮಾಡಿಕೊಂಡರೆ ನೀವು ಇಲ್ಲಿಗ್ಯಾಕೆ ಬಂದು ಫಂಕ್ಷನ್‌ಗೆ ಡಿಸ್ಟರ್ಬ್ ಮಾಡುತ್ತಿದ್ದೀರ'' ಎಂದು ಕೇಳಿದನು.

''ಸಂಬಂಧ, ಕಾರಣ ತಿಳಿಯದೆ ಹಾಗೆಲ್ಲಾ ಬರೋಲ್ಲ ಈ ಪೊಲೀಸ್ ಆಫೀಸರ್. ರೋಹನ್ ಇವಳ ಜೊತೆ ಓದುತ್ತಿದ್ದ ವಿದ್ಯಾರ್ಥಿ. ಇವಳು ತನ್ನ ಸೌಂದರ್ಯದ ಅಹಂಕಾರದಿಂದ ಯುವಕರನ್ನು ಗೋಳಾಡಿಸಿ ಅವಮಾನ ಮಾಡುತ್ತಿದ್ದಳು. ಅದರಲ್ಲಿ ಈ ರೋಹನ್ ಒಬ್ಬ. ಅವನ ಸಾವಿಗೆ ಇವಳೇ ಕಾರಣ ಅಂತ ತಿಳಿದು ಬಂದಿದೆ. ಯೂ ಆರ್ ಅಂಡರ್ ಅರೆಸ್ಟ್'' ಎಂದು ಹೇಳಿ ಮುಂದೆ ಬಂದು ಕೋಳ ತೆಗೆದು ಅವಳಿಗೆ ಬಲವಂತವಾಗಿ ತೊಡಿಸಿ ಲಾಕ್ ಮಾಡಿ ಎಳೆದುಕೊಂಡು ಹೊರಟನು.

ಎಲ್ಲರೂ ಗಾಬರಿಯಾಗಿದ್ದಾರೆ.

ತಂದೆ-ತಾಯಿ ಪೊಲೀಸ್ ಆಫೀಸರ್‌ಗೆ ಎದುರಾಗಿ ಬಂದರು.

ಅತ್ತು ಗೋಳಾಡಿದರು.

ವಿಕ್ರಂ ಬಾಟಿಯ ಗಡುಸಾಗಿ ''ಇನ್ಸ್‌ಪೆಕ್ಟರ್... ಅರೆಸ್ಟ್ ವಾರೆಂಟ್ ತಂದಿದ್ದೀರ? ಒಬ್ಬಳು ಯುವತಿನ ಅರೆಸ್ಟ್ ಮಾಡಬೇಕಾದರೆ ಲೇಡಿ ಪೊಲೀಸರು ಬರಬೇಕು ಅಂತ ಗೊತ್ತಿಲ್ವ?'' ಎಂದು ಕೇಳಿದನು.

''ಇದು ಬರೀ ಆತ್ಮಹತ್ಯೆ ಅಲ್ಲ. ಕೊಲೆ ಎಂಬ ಅನುಮಾನ ಬಂದಿದೆ. ನಮ್ಮ ಹೈಯರ್ ಆಫೀಸರ್ ಹೇಳಿದಂತೆ ನಾನು ರೂಲ್ಸ್ ಫಾಲೋ ಮಾಡುತ್ತಿದ್ದೇನೆ. ನೀವು ಪೊಲೀಸ್ ಸ್ಟೇಷನ್‌ಗೆ ಹೋಗಿ ಸಾಹೇಬರ ಹತ್ತಿರ ಕಂಪ್ಲೇಂಟ್ ಮಾಡಿ'' ಎಂದು ಹೇಳಿ ಅವಳನ್ನು ಅಧಿಕಾರಯುತವಾಗಿ ಎಳೆದುಕೊಂಡು ಹೊರಗೆ ಬಂದು ಇಲಾಖೆಯ ಜೀಪಿನಲ್ಲಿ ಕೂರಿಸಿ ಸ್ಟಾರ್ಟ್ ಮಾಡಿದರು. ಪಿ.ಸಿ.ಗಳು ಇರಲಿಲ್ಲ, ಅವಳು ಗಾಬರಿ, ಭಯದಿಂದ ವಿಕ್ರಂ ಕಡೆ ನೋಡಿದಳು.

ಜೀಪು ವೇಗವಾಗಿ ಚಲಿಸುತ್ತಿದೆ.

ತಂದೆ-ತಾಯಿ ಗೋಳಾಡುತ್ತಿದ್ದಾರೆ. ಫಂಕ್ಷನ್‌ಗೆ ಅಂತ ಬಂದಿದ್ದವರು ಗುಸುಗುಸು ಮಾತಾಡಿಕೊಳ್ಳುತ್ತಿದ್ದಾರೆ.

''ಮಾಧುರ್ಯ ತುಂಬಾ ಯುವಕರಿಗೆ ಕಾಟ ಕೊಟ್ಟಿದ್ದಾಳೆ. ಅವಳು ರೋಹನ್‌ನನ್ನು ಲವ್ ಫೂಲ್ ಮಾಡಿದ್ದರಿಂದ ಸೂಸೈಡ್ ಮಾಡಿಕೊಂಡಿದ್ದಾನೆ. ಎಲ್ಲಾ ಇವಳ ಆಟದಿಂದ ಅನಾಹುತ ಆಗಿದೆ.''

ವಿಕ್ರಂಗೆ ಇವಳ ಕಾಲೇಜಿನ ಚೆಲ್ಲಾಟಗಳ ಬಗ್ಗೆ ತಿಳಿದಿದೆ. ಮದುವೆಯಾದ ಮೇಲೆ ಇವುಗಳಿಗೆ ಅವಕಾಶ ಇರೋಲ್ಲ. ನಾನು ಕಂಟ್ರೋಲ್ ಮಾಡ್ತೀನಿ. ಆದರೆ ಈ ಘಟನೆ ಬಹಿರಂಗವಾದರೆ ತೊಂದರೆ ತಪ್ಪಿದ್ದಲ್ಲ ಎಂದು ತಿಳಿದಿದೆ. ಹಾಗಾಗಿ ಅವನು ಕೂಡಲೇ ಪೊಲೀಸ್ ಇಲಾಖೆಯ ಹೈಯರ್ ಆಫೀಸರ್‌ಗೆ ಫೋನ್ ಮಾಡಿದನು.

ಅವರಿಂದ ಬಂದ ಉತ್ತರ ಕೇಳಿ ಇವನಿಗೆ ಒಂದು ರೀತಿ ಗಾಬರಿ, ಗೊಂದಲ ಉಂಟಾಯಿತು. ''ಸಾರ್... ಈಗಲೇ ರೋಹನ್ ಮನೆಗೆ ನಿಮ್ಮವರನ್ನ ಕಳಿಸಿ. ಏನೋ ಎಡವಟ್ಟಾಗಿದೆ'' ಎಂದನು.

ಪೊಲೀಸ್ ಆಫೀಸರ್ 'ನಿಮ್ಮ ತಂದೆ ನಮಗೆ ಬೇಕಾದವರು. ಹಾಗಾಗಿ ಇದರ ಬಗ್ಗೆ ತನಿಖೆ ಮಾಡಲು ನಮ್ಮವರನ್ನು ಈಗಲೇ ಕಳಿಸುತ್ತೇನೆ'' ಎಂದರು.

''ಸಾರ್... ಈಗಾಗಲೇ ನಿಮ್ಮ ಇಲಾಖೆಯ ಇನ್ಸ್‌ಪೆಕ್ಟರ್ ಬಂದು ನನ್ನ ವುಡ್‌ಬೀ ಮಾಧುರ್ಯಳನ್ನ ಅರೆಸ್ಟ್ ಮಾಡಿ ಕರೆದುಕೊಂಡು ಹೋದ್ರು.''

''ವಾಟ್... ಅರೆಸ್ಟ್ ಮಾಡಿದ್ರ? ಸೂಸೈಡ್ ಕೇಸು ನನ್ನ ಗಮನಕ್ಕೆ ಬಂದಿಲ್ಲ. ನನ್ನ ಪರ್ಮಿಷನ್ ಇಲ್ಲದೆ ಯಾರನ್ನೂ ಅರೆಸ್ಟ್ ಮಾಡಬಾರದು. ಇದು ಇಲಾಖೆಯ ನಿಯಮ'' ಎಂದು ಏನನ್ನೋ ನೆನಪು ಮಾಡಿಕೊಂಡು ''ಆ ಇನ್ಸ್‌ಪೆಕ್ಟರ್ ಯಾರು?''

ಅವನು ನೆನಪು ಮಾಡಿಕೊಂಡು ತುಂಬಾ ಮೆಲ್ಲಗೆ ''ಹಾಂ... ಹಾಂ... ಚಂದ್ರ.. ಚಂದ್ರ ಚೂಡ ಅಂತ ಅವನ ಹೆಸರು.''

''ವಾಟ್... ಚಂದ್ರ ಚೂಡನಾ?''

''ಹೌದು ಸಾರ್.''

ಕೆಲವು ಕ್ಷಣಗಳ ನಂತರ ''ಆ ಹೆಸರಿನವರು ನಮ್ಮ ಜ್ಯೂರಿಕ್ ಡಿಕ್ಷನ್‌ನಲ್ಲಿ ಯಾರೂ ಇಲ್ಲವಲ್ಲ. ಅವರು ಯಾವುದರಲ್ಲಿ ಬಂದಿದ್ರು?''

''ಪೊಲೀಸ್ ಜೀಪಲ್ಲಿ.''

''ಅವರ ಫೋಟೋ ತೆಗಿದಿದ್ದೀರ?''

''ನನ್ನ ವುಡ್‌ಬೀನಾ ಅರೆಸ್ಟ್ ಮಾಡಿದ್ರು. ಆ ಟೆನ್‌ಷನ್ ಕಾರಣದಿಂದ ನಾನು ಗಾಬರಿಯಾಗಿದ್ದೆ. ಒಬ್ಬ ಪೊಲೀಸ್ ಆಫೀಸರ್ ಫೋಟೋ ತೆಗೆಯಬೇಕು ಎಂಬ ಆಲೋಚನೆ ಹೇಗೆ ಬರಲು ಸಾಧ್ಯ?''

''ಹೋಗಲಿ ಆ ಜೀಪಿನ ನಂಬರ್ ನೋಟ್ ಮಾಡಿಕೊಂಡ್ರ?''

''ಇದೆಂತಹ ಪ್ರಶ್ನೆ ಕೇಳುತ್ತಿದ್ದೀರ. ಪೊಲೀಸ್ ಜೀಪಿನ ನಂಬರ್ ನೋಟ್ ಮಾಡಿಕೊಳ್ಳುವಂತ ಆಲೋಚನೆ ಹೇಗೆ ಬರಲು ಸಾಧ್ಯ?''

ಪೊಲೀಸ್ ಅಧಿಕಾರಿ ''ಯಾರೋ ಇಲಾಖೆಯ ಹೆಸರನ್ನು ಉಪಯೋಗಿಸಿಕೊಂಡು ಡೂಪ್ಲಿಕೇಟ್ ಪೊಲೀಸ್ ಆಫೀಸರ್ ಆಗಿ ಬಂದು ನಿಮ್ಮ ವುಡ್‌ಬೀನ ಕರ್ಕೊಂಡು ಹೋಗಿದ್ದಾರೆ. ಬಹುಶಃ, ಆಕೇನಾ ರೇಪ್ ಮಾಡಿ ಮರ್ಡರ್ ಮಾಡಬಹುದು ಅಥವಾ ಕಿಡ್ನಾಪಿಂಗ್ ಆಟ ಆಡಿ ಹಣಕ್ಕೆ ಡಿಮ್ಯಾಂಡ್ ಮಾಡಬಹುದು'' ಎಂದರು.

ವಿಕ್ರಂಗೆ ಗಾಬರಿಯಾಯಿತು.

''ಸಾರ್... ಬೇಗ ನೀವು ಕ್ರಮ ತಗೊಂಡು ನನ್ನ ವುಡ್‌ಬೀನಾ ಕಾಪಾಡಬೇಕು.''

●●●

ನಿರ್ಜನ ಪ್ರದೇಶದ ಒಂಟಿಮನೆಯ ಮುಂದೆ ಜೀಪು ನಿಂತಿದೆ.

ಅಲ್ಲಿ ಬೋರ್ಡ್ ಕಾಣುತ್ತಿದೆ.

ಗ್ರಾಮಾಂತರ ಪೊಲೀಸ್ ಸ್ಟೇಷನ್ - ಹೊಸಹೊಳಲು ಗ್ರಾಮ!

ಆ ಬೋರ್ಡ್ ಎಲ್ಲಿದೆ? ಆ ಮಿನಿ ಬಂಗಲೆಯ ಕಾಂಪೌಂಡ್‌ನ ಒಳ ಆವರಣದಲ್ಲಿ ಕಂಡು ಬರುತ್ತಿದೆ.

ಅದು ಹೊಸ ಗ್ರಾಮ. ಬೆರಳೆಣಿಕೆಯಷ್ಟು ಮನೆಗಳಿವೆ ಮತ್ತು ಜನಸಂಖ್ಯೆ ತುಂಬಾ ಕಡಿಮೆ ಇದೆ.

ಜೀಪನ್ನು ಕಾಂಪೌಂಡ್ ಒಳ ಆವರಣದಲ್ಲಿ ನಿಲ್ಲಿಸಿದ್ದಾನೆ.

ಅವಳನ್ನು ಎಳೆದುಕೊಂಡು ಬಂದು ಲಾಕಪ್ ಒಳಗೆ ತಳ್ಳಿದನು. ಆ ರಭಸಕ್ಕೆ ಅವಳು ತೂರಾಡುತ್ತಾ ನೆಲದ ಮೇಲೆ ಬಿದ್ದಳು. ಮಂಡಿ ಚಿಪ್ಪು ತಗುಲಿದ್ದರಿಂದ ನೋವು ಉಂಟಾಗಿ ಕಿರುಚಿದಳು.

ಪೊಲೀಸ್ ಲಾಕಪ್‌ನಲ್ಲಿ ಅವಳು ಬಂಧಿತಳಾಗಿದ್ದಾಳೆ. ಮುಖ ಬಿರುಸಾಗಿದೆ. ಪೊಲೀಸ್ ಸ್ಟೇಷನ್ ವಾತಾವರಣ ಅವಳಿಗೆ ಮೊದಲ ಅನುಭವ.

ಪೊಲೀಸ್ ಅಧಿಕಾರಿ ಚಂದ್ರಚೂಡನ್ ಸಿಗರೇಟ್ ಸೇದುತ್ತಾ ಟೀ ಕುಡಿಯುತ್ತಿದ್ದಾನೆ. ಇವಳನ್ನು ವಿಚಾರಣೆ ಮಾಡಲಿಲ್ಲ ಎಂಬುದು ನಿಜ.

ಪಿ.ಸಿ.ಗಳು ಇರಲಿಲ್ಲ. ಉಳಿದ ಪೊಲೀಸ್ ಸ್ಟೇಷನ್ನಿನ ವಾತಾವರಣದಂತೆ ಇದೂ ಸಹ ಇದೆ.

ಅರ್ಧ ಗಂಟೆ ಕಳೆಯಿತು. ಅವನು ಒಂದರ ನಂತರ ಮತ್ತೊಂದರಂತೆ ಟೀ ಕುಡಿಯುತ್ತಾ ಸಿಗರೇಟ್ ಸೇದುತ್ತಿದ್ದನು ಮತ್ತು ಒಬ್ಬನೇ ಆಗಾಗ ವಿಲಕ್ಷಣ ರೀತಿಯಲ್ಲಿ ನಗುತ್ತಿದ್ದನು ಮತ್ತು ವಿಚಿತ್ರವಾಗಿ ಭುಜ ಕುಣಿಸುತ್ತಿದ್ದಾನೆ.

ಅವಳಿಗೆ ಗಾಬರಿ ಆಗುತ್ತಿದೆ.

ಕತ್ತಲಾವರಿಸುತ್ತಿದ್ದರೂ ಸಹ ಇವಳನ್ನು ಬಂಧಿಸಿದ್ದ ಲಾಕಪ್‌ನಲ್ಲಿ ಲೈಟ್ ಇದ್ದರೂ ಸಹ ಆನ್ ಮಾಡಿರಲಿಲ್ಲ.

ಕತ್ತಲಲ್ಲಿ ಕುಳಿತಿದ್ದಾಳೆ. ಸೊಳ್ಳೆಗಳ ಕಾಟ ಪ್ರಾರಂಭವಾಗಿದೆ.

☞ 14

13 ☜

ಹತ್ತು ನಿಮಿಷ ಕಳೆಯಿತು. ಲೈಟ್ ಆನ್ ಆಯಿತು. ಪೊಲೀಸ್ ಅಧಿಕಾರಿ ಈಗ ಲಾಕಪ್‌ನೊಳಗೆ ಬಂದನು.

ಅವಳು ಗಾಬರಿಯಿಂದ ಎದ್ದು ನಿಂತು ಅವನ ಕಡೆ ನೋಡುತ್ತಾ ''ಸಾರ್... ನನ್ನಿಂದ ಏನೂ ತಪ್ಪಾಗಿಲ್ಲ. ರೋಹನ್ ಸಾವಿಗೆ ನಾನು ಕಾರಣ ಅಲ್ಲ. ನನಗೂ ಈ ಸಾವಿಗೂ ಸಂಬಂಧ ಇಲ್ಲ'' ಎಂದು ಹೇಳಿದಳು.

ಪೊಲೀಸ್ ಅಧಿಕಾರಿ ವ್ಯಂಗ್ಯವಾಗಿ ನಗುತ್ತಾ ''ನೀನು... ನೀನು ರೋಹನ್‌ನಂತ ಯುವಕರ ಜೊತೆ ಲವ್ ಗೇಮ್ ಆಡುತ್ತಿದ್ದೆ. ಅವರನ್ನ ಪ್ರೀತಿಸುವಂತೆ ನಾಟಕ ಮಾಡಿ ಸಲಿಗೆ ನೀಡಿ ಆಮೇಲೆ ಅವರಿಗೆ ಎಲ್ಲರ ಎದುರಿಗೆ ಅವಮಾನ ಮಾಡುತ್ತಿದ್ದೆ. ಇದು ನಿಜ ತಾನೆ?''

ಅವಳು ''ಸಾರ್... ನಾನು ಕೆಲವರ ಜೊತೆ ಫೋನ್ ಮಾಡುವ ಆಟ ಆಡಿರಬಹುದು. ಆದರೆ ರೋಹನ್‌ನನ್ನು ನಾನು ಯಾವತ್ತೂ ಸಹ ಮಾತಾಡಿಸಿಲ್ಲ. ಅವನೂ ಸಹ ನನ್ನ ಕಡೆ ನೋಡುತ್ತಿರಲಿಲ್ಲ. ಅವನು ತುಂಬಾ ಶಿಸ್ತಿನ ವಿದ್ಯಾರ್ಥಿ. ನನ್ನಂತಹ ಚೆಲುವೆಯರ ಬಗ್ಗೆ ಅವನಿಗೆ ಆಸಕ್ತಿ ಇರಲಿಲ್ಲ. ಅವನು ಫಸ್ಟ್ ರ್‍ಯಾಂಕ್ ಬರಬೇಕು ಅಂತ ತುಂಬಾ ಓದುತ್ತಿದ್ದ. ನನ್ನ ಕಡೆ ನೋಡದವನ ತಂಟೆಗೆ ನಾನು ಹೋಗಿರಲಿಲ್ಲ. ಅವನಿಗೆ ಹಲೋ ಸಹ ಹೇಳುತ್ತಿರಲಿಲ್ಲ.''

''ಆದರೆ ಅವನು ಸತ್ತಿರೋದು ನಿಜ. ಆ ಸಾವಿಗೆ ನೀನೇ ಕಾರಣ ಅಂತ ಅಂತಿಮ ಪತ್ರದಲ್ಲಿ ಬರೆದಿದ್ದಾನೆ.''

ಅವಳು ಪ್ರಶ್ನೆ ಮಾಡಿದಳು.

''ಕಾರಣ ಯಾರೇ ಆಗಿರಲಿ, ಏನೇ ಆಗಿರಲಿ. ಆದರೆ ಇದು ಕೊಲೆ ಅಲ್ಲ. ಅವನು ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ನನ್ನ ಬಗ್ಗೆ ಅವನು ಆ ರೀತಿ ಬರೆದಿರಲು ಸಾಧ್ಯವೇ ಇಲ್ಲ.''

''ಒಬ್ಬ ಪೊಲೀಸ್ ಆಫೀಸರ್ ಸುಳ್ಳು ಹೇಳಲು ಸಾಧ್ಯವೆ?

''ಆದರೆ ಅದು ನಿಜ ಅಲ್ಲ.''

ಪೊಲೀಸ್ ಅಧಿಕಾರಿ ಕೋಪದಿಂದ ''ನಿನಗೆ ಪೊಲೀಸ್ ಟ್ರೀಟ್‌ಮೆಂಟ್ ಬಗ್ಗೆ ಗೊತ್ತಿಲ್ಲ ಅಂತ ಕಾಣುತ್ತೆ'' ಎಂದು ಹೇಳಿ ಮುಷ್ಠಿ ಗಾತ್ರ ಇದ್ದ ಲಾಠಿ ಎತ್ತಿಕೊಂಡು ಗಿರ್ರನೆ ತಿರುಗಿಸುತ್ತಾ ಅವಳ ಮುಂದೆ ಪೆನ್ನು ಮತ್ತು ಪೇಪರ್, ಪ್ಯಾಡ್ ಹಿಡಿದು ''ನಾನು ಹೇಳಿದ ರೀತಿ ಬರೆದು ಸೈನ್ ಮಾಡು, ಇಲ್ಲಾ ಅಂದ್ರೆ ಈ ಲಾಠಿ ನಿನ್ನ ಸುಂದರವಾದ ದೇಹದ ಮೇಲೆ ಬ್ರೇಕ್ ಡ್ಯಾನ್ಸ್ ಮಾಡುತ್ತೆ'' ಎಂದು ಲಾಠಿ ಎತ್ತದನು.

ಅವಳು ಭಯಗೊಂಡಳು. ಅವನು ಹೇಳುತ್ತಿದ್ದಾನೆ. ''ರೋಹನ್ ಸಾವಿಗೆ ನಾನೇ ಕಾರಣ. ಅವನು ನನ್ನನ್ನು ಲವ್ ಮಾಡುವ ರೀತಿ ನಾಟಕ ಆಡಿದ. ನಂತರದಲ್ಲಿ ನಾನು ಅವನನ್ನು ಆತ್ಮಹತ್ಯೆ ಮಾಡಿಕೊಂಡ ರೀತಿ ಸನ್ನಿವೇಶ ಸೃಷ್ಟಿ ಹಾಡಿದೆ. ಇದು ಪರೋಕ್ಷವಾಗಿ ನಾನು ಮಾಡಿರುವ ಕೊಲೆ.''

''ಹೂಂ... ತಗೋ ಸೈನ್ ಮಾಡು'' ಎಂದು ಅವಳ ಮುಖದ ಲಾಠಿ ಹಿಡಿದನು.

ಅವಳು ಭೀತಳಾಗಿದ್ದಾಳೆ.

ಆದರೂ ಧೈರ್ಯದಿಂದ ಹೇಳಿದಳು.

''ಸಾರ್... ನಾನು... ನಾನು... ಅವನ ಜೊತೆ ಯಾವತ್ತೂ ಮಾತಾಡಿಲ್ಲ. ಅವನೆಲ್ಲಿದ್ದಾನೆ ಅಂತ ಗೊತ್ತಿಲ್ಲ. ಸದಾ ಓದಿನ ಕಡೆ ಗಮನ ನೀಡುತ್ತಿದ್ದವರು ಮತ್ತು ಹುಡುಗಿಯರ ಕಡೆ ತಲೆ ಎತ್ತಿ ನೋಡುತ್ತಿರಲಿಲ್ಲ. ಅವನ ಜೊತೆ ನನಗೆ ಸಂಬಂಧ, ಸಂಪರ್ಕವೇ ಇರಲಿಲ್ಲ. ಅಂದ ಮೇಲೆ ಮಾಡದಿರುವ ತಪ್ಪನ್ನು ಯಾಕೆ ಒಪ್ಪಿಕೊಳ್ಳಲಿ?''

ಲಾಠಿ ಗಿರ್ರನೆ ತಿರುಗಿತು. ಎಲ್ಲಿ ತನ್ನ ಮೈಮೇಲೆ ಅಪ್ಪಳಿಸಿ ಬಿಡುವುದೋ ಎಂದು ಹೆದರಿ ದೂರ ಸರಿದಳು.

''ನೀನು ಬರೆದು ಕೊಡದಿದ್ದರೆ ನಾನು ಪೊಲೀಸ್ ಪದ್ಧತಿಯ ಪ್ರಕಾರ ಆಟ ಆಡಿ ನನ್ನ ಸೌಂದರ್ಯವನ್ನು ಹಾಳು ಮಾಡಬೇಕಾಗುತ್ತೆ. ನಾನು ಮೂರು ಎಣಿಸುವುದರಲ್ಲಿ ಬರೆದು ಕೊಡಬೇಕು.''

ಇದು ಪೊಲೀಸ್ ಸ್ಟೇಷನ್ನ?

ಪಿ.ಸಿ.ಗಳು ಇಲ್ಲವಲ್ಲ.

ಇದೇನಿದು ವಿಚಿತ್ರ.

ಈಗ ಏನು ಮಾಡಲಿ?

ಆತ್ಮಹತ್ಯೆ ಅಂತ ಎಲ್ಲರೂ ಹೇಳುತ್ತಿರುವಾಗ ಈ ಪೊಲೀಸ್ ಅಧಿಕಾರಿ ಕೊಲೆ ಅಂತ ಹೇಳಿ, ಅದನ್ನ ನಾನು (ಮಾಧುರ್ಯ) ಮಾಡಿದ್ದಾಳೆ ಅಂತ ಹೇಳಿ ಬರೆಸಿಕೊಳ್ಳಲು ಹೆದರಿಸುತ್ತಿದ್ದಾನಲ್ಲ. ಇವನ ಬೆದರಿಕೆಗೆ ಭೀತಳಾಗಿ ಬರೆದುಕೊಟ್ಟರೆ ಆಮೇಲೆ ಮಾಡದ ಪರೀಕ್ಷೆ ಜೈಲು ಶಿಕ್ಷೆಯನ್ನು ಅನುಭವಿಸಬೇಕಾಗುತ್ತದೆ.

ಪೊಲೀಸ್ ಅಧಿಕಾರಿ ಮುಖದತ್ತ ಈಗ ಲಾಠಿ ತೂರಿದನು.

ಅವಳು ಕಿರುಚುತ್ತಾ ತನ್ನ ಕೈಗಳನ್ನು ಮುಖದತ್ತ ಅಡ್ಡ ಹಿಡಿದುಕೊಂಡಳು.

ಅವನು ಹೊಡೆಯಲಿಲ್ಲ.

ಅಂತಹ ಭಯ ಸೃಷ್ಟಿ ಮಾಡಿದ್ದನು.

ಅವಳು ಬರೆದಳು. ಅವನು ಹೇಳಿದಂತೆ ಬರೆದು ರುಜು ಮಾಡಿಕೊಟ್ಟಳು.

ವಿಕ್ರಂ ಬಾಟಿಯ ನಗುತ್ತಿದ್ದಾನೆ. ವ್ಯಂಗ್ಯವಾಗಿ ಪ್ರಾರಂಭವಾದ ನಗು ಈಗ ವಿಲಕ್ಷಣ ರೀತಿಯಲ್ಲಿ ಬದಲಾಗುತ್ತಿದೆ.

ಅವಳು ಭೀತಳಾಗುತ್ತಿದೆ.

ಅವಳನ್ನು ರಿಲೀಸ್ ಮಾಡಿದ ನಂತರ ತನ್ನ ಜೀಪಿನಲ್ಲಿ ಅವಳು ಮನೆ ಇರುವ ಸರ್ಕಲ್ ತನಕ ಡ್ರಾಪ್ ಮಾಡಿದನು.

ಎಲ್ಲಾ ಓಕೆ ಆಗಿದೆ.

●●●

ತಂದೆ-ತಾಯಿ, ಸಂಬಂಧಿಕರು ಅವಳನ್ನು ಸುತ್ತೂರೆದು ಪ್ರಶ್ನಿಸುತ್ತಿದ್ದಾಳೆ.

ಭಯ ಮತ್ತು ದುಃಖದಿಂದ ಎಲ್ಲವನ್ನೂ ಸಹ ಹೇಳಿದಳು.

ತಂದೆ ಗಾಬರಿಯಿಂದ ''ಆ ಪೊಲೀಸ್ ಅಧಿಕಾರಿ ನಿನ್ನ ಮೇಲೆ ಕೊಲೆ ಆರೋಪ ಬರುವಂತೆ ಮಾಡಲು ಬರೆಸಿಕೊಂಡಿದ್ದಾನೆ. ಯಾವ ಗಳಿಗೆಯಲ್ಲಿ ಬೇಕಾದರೂ ಪೊಲೀಸರು ಬರಬಹುದು. ನಿನ್ನನ್ನು ಅರೆಸ್ಟ್ ಮಾಡುತ್ತಾರೆ'' ಎಂದು ಹೇಳುತ್ತಿರುವಾಗಲೇ ಫೋನ್ ಕಾಲ್ ಬಂದಿತು.

ಎಲ್ಲರೂ ಹೆದರಿದರು.

ಪೊಲೀಸರು ಫೋನ್ ಮಾಡಿದ್ದಾನೆ.

ಶ್ರೀಮಂತ ಕುಟುಂಬದ ಯುವಕ ವಿಕ್ರಂ ಬಾಟಿಯನನ್ನು ಮದುವೆ ಮಾಡಿಕೊಂಡು ಮಹಾರಾಣಿಯ ರೀತಿ ಬಾಳಬೇಕಾಗಿದ್ದ ಮಗಳು ಕೊಲೆ ಆರೋಪದ ಮೇಲೆ ಜೀವನ ಪೂರ್ತಿ ಜೈಲಿನಲ್ಲಿ ಕಳೆಯಬೇಕಾಗಿರೋದು ನಮ್ಮ ಪ್ರಾರಬ್ಧ ಕರ್ಮ ಎಂದುಕೊಂಡರು.

''ಅಂಕಲ್ ನಾನು ವಿಕ್ರಂ ಬಾಟಿಯ...'' ಎಂದು ಹೇಳುತ್ತಿರುವಾಗಲೇ ಮಾಧುರ್ಯಳ ತಂದೆ ಗಾಬರಿಯಿಂದ ಎಲ್ಲಾ ಹೇಳಿದರು.

ವಿಕ್ರಂ ಬಾಟಿಯ ಗಂಭೀರವಾಗಿ ''ನೀವು ಹೆದರುವ ಅಗತ್ಯ ಇಲ್ಲ. ನಾನು ವೀಡಿಯೋ ಕ್ಲಿಪ್ ಅನ್ನು ಮಾಧುರ್ಯಳಿಗೆ ಕಳಿಸಿಕೊಡ್ತೀನಿ. ಅದನ್ನು ನೋಡಲು ಹೇಳಿ. ಇದು ಹುಚ್ಚನೊಬ್ಬ ಆಡಿರುವ ಆಟ. ವೀಡಿಯೋ ಕ್ಲಿಪ್ ನೋಡಿದ ಮೇಲೆ ಸತ್ಯದರ್ಶನ ಆಗುತ್ತೆ'' ಎಂದು ಹೇಳಿದನು.

ಅವಳು ಮೊಬೈಲ್‌ನಲ್ಲಿ ಆ ದೃಶ್ಯ ನೋಡುತ್ತಿದ್ದಾಳೆ.

ಎಲ್ಲರೂ ಅವಳ ಹತ್ತಿರ ನಿಂತಿದ್ದಾರೆ.

ಇದೇನಿದು ವಿಚಿತ್ರ!

ಆತ್ಮಹತ್ಯೆ ಮಾಡಿಕೊಂಡಿದ್ದಾನೆ ಎಂದು ಪೊಲೀಸರು ಹೇಳಿದ್ದಾರೆ. ಆದರೆ... ಆದರೆ ಅವನು ಸತ್ತಿಲ್ಲ... ಈಗಲೂ ಜೀವಂತವಾಗಿದ್ದಾಳೆ.

ಕಾಲೇಜಿನ ಫಂಕ್ಷನ್! ಸೆಮಿನಾರ್ ನಡೆಯುತ್ತಿದೆ. ಬುದ್ಧಿವಂತ ವಿದ್ಯಾರ್ಥಿ ರೋಹನ್ ಸೆಮಿನಾರ್ ನಡೆಸಿ ಕೊಡುತ್ತಿದ್ದಾನೆ.

ವಿದ್ಯಾರ್ಥಿಗಳು ಪ್ರಶ್ನೆ ಕೇಳುತ್ತಿದ್ದಾರೆ.

ರೋಹನ್ ಉತ್ತರಿಸುತ್ತಿದ್ದಾನೆ.

ಪೊಲೀಸ್ ಅಧಿಕಾರಿಗಳು ಅಲ್ಲಿಗೆ ಬಂದು ರೋಹನ್ ಮತ್ತು ಕಾಲೇಜಿನ ಪ್ರಿನ್ಸಿಪಾಲ್ ಜೊತೆ ಮಾತಾಡುತ್ತಿದ್ದಾರೆ.

ಇದೆಲ್ಲಾ ಏನು?

ವಿಕ್ರಂ ಅವಳಿಗೆ ಫೋನ್ ಮಾಡಿದನು.

''ಹುಚ್ಚ ಯುವಕ ತಾನು ಪೊಲೀಸ್ ಅಧಿಕಾರಿ ಎಂಬ ಭಾವುಕ ಭ್ರಮೆಗೆ ಒಳಗಾಗಿ ಸುಪ್ತಮನಸ್ಸಿನ ಪ್ರಚೋದನೆಯ ಕಾರಣದಿಂದ ಈ ರೀತಿ ಆಟ ಆಡಿದಾದನೆ. ಅವನು ಪೊಲೀಸ್ ಅಧಿಕಾರಿ ಆಗಬೇಕು ಅಂತ ಎರಡು ಸಲ ಪರೀಕ್ಷೆ ಬರೆದು ಪ್ರಯತ್ನ ಮಾಡಿದ್ದರೂ ಸೆಲೆಕ್ಟ್ ಆಗಿರಲಿಲ್ಲ.''

ಮುಂದೆ ಹೇಳುವ ಅಗತ್ಯ ಇರಲಿಲ್ಲ. ಪೊಲೀಸ್ ಅಧಿಕಾರಿ ಆಗಬೇಕೆಂಬ ಮಹದಾಸೆ ಅವನ ಸುಪ್ತಮನಸ್ಸಿನಲ್ಲಿ ಘನೀಭೂತವಾಗಿತ್ತು. ಪ್ರಚೋದನೆಗೆ ಒಳಗಾಗಿ ಈಡೇಲಾರದ ಆಸೆಯನ್ನು (ಪೊಲೀಸ್ ಅಧಿಕಾರಿ ಆಗಬೇಕೆಂಬ ಮಹದಾಸೆ) ಈ ರೀತಿ ತೀರಿಸಿಕೊಂಡಿದ್ದಾನೆ. ಇದು ಪೂರ್ಣ ಮಾಹಿತಿ!

ವಿಕ್ರಂ ಬಾಟಿಯ ಹಿರಿಯ ಪೊಲೀಸ್ ಅಧಿಕಾರಿಯ ಮೂಲಕ ಮಾಹಿತಿ ಸಂಗ್ರಹಿಸಿದ್ದನು. ಆದರೆ ಪೊಲೀಸರಿಗೆ ಚಂದ್ರಚೂಡ ಎಂಬ ವಿಲಕ್ಷಣ ಆಸೆಗಳ ಹುಚ್ಚ ಯಾರು? ಅವನು ಎಲ್ಲಿದ್ದಾನೆ ಎಂದು ತಿಳಿದಿರಲಿಲ್ಲ.

ವಿಕ್ರಂ ಬಾಟಿಯ ಪ್ರಿಯತಮೆಗೆ ಧೈರ್ಯ ಹೇಳಿದ್ದಾನೆ.

ಇದು ನಿಜವೆ?

ಇನ್ನು ಮುಂದೆ ನೀನು ಕಾಲೇಜಿನ ಪಡ್ಡೆ ಯುವಕರನ್ನು ಫೂಲ್ ಮಾಡುವ ಪ್ರಯತ್ನ ಮಾಡಬಾರದು ಎಂಬ ಎಚ್ಚರಿಕೆ ನೀಡಿದ್ದಾನೆ.

●●●

ಸ್ಟಾರ್ ಹೋಟೆಲ್‌ನ ಕೊಠಡಿಯ ರೀತಿ ಇದೆ ಅವನ ಬೆಡ್‌ರೂಮ್!

ಕನ್ನಡಿಯ ಮುಂದೆ ಪೊಲೀಸ್ ಆಫೀಸರ್ ನಿಂತಿದ್ದಾನೆ. ಪೊಲೀಸ್ ಯೂನಿಫಾರಂ ಧರಿಸಿದ್ದಾನೆ.

ಕೈಯಲ್ಲಿ ಪಿಸ್ತೂಲ್ ಇದೆ.

ಅದನ್ನು ಹಿಡಿದು ಜೇಮ್ಸ್ ಬಾಂಡ್ ಶೈಲಿಯಲ್ಲಿ ಪಿಸ್ತೂಲ್ ಹಿಡಿದು ಶೂಟ್ ಮಾಡುವ ರೀತಿ ಅಭಿನಯಿಸುತ್ತಿದ್ದಾನೆ.

ಪೊಲೀಸ್ ಸ್ಟೈಲ್‌ನಲ್ಲಿ ನಡೆಯುತ್ತಾನೆ ಮತ್ತು ಯಾರೋ ಹಿರಿಯ ಅಧಿಕಾರಿ ತನ್ನ ಎದುರಿಗೆ ಬಂದಿದ್ದಾರೆ ಎಂಬ ಭಾವನೆಯಿಂದ ಎದೆ ಉಬ್ಬಿಸಿ ಸೆಲ್ಯೂಟ್ ಹೊಡೆಯುತ್ತಾನೆ.

ಟೇಬಲ್ ಮೇಲೆ ಇದ್ದ ಫೈಲ್ ಅನ್ನು ತೆಗೆದನು.

ಅದರಲ್ಲಿ ಕೈಬರಹದ ಪತ್ರಗಳಿವೆ. ಹನ್ನೆರಡು ಮಂದಿ ತಾವು ಅಪರಾಧ ಮಾಡಿದ್ದೇವೆ ಎಂದು ತಪ್ಪೊಪ್ಪಿಗೆ ಪತ್ರ ಬರೆದಿದ್ದಾರೆ. ಅದರಲ್ಲಿ ಮಾಧುರ್ಯ ಬರೆದುಕೊಟ್ಟಿರುವ ಪತ್ರ ಸಹ ಇದೆ.

ಆ ಪತ್ರಗಳನ್ನು ಜೋರಾಗಿ ಓದುತ್ತಾ ಅತ್ತಿತ್ತ ತಿರುಗಾಡುತ್ತಾನೆ.

ಗಹಿಗಹಿ ನಗುತ್ತಾನೆ.

ಇವನೇ ಚಂದ್ರಚೂಡ...!

ಮಾಧುರ್ಯ ಸೇರಿ ಸುಮಾರು ಹನ್ನೆರಡು ಮಂದಿ ಯುವಕ-ಯುವತಿಯರ ಬಗ್ಗೆ ಮಾಹಿತಿ ಸಂಗ್ರಹಿಸಿ, ವಿಶೇಷವಾದ ಅಪರಾಧ ಸನ್ನಿವೇಶ ಸೃಷ್ಟಿ ಮಾಡಿ ಅವರನ್ನೆಲ್ಲಾ ಹೆದರಿಸಿ ಬ್ಲಾಕ್‌ಮೇಲ್ ಮಾಡಿ ಅವರಿಂದ ಮಾಡದಿರುವ ಅಪರಾಧದ ಬಗ್ಗೆ ತಪ್ಪೊಪ್ಪಿಗೆ ಪತ್ರ ಬರೆಸಿಕೊಂಡು ಎಲ್ಲಾ ಫೈಲ್ ಮಾಡಿದ್ದಾನೆ.

ರಾತ್ರಿಯ ಏಕಾಂತದಲ್ಲಿ ಬೆಡ್‌ರೂಮಿನಲ್ಲಿ ವಿಚಿತ್ರವಾಗಿ ಆಡುತ್ತಾನೆ.

ಮುಂದಿನ ಪ್ರೋಗ್ರಾಂ ಏನು?

ಅವನಿಗೆ ನಂಬಿಕಸ್ಥ ಗೆಳೆಯನಿಂದ ಫೋನ್ ಕಾಲ್ ಬಂದಿತು.

ಮತ್ತೊಮ್ಮೆ ಪೊಲೀಸ್ ಆಫೀಸರ್ ಆಗಲು ರೆಡಿಯಾಗುತ್ತಿದ್ದಾನೆ.

●●●

ಪೊಲೀಸರು ಈಗ ಮಾಧುರ್ಯಳನ್ನು ಭೇಟಿ ಮಾಡಿ ಪ್ರಶ್ನೆಗಳನ್ನು ಕೇಳುತ್ತಿದ್ದಾರೆ. ಆ ಡೂಪ್ಲಿಕೇಟ್ ಪೊಲೀಸ್ ಅಧಿಕಾರಿ ಅವಳನ್ನು ಎಲ್ಲಿಗೆ ಕರೆದುಕೊಂಡು ಹೋಗಿದ್ದ?

ಅವನು ಯಾವ ರೀತಿ ಇದ್ದಾನೆ?

ಮಾಧುರ್ಯ ನೆನಪು ಮಾಡಿಕೊಂಡು ಎಲ್ಲವನ್ನೂ ಸಹ ಹೇಳುತ್ತಿದ್ದಾಳೆ.

ಅವಳು ನೀಡಿದ್ದ ಸುಳಿವುಗಳ ಆಧಾರದ ಮೇಲೆ ಪೊಲೀಸ್‌ರು ತೀವ್ರ ರೀತಿಯಲ್ಲಿ ಹುಡುಕಾಟ ಪ್ರಾರಂಭಿಸಿದರು.

ವಿಶೇಷತೆ ಏನು?

ಮಾಧುರ್ಯಳನ್ನು ಬಂಧಿಸಿದ್ದ ಆ ಮನೆ ಖಾಲಿಯಾಗಿದೆ. ಅಲ್ಲಿ ಯಾರೂ ಇರಲಿಲ್ಲ.

ಯಾರೋ ಒಬ್ಬ ಯುವಕ ಒಂದು ತಿಂಗಳ ಮಟ್ಟಿಗೆ ಬಾಡಿಗೆಗೆ ಪಡೆದಿದ್ದನು ಎಂಬುದರ ಬಗ್ಗೆ ಮಾಹಿತಿ ಇದೆ. ಮಾಲೀಕರು ಹಣದ ಆಸೆಯಿಂದ ಪರಿಚಯ ಮತ್ತು ಯಾವ ದಾಖಲೆ ಇಲ್ಲದೆ ಬಾಡಿಗೆಗೆ ಮನೆ ನೀಡಿದ್ದನು.

ಅಸಲು ಸಂಗತಿ ಏನು?

ಈ ಬಾಡಿಗೆ ಮನೆಯನ್ನು ಸಿನಿಮಾ ಸೆಟ್‌ನ ಹಾಕಿ ಪೊಲೀಸ್ ಸ್ಟೇಷನ್ ರೀತಿ ಕಾಣುವಂತೆ ಮಾಡಿದ್ದನು. ಮಾಧುರ್ಯಳ ಪ್ರಕರಣದ ನಂತರ ಈ ಮನೆಯನ್ನು ಖಾಲಿ ಮಾಡಿದ್ದನು.

●●●

ಅವನಿಗೆ ಎರಡು ದಿನಗಳಿಂದ ಊಟ, ತಿಂಡಿ ಇರಲಿಲ್ಲ. ಸಿಂಗಲ್ ಟೀ ಕುಡಿಯಲು ಅವನ ಹತ್ತಿರ ಹತ್ತು ರೂಪಾಯಿ ಇರಲಿಲ್ಲ.

ಅವನು ಸೂರ್ಯಪ್ರಕಾಶ...!

ಬೇರೆ ಊರಿನಿಂದ ಬೆಂಗಳೂರಿಗೆ ಕೆಲಸ ಹುಡುಕಲು ಬಂದಿದ್ದನು. ಅವನು ಊರಿಂದ ಬರುವಾಗ ಎರಡು ಸಾವಿರ ರೂಪಾಯಿ ತಂದಿದ್ದನು. ಯಾರೋ ಅವನ ಪರ್ಸನ್ನು ಅಪಹರಿಸಿದ್ದರು. ಅವನೀಗ ಹೋಟೆಲ್ ಎದುರಿಗೆ ನಿಂತಿದ್ದಾನೆ.

ಪೊಲೀಸ್ ಜೀಪು ವೇಗವಾಗಿ ಬಂದಿತು. ಸೂರ್ಯಪ್ರಕಾಶನ ಸಮೀಪವೇ ಗಕ್ಕನೆ ನಿಂತಿತು. ಆ ಕ್ಷಣಗಳಲ್ಲಿ ಜೀಪಿನಿಂದ ನೆಗೆದು ಬಡಪಾಯಿ ಯುವಕನ ಎದುರಿಗೆ ನಿಂತನು.

ಸೂರ್ಯಪ್ರಕಾಶ ಹೆದರಿದನು.

ಪೊಲೀಸ್ ಅಧಿಕಾರಿ ರೀತಿಯಲ್ಲಿ ಮಾನಸಿಕವಾಗಿ ಬದಲಾಗಿದ್ದ ಚಂದ್ರಚೂಡ ''ನಿನ್ನನ್ನು ಅರೆಸ್ಟ್ ಮಾಡುತ್ತಿದ್ದೇನೆ'' ಎಂದು ಅವನ ತೋಳನ್ನು ಹಿಡಿದು ಎಳೆದು ಜೀಪಲ್ಲಿ ತಳ್ಳಿದ ನಂತರ ಕೋಳ ತೊಡಿಸಿದನು.

ಸೂರ್ಯಪ್ರಕಾಶ ಗಾಬರಿಯಿಂದ ''ಸಾರ್... ನಾನೇನು ತಪ್ಪು ಮಾಡಿದ್ದೇನೆ'' ಎಂದನು.

''ಗಾಂಜಾ, ಅಫೀಮು ಸಪ್ಲೈ ಮಾಡುತ್ತಿದ್ದೀಯ ಎಂಬುದಕ್ಕೆ ಸಾಕ್ಷಿ ಮತ್ತು ಆಧಾರ ಇದೆ.''

ಅವನು ಗಾಬರಿಯಿಂದ ಏನನ್ನೋ ಹೇಳಲು ಪ್ರಯತ್ನ ಮಾಡಿದಳು. ಅವನು ಆ ಕ್ಷಣಗಳಲ್ಲಿ ಕೆನ್ನೆಗೆ ಬಲವಾಗಿ ಹೊಡೆದನು. ಪೊಲೀಸ್ ಸ್ಟೇಷನ್ ರೀತಿ ಇದ್ದ, ಬೇರೆ ಬಡಾವಣೆಲಿದ್ದ ಮನೇಲಿ, ಲಾಕಪ್‌ನಲ್ಲಿ ಬಂಧಿಸಿದ್ದನು.

ಒಂದು ರಾತ್ರಿ ಪೂರ್ತಿ ತನಿಖೆ ಮಾಡಿ ತಲೆಕೆಡಿಸಿ ನಂತರ ತಪ್ಪೊಪ್ಪಿಗೆ ಪತ್ರ ಬರೆದು ಕೊಟ್ಟ ನಂತರ ಬಿಡುಗಡೆ ಮಾಡಿದರು. ಅದೇನು ಕರುಣೆ ಬಂದಿತ್ತೋ ಗೊತ್ತಿಲ್ಲ. ಅವನಿಗೆ ಐನೂರು ರೂಪಾಯಿ ಕೊಟ್ಟು ಕಳಿಸಿದನು.

●●●

ಇಪ್ಪತ್ತನೇ ಪ್ರಕರಣ!

'ಪೊಲೀಸ್ ನ್ಯೂಸ್' ಎಂಬ ಬೋರ್ಡ್ ಅನ್ನು ಜೀಪಿಗೆ ತಗುಲಿಸಿಕೊಂಡು ಪ್ರಯಾಣ ಮಾಡುತ್ತಿದ್ದನು.

ಪೊಲೀಸರು ನೋಡಿಬಿಟ್ಟರು. ಎಲ್ಲಾ ಫೋನ್ ಮೆಸೇಜ್ ಪಾಸ್ ಆಯಿತು. ಕೇವಲ ಒಂದು ಗಂಟೆಯ ಅವಧಿಯಲ್ಲಿ ಚಂದ್ರಚೂಡನನ್ನು ಅರೆಸ್ಟ್ ಮಾಡಿದರು.


ಅವನೊಬ್ಬ ಸಲೈಕೋ ಸ್ಯಾಂಡ್ರಮ್ ಎಂದು ಸೈಕಿಯಾರ್ಟಿಸ್ಟ್‌ಗಳ ಅಭಿಪ್ರಾಯ ನೀಡಿದ್ದರು. ಅವನ ಚಿಕಿತ್ಸೆಗೆ ವ್ಯವಸ್ಥೆ ಮಾಡಲಾಯಿತು. ನಂತರ ಮನೋ ದುರ್ಬಲತೆಯ ಪ್ರಚೋದನೆಯಿಂದ ಮಾಡಿರುವ ಅಪರಾಧಕ್ಕೆ ನ್ಯಾಯಾಲಯ ಶಿಕ್ಷೆ ನೀಡಿದೆ.

☯

# ಸಿಕಂದರ್‌ನ ಬಲಿ ಪಡೆದ ‘ಜಾಟ್’!

ಈ ಬಣ್ಣದ ಲೋಕನೇ ಹಂಗೆ. ಇಲ್ಲಿ ಯಾವತ್ತು ಏನಾಗುತ್ತೆ? ಯಾರು ಗೆಲ್ಲುತ್ತಾರೆ? ಯಾರು ಸೋಲುತ್ತಾರೆ? ಎಂದು ಹೇಳಲು ಸಾಧ್ಯವೇ ಇಲ್ಲ, ಇಲ್ಲಿ ಇವತ್ತು ಸ್ಟಾರ್ ಆದವರು ನಾಳೆ ಟಾರ್ ರೋಡ್‌ನಲ್ಲಿ ಇದ್ದರೆ, ಟಾರ್ ರೋಡ್‌ನಲ್ಲಿ ಇದ್ದವರು ಏಕಾಏಕಿ ಕೆಲವೊಮ್ಮೆ ಸ್ಟಾರ್ ಆಗ್ಬಿಡ್ತಾರೆ. ಸದ್ಯ ಇದಕ್ಕೆ ಉದಾಹರಣೆಗೆ ಸನ್ನಿ ಡಿಯೋಲ್ ಅವರನ್ನೇ ತೆಗೆದುಕೊಳ್ಳಿ.

ಹೌದು, ಸನ್ನಿ ಡಿಯೋಲ್... ಒಂದ್ಕಾಲದ ಸೂಪರ್ ಸ್ಟಾರ್. 90ರ ದಶಕದಲ್ಲಿ ಒಂದಾದ ಮೇಲೊಂದರಂತೆ ಗೆಲುವನ್ನು ಕಂಡ ಸನ್ನಿ ಡಿಯೋಲ್ ಅವನ್ನ ಇತ್ತೀಚಿನ ದಿನಗಳಲ್ಲಿ ಎಲ್ಲರೂ ಮರೆತೆ ಹೋಗಿದ್ದರು. ಬಾಲಿವುಡ್‌ನವರಿಗೆನೇ ಸನ್ನಿ ಡಿಯೋಲ್ ನೆನಪಿರಲಿಲ್ಲ, ಧರ್ಮೇಂದ್ರ ಮಗನಾದರೂ... ಒಂದ್ಕಾಲದಲ್ಲಿ ಚಿನ್ನದ ಗಣಿ ತೆಗೆದಿದ್ದರೂ... ಹಿಂದಿ ಚಿತ್ರರಂಗ ಸನ್ನಿ ಡಿಯೋಲವ ಅವರನ್ನ ನಂಬಲಿಲ್ಲ, ಅವಕಾಶಗಳನ್ನ ಕೊಡಲಿಲ್ಲ, ಇದರಿಂದ



ಹೈರಾಣಾದ ಸನ್ನಿ ಡಿಯೋಲ್‌ಗೆ ಮಾಡಿಕೊಂಡ ಸಾಲ ಇನ್ನಷ್ಟು ಕಂಗಲಾಗಿಸಿತ್ತು. ಅಕ್ಷರಶಃ ಸನ್ನಿ ಡಿಯೋಲ್ ಅವರ ಬದುಕು ಕೇರ್ ಆಫ್ ಫುಟ್‌ಪಾತ್ ಎಂಬಂತಾಗಿತ್ತು.

ಇಂಥಾ ಸನ್ನಿ ಡಿಯೋಲ್ ಅವರನ್ನ ಕೈ ಹಿಡಿದು ಮೇಲೆತ್ತಿದ್ದು, ಮಾರುಕಟ್ಟೆಯಲ್ಲಿ ಮತ್ತೊಮ್ಮೆ ಇವರಿಗೆ ಬೆಲೆ ಬರುವಂತೆ ಮಾಡಿದ್ದು ಮತ್ತದೇ ಗದರ್ ಸಿನಿಮಾ. 2000ನೇ ಇಸ್ವಿಯಲ್ಲಿ ಕೂಡ ಮುಳುಗುತ್ತಿದ್ದ ಸಮಯದಲ್ಲಿ ಗದರ್ ಚಿತ್ರದ ಮೂಲಕ ಎದ್ದು ನಿಂತಿದ್ದ ಸನ್ನಿ ಡಿಯೋಲ್ 2023ರಲ್ಲಿ ಗದರ್ 2 ಚಿತ್ರದ ಮೂಲಕ ಮತ್ತೆ ಮೈಕೊಡವಿ ಎದ್ದು ನಿಂತರು. ಸನ್ನಿ ಡಿಯೋಲ್ ಮುಖ ಚಹರೆ ಮರೆತ ಜನ ಗದರ್ 2 ಚಿತ್ರವನ್ನ ಮುಗಿಬಿದ್ದು ನೋಡಿದರು. ಹೀಗೆ ಗದರ್ 2 ಮೂಲಕ ಮತ್ತೊಮ್ಮೆ ಗೆದ್ದ ಸನ್ನಿ ಡಿಯೋಲ್ ಸದ್ಯ ಜಾಟ್ ಚಿತ್ರದ ಮೂಲಕ ಚಿತ್ರಮಂದಿರಕ್ಕೆ ಬಂದಿದ್ದಾರೆ. ಮತ್ತೊಮ್ಮೆ ತಮ್ಮ ಅದೃಷ್ಟ ಪರೀಕ್ಷೆಯನ್ನು ಮಾಡಿಕೊಂಡಿದ್ದಾರೆ. ಆದರೆ, ಜಾಟ್ ಚಿತ್ರವನ್ನು ನೋಡಲು ಗದರ್ 2 ನೋಡಲು ಬಂದಂತೆ ಜನ ಮೊದಲ ದಿನ ಬಂದಿಲ್ಲ, ಹಾಗಂಥ ಚಿತ್ರಮಂದಿರಗಳು ಖಾಲಿ ಕೂಡ ಹೊಡೆದಿಲ್ಲ, ಮೊದಲ ದಿನ ತಕ್ಕಮಟ್ಟಿಗೆ ಹಣ ಗಳಿಸುವಲ್ಲಿ ಯಶಸ್ವಿಯಾಗಿದೆ ಜಾಟ್.

ಹೌದು, ಚಿತ್ರದ ಗಳಿಕೆಯ ಲೆಕ್ಕಾಚಾರವನ್ನು ಹಂಚಿಕೊಳ್ಳುವ ಸ್ಯಾಕ್ನಿಲ್ ವೆಬ್‌ಸೈಟ್ ಪ್ರಕಾರ ಜಾಟ್ ಚಿತ್ರ ಮೊದಲ ದಿನ ಭಾರತದಲ್ಲಿ 9.50 ಕೋಟಿ ಹಣವನ್ನು ಗಳಿಸಿದೆ. ಆ ಪೈಕಿ ಅತೀ ಹೆಚ್ಚು ಹಣ ಚೆನ್ನೈದಿಂದ ಹರಿದು ಬಂದಿದೆ. ಚೆನ್ನೈನಲ್ಲಿ ಶೇಕಡಾ 44.00% ಜನ ಜಾಟ್ ನೋಡುವ ಆಸಕ್ತಿಯನ್ನು ತೋರಿಸಿದ್ದರೆ ಬೆಂಗಳೂರಿನ ಚಿತ್ರಮಂದಿರಗಳು 17.75% ಭರ್ತಿಯಾಗಿವೆ. ದೆಹಲಿ ಶೇಕಡಾ 19% ಮುಂಬೈನಲ್ಲಿ ಶೇಕಡಾ 10.75% ಹೈದರಾಬಾದ್‌ನಲ್ಲಿ ಶೇಕಡಾ 15.75% ಮತ್ತು ಚಂದೀಗಢದಲ್ಲಿ ಶೇಕಡಾ 19% ಚಿತ್ರಮಂದಿರಗಳಲ್ಲಿ ಆಕ್ಯುಪೆನ್ಸಿ ಇತ್ತು ಎಂದು ಸ್ಯಾಕ್ನಿಲ್ ವೆಬ್‌ಸೈಟ್ ವರದಿಯನ್ನು ಮಾಡಿದೆ. ಇನ್ನು ಚಿತ್ರಕ್ಕೆ ಪ್ರೇಕ್ಷಕರು ಮತ್ತು ವಿಮರ್ಷಕರು ಜೈ ಎಂದ ಹಿನ್ನೆಲೆ ಇಂದು ಚಿತ್ರದ ಗಳಿಕೆ ಹೆಚ್ಚಾಗುವ ಸಾಧ್ಯತೆ ಇದೆ. ಮುಂದೆ ಚಿತ್ರದ ಗಳಿಕೆ ಎರಡಂಕಿಯನ್ನು ದಾಟುವ ಭರವಸೆ ಸದ್ಯ ಬಾಲಿವುಡ್ಗೆ ಇದೆ. ಮತ್ತೊಂದೆಡೆ ಮೊದಲೇ ತೆವಳುತ್ತಾ ಸಾಗುತ್ತಿದ್ದ ಸಲ್ಮಾನ್ ಖಾನ್ ಅಭಿನಯದ ಸಿಕಂದರ್, ಜಾಟ್ ಚಿತ್ರ ತೆರೆಗೆ ಬಂದ ಹಿನ್ನೆಲೆ ಬಹುತೇಕ ಕಡೆ ಎತ್ತಂಗಡಿಯಾಗಿದೆ. ಇನ್ನುಳಿದ ಕಡೆ ಸಿಕಂದರ್ ಗಳಿಕೆಯ ಮೇಲೆ ಜಾಟ್ ಪರಿಣಾಮವನ್ನು ಬೀರಿದೆ.

ಅಂದ್ಹಾಗೇ ಈ ವರ್ಷ ಬಾಲಿವುಡ್‌ನಲ್ಲಿ ಛಾವಾ ಮತ್ತು ಸಿಕಂದರ್ ಮಾತ್ರ ಮೊದಲ ದಿನ ಅಬ್ಬರಿಸಿ ಬೊಬ್ಬಿರಿದಿದ್ದವು. ಎರಡಂಕಿ ಗಳಿಕೆಯನ್ನು ಮಾಡಿದ್ದವು. ಜಾಟ್ ಚಿತ್ರದ ಗಳಿಕೆ ಎರಡಂಕಿ ದಾಟಿಲ್ಲವಾದರೂ ಕೂಡ ಈ ವರ್ಷ ಮೊದಲ ದಿನ ಅತೀ ಹೆಚ್ಚು ಗಳಿಕೆ ಕಂಡ ಮೂರನೇ ಚಿತ್ರ ಎನ್ನುವ ಹೆಗ್ಗಳಿಕೆಗೆ ಜಾಟ್ ಪಾತ್ರವಾಗಿದೆ. ☯

# ನನ್ನ ತಂದೆ ಜಯರಾಜ್ ಪಾತ್ರ ಮಾಡಲು ತುಂಬಾ ಖುಷಿಯಾಗಿದೆ: ಅಜಿತ್ ಜಯರಾಜ್

‘‘ಜಾಂಟಿ ಸನ್ ಆಫ್ ಜಯರಾಜ್’’ ಸಿನಿಮಾದ ತಾಯಿ ಸೆಂಟಿಮೆಂಟಿನ ‘ಕ್ಷಮಿಸು ತಾಯೇ’ ಎಂಬ ಹಾಡನ್ನು ಇತ್ತೀಚಿಗೆ ಬಿಡುಗಡೆ ಮಾಡಲಾಯಿತು. ಈ ಹಾಡಿಗೆ ನಿರ್ದೇಶಕ ಪ್ರೇಮ್ ಧ್ವನಿ ನೀಡಿದ್ದಾರೆ. ಈ ಟ್ರ್ಯಾಕ್ ಅನ್ನು ಗೀತರಚನೆಕಾರ ಯೋಗರಾಜ್ ಭಟ್ ಮತ್ತು ಮಹಿಳಾ ಆಯೋಗದ ಅಧ್ಯಕ್ಷೆ ಡಾ. ನಾಗಲಕ್ಷ್ಮಿ ಅವರು ಬಿಡುಗಡೆ ಮಾಡಿದರು. ಈ ಹಾಡು ಈಗಾಗಲೇ ಪ್ರೇಕ್ಷಕರಿಗೆ ಇಷ್ಟವಾಗಿದ್ದು, ಮೆಚ್ಚುಗೆಯ ಮಾತುಗಳು ಕೇಳಿಬರುತ್ತಿವೆ.







ವಿಜೇತ್ ಮಂಜಯ್ಯ ಸಂಯೋಜಿಸಿದ ಟ್ಯೂನ್ ಕೇಳಿದಾಗ ಹಿಟ್ ಆಗುತ್ತದೆ ಎಂದು ನನಗೆ ಗೊತ್ತಾಗಿತ್ತು. ಜನರು ತಮ್ಮ ತಾಯಿಯನ್ನು ನೆನಪಿಸಿಕೊಳ್ಳಬೇಕು ಎಂದು ಈ ಹಾಡು ಬರೆದಿರುವುದಾಗಿ ನಿರ್ದೇಶಕ ಆನಂದ್ ರಾಜ್ ತಿಳಿಸಿದರು. ಅವರೇ ಈ ಹಾಡಿಗೆ ಸಾಹಿತ್ಯ ಬರೆದಿದ್ದಾರೆ.

ಇದು ಚಿತ್ರದ ಕ್ಲೈಮ್ಯಾಕ್ಸ್‌ನಲ್ಲಿ ಬರುವ ಹಾಡು. ಬೇರೆ ಕಡೆಗಳಲ್ಲಿ ತಪ್ಪು ಮಾಡಿದರೆ ನಾವು ತಕ್ಷಣ ಕ್ಷಮೆ ಕೇಳುತ್ತೇವೆ. ಆದರೆ ಅಮ್ಮನ ಬಳಿ ಕ್ಷಮಿಸು ಅಂತ ಕೇಳುವುದಿಲ್ಲ. ನಮ್ಮ ಸಿನಿಮಾದ ಮೂಲಕ ಎಲ್ಲ ತಾಯಂದಿರಿಗೂ ಕ್ಷಮೆ ಕೇಳುತ್ತೇವೆ. ಅಂತಿಮವಾಗಿ ಅಮ್ಮನೇ ಸರ್ವಸ್ವವಾಗಿದ್ದು, ಕ್ಷಮೆ ಕೇಳುವ ದಾರಿಯಲ್ಲಿ ಈ ಸಾಂಗ್ ಬರುತ್ತದೆ ಎಂದು ನಿರ್ದೇಶಕರು ಈ ಹಾಡಿನ ಬಗ್ಗೆ ಮಾಹಿತಿ ನೀಡಿದರು.

ನಾಯಕನಾಗಿ ನಟಿಸುತ್ತಿರುವ ಬೆಂಗಳೂರಿನ ಭೂಗತ ಪಾತಕಿ ಎಂ.ಪಿ. ಜಯರಾಜ್ ಅವರ ಪುತ್ರ ಅಜಿತ್ ಜಯರಾಜ್ ಮಾತನಾಡಿ, ನಾನು ಎರಡು ಶೇಡ್‌ಗಳಲ್ಲಿ ನಟಿಸುತ್ತಿದ್ದೇನೆ. ನನ್ನ ತಂದೆ ಜಯರಾಜ್‌ನ ಪಾತ್ರವನ್ನು ತೆರೆಯ ಮೇಲೆ ಮಾಡಲು ನನಗೆ ಖುಷಿಯಾಗಿದೆ. ಚಾಪ್ಟರ್ 2 ಕೂಡಾ ಬರುತ್ತದೆ. ನಿರ್ಮಾಪಕ ಸೂಗುರು ಕುಮಾರ್ ಈ ಚಿತ್ರವನ್ನು ನಿರ್ಮಿಸುತ್ತಿದ್ದು, ರಾಜವರ್ಧನ್, ಶರತ್ ಲೋಹಿತಾಶ್ವ, ನಿವಿಷ್ಕಾ ಪಾಟೀಲ್ ಪ್ರಮುಖ ಪಾತ್ರದಲ್ಲಿ ನಟಿಸಿದ್ದಾರೆ. ಅರ್ಜುನ್ ಅಕೋಟ್ ಅವರ ಛಾಯಾಗ್ರಹಣವಿದೆ. ☯

# ಭಯದಲ್ಲಿದ್ದುಕೊಂಡೇ ನಗಿಸುವ ವಿದ್ಯಾಪತಿ

ಡಾಲಿ ಧನಂಜಯ್ ಅವರ ನಿರ್ಮಾಣದ ವಿದ್ಯಾಪತಿ ಚಿತ್ರವು ಗುರುವಾರ ರಾಜ್ಯಾದ್ಯಂತ ರಿಲೀಸಾಗಿದ್ದು, ವಿಮರ್ಶಕರ ಜತೆ ಪ್ರೇಕ್ಷಕರ ಮನವನ್ನೂ ಸಹ ಗೆದ್ದಿದೆ. ಇದೊಂದು ಕಾಮಿಡಿ ಕಮ್ ಆಕ್ಷನ್ ಸಿನಿಮಾ ಅನ್ನೋದು ವಿಶೇಷ. ಕಾಮಿಡಿ ಸೆನ್ಸ್ ಮೂಲಕ ಹೆಸರಾಗಿರುವ ನಟ ನಾಗಭೂಷಣ್ ಅವರು ಟಗರು ಪಲ್ಯ ನಂತರ ಮತ್ತೊಮ್ಮೆ ವಿದ್ಯಾಪತಿ ಸಿನಿಮಾದಲ್ಲಿ ನಾಯಕನಾಗಿ ಪ್ರೇಕ್ಷಕರನ್ನ ನಗಿಸುವಲ್ಲಿ ಯಶಸ್ವಿಯಾಗಿದ್ದಾರೆ. ಉಪಾಧ್ಯಕ್ಷ ಚಿತ್ರದ ನಂತರ ಮಲೈಕಾ ವಸುಪಾಲ್ ನಾಯಕಿಯಾಗಿ ನಟಿಸಿರುವ ಎರಡನೇ ಚಿತ್ರವಿದು.

ಮೈದಣಿಸಿಕೊಳ್ಳುವ ಯಾವುದೇ ಕೆಲಸವನ್ನೂ ಸಹ ಮಾಡದೆ ಲೈಫನ್ನು ಆರಾಮಾಗಿ ಎಂಜಾಯ್ ಮಾಡಬೇಕೆಂಬ ಧ್ಯೇಯ ಇಟ್ಟುಕೊಂಡಿದ್ದ ಸಿದ್ದು (ನಾಗಭೂಷಣ) ಖ್ಯಾತ ಚಿತ್ರನಟಿ ವಿದ್ಯಾಳ(ಮಲೈಕಾ) ಮನಸನ್ನು ಸುಳ್ಳಿನ ಸರಮಾಲೆಯಿಂದಲೇ ಗೆದ್ದು, ಆಕೆಯನ್ನೇ ಮದುವೆಯೂ ಆಗಿರುತ್ತಾನೆ. ಹಾಗೇ ಹೆಂಡತಿಯ ದುಡ್ಡಲ್ಲಿ ರಾಯಲ್ ಆಗಿ ಮೆರೆಯುತ್ತಿದ್ದ ಸಿದ್ದು ಬಾಳಲ್ಲಿ ಜಗ್ಗು(ಗರುಡ ರಾಮ್) ವಿಲನ್ ಆಗಿ ಬರುತ್ತಾನೆ. ಅಲ್ಲಿಂದ ಸಿದ್ದು ಬಾಳಲ್ಲಿ ಅಲ್ಲೋಲ ಕಲ್ಲೋಲ. ಇದೇ ಕಾರಣಕ್ಕೆ ಸಿದ್ದು ಹೆಂಡತಿಯಿಂದ ಗೆಟೌಟ್ ಅನಿಸಿಕೊಂಡು ಆಕೆಯ ಮನೆಯಿಂದ ಹೊರಬರುತ್ತಾನೆ, ಹಣದ ಅಹಂಕಾರದಲ್ಲಿ ತಂದೆ ತಾಯನ್ನೂ ಕಡೆಗಣಿಸಿದ್ದಸಿದ್ದು, ಮತ್ತೆ ಅದೇ ಮನೆಗೆ ಹೋಗಬೇಕಾಗುತ್ತದೆ, ತನ್ನ ಪತ್ನಿ ಅಲ್ಲದೆ ಹೆತ್ತವರನ್ನೂ ಅವಮಾನಿಸಿದ ದೈತ್ಯಜಗ್ಗು ವಿರುದ್ಧ ಸಿದ್ದು ಯಾವ ರೀತಿ ಹೋರಾಡಿ ಗೆಲ್ತಾನೆ ಎನ್ನುವುದೇ ವಿದ್ಯಾಪತಿ ಚಿತ್ರದ ಮುಖ್ಯಕಥೆ. ಸಣಕಲು ಕಡ್ಡಿಯಂತಿರುವ ಸಿದ್ದು ದೈತ್ಯಾಕಾರದ ಜಗ್ಗು ವಿರುದ್ಧ ಹೋರಾಡಿ ಗೆಲ್ಲಲು ಏನೆಲ್ಲ ಕಸರತ್ತು ಮಾಡ್ತಾನೆ, ಕೊನೆಯಲ್ಲಿ ಆತನಿಗೆ ಯಾರು ಗುರುವಾಗಿ ನಿಂತು ಆತನ ಗೆಲುವಿಗೆ ಕಾರಣರಾಗ್ತಾರೆ ಅನ್ನೋದನ್ನು ವಿದ್ಯಾಪತಿ ಚಿತ್ರದ ಮೂಲಕ ತೋರಿಸಲು ಪ್ರಯತ್ನಿಸಿದ್ದಾರೆ ಜೋಡಿ ನಿರ್ದೇಶಕರಾದ ಹಸೀಮ ಹಾಗೂ ಇಶಾನ್. ನಾಗಭೂಷಣ ಅವರ ಕಾಮಿಡಿ ಸೆನ್ಸ್ ಪ್ರೇಕ್ಷಕರಿಗೆ ಇಷ್ಟ ಆಗುತ್ತೆ. ಇವರ ಜೊತೆ ಸ್ನೇಹಿತನಾಗಿ ನಟಿಸಿರುವ ಶ್ರೀವತ್ಸ ಅವರ ಪಾತ್ರ ಕೂಡ ಗಮನ ಸೆಳೆಯುತ್ತೆ. ಅನಕೊಂಡ ಪಾತ್ರದಲ್ಲಿ ಡಾಲಿ ಧನಂಜಯ್ ವಿಶಿಷ್ಟ ಲುಕ್‌ನಲ್ಲಿ ಎಂಟ್ರಿ ಕೊಟ್ಟಿರುವುದು ಸಿನಿಮಾಗೆ ಪ್ಲಸ್ ಆಗಿದೆ, ಇಲ್ಲಿವರೆಗೆ ಸಖತ್ ರಗಡ್ ಆಗಿ ಕಾಣಿಸಿಕೊಂಡಿದ್ದ, ಗರುಡರಾಮ್ ವಿಶಿಷ್ಟ ಪಾತ್ರದ ಮೂಲಕ ಗಮನ ಸೆಳೆಯುತ್ತಾರೆ. ‘ವಿದ್ಯಾಪತಿ’ ಪ್ರೇಕ್ಷಕರನ್ನು ಖಂಡಿತವಾಗಿಯೂ ನಗಿಸುತ್ತೆ. ಇಡೀ ಕುಟುಂಬದೊಂದಿಗೆ ಸಿನಿಮಾ ನೋಡಬೇಕು ಅಂದುಕೊಂಡವರಿಗೆ ಇದು ಒಳ್ಳೆಯ ಎಂಟರ್‌ಟೈನರ್. ☯



# ಹಿರಿಯ ಹಾಸ್ಯ ನಟ ಬ್ಯಾಂಕ್ ಜನಾರ್ಧನ್ ವಿಧಿವಶ

500 ಕ್ಕೂ ಹೆಚ್ಚು ಕನ್ನಡ ಸಿನಿಮಾಗಳಲ್ಲಿ ಜನರನ್ನು ನಕ್ಕು-ನಲಿಸಿದ ಹಾಸ್ಯ ನಟ ಬ್ಯಾಂಕ್ ಜನಾರ್ಧನ್ (76) ನಿಧನರಾಗಿದ್ದಾರೆ. ಮಧ್ಯರಾತ್ರಿ 2.30ರ ಸುಮಾರಿಗೆ ಬೆಂಗಳೂರಿನ ಮಣಿಪಾಲ್ ಆಸ್ಪತ್ರೆಯಲ್ಲಿ ನಟ ಬ್ಯಾಂಕ್ ಜನಾರ್ಧನ್ ಕೊನೆಯುಸಿರೆಳೆದಿದ್ದಾರೆ.



’ಶ್’ ಸಿನಿಮಾ ನೋಡಿ ಅಣ್ಣಾವ್ರು ಕೂಡ ಬ್ಯಾಂಕ್ ಅಭಿಮಾನಿ ಆಗಿಬಿಟ್ಟಿದ್ದರು. ’ಓಂ’ ಚಿತ್ರವನ್ನು ನಿರ್ಮಾಣ ಮಾಡುವ ಮುನ್ನ ಉಪೇಂದ್ರ ನಿರ್ದೇಶನದ ಸಿನಿಮಾ ನೋಡಬೇಕು ಎಂದು ಅಣ್ಣಾವ್ರ ಹೇಳಿದಾಗ ’ಶ್’ ಸಿನಿಮಾ ತೋರಿಸಲಾಗಿತ್ತು. ಮೂರು ಬಾರಿ ಸಿನಿಮಾ ನೋಡಿ ಅಣ್ಣಾವ್ರ ಮೆಚ್ಚಿಕೊಂಡಿದ್ದರು. ಅದರಲ್ಲೂ ಪೊಲೀಸ್ ಅಧಿಕಾರಿ ಪಾತ್ರದಲ್ಲಿ ಬ್ಯಾಂಕ್ ಜನಾರ್ಧನ್ ಬೈಯ್ಯುವ ಸನ್ನಿವೇಶವನ್ನು ಡಾ. ರಾಜ್ ಬಹಳ ಎಂಜಾಯ್ ಮಾಡಿದ್ದರು. ಈ ವಿಚಾರವನ್ನು ಸಾಕಷ್ಟು ಸಂದರ್ಭಗಳಲ್ಲಿ ಬ್ಯಾಂಕ್ ಜನಾರ್ಧನ್ ಅವರಿಗೆ ಅಣ್ಣಾವ್ರು ಹೇಳಿದ್ದರು.

ಜನಾರ್ಧನ್ ಅವರು ಬ್ಯಾಂಕ್ ನೌಕರನಾಗಿದ್ದುಕೊಂಡೇ ನಟಿಸುತ್ತಿದ್ದರು. ಜನಾರ್ಧನ್ ಎಂಬ ಹೆಸರಿನ ಸಾಕಷ್ಟು ಜನ ಆಗ ಚಿತ್ರರಂಗದಲ್ಲಿ ಕೆಲಸ ಮಾಡುತ್ತಿದ್ದರು. ಹಾಗಾಗಿ ವಿಭಿನ್ನವಾಗಿರಲಿ, ಗುರ್ತಿಸಲು ಸುಲಭವಾಗಲಿ ಎನ್ನುವ ಕಾರಣಕ್ಕೆ ಪಿಆರ್‌ಓ ಆಗಿದ್ದ ನಾಗೇಂದ್ರ ಅವರು ಇನ್ನು ಮುಂದೆ ನಿಮ್ಮ ಹೆಸರನ್ನು ಬ್ಯಾಂಕ್ ಜನಾರ್ಧನ್ ಎಂದು ಬದಲಿಸಿಕೊಳ್ಳಿ ಎಂದಿದ್ದರು. ಅವರ ಸಲಹೆಯಂತೆ ಬ್ಯಾಂಕ್ ಜನಾರ್ಧನ್ ಎಂಬ ಹೆಸರು ಖಾಯಂ ಆಗಿತ್ತು.

ಬ್ಯಾಂಕ್‌ನಲ್ಲಿ ಕೆಲಸ ಮಾಡಿಕೊಂಡೇ ನಾಟಕಗಳಲ್ಲಿ ಜನಾರ್ಧನ್ ನಟಿಸುತ್ತಿದ್ದರು. ’ಗೌಡ್ರ ಗದ್ಲ’ ನಾಟಕದಲ್ಲಿ ನಟಿಸಿ ಜನಮನ್ನಣೆ ಗಳಿಸಿದ್ದರು. ನಾಟಕ ಕಂಪನಿಗಳಲ್ಲಿ ಬಣ್ಣ ಹಚ್ಚಲು ಆರಂಭಿಸಿದ್ದರು. ಖ್ಯಾತ ಹಾಸ್ಯನಟ ಧೀರೇಂದ್ರ ಗೋಪಾಲ್ ಸಹಾಯದಿಂದ ’ಊರಿಗೆ ಉಪಕಾರಿ’ ಚಿತ್ರದಲ್ಲಿ ಸಣ್ಣ ಪಾತ್ರ ಮಾಡಿದ್ದರು. ’ಅಜಗಜಾಂತರ’ ಚಿತ್ರದ ಪಾತ್ರ ಒಳ್ಳೆ ಹೆಸರು ತಂದುಕೊಟ್ಟಿತ್ತು. ಅಲ್ಲಿಂದ ಮುಂದೆ ಬೇಡಿಕೆ ಹೆಚ್ಚಾಗಿತ್ತು. ☯

POLICE NEWS REGISTERED KA/BGW-1618/2024-26 REGD. WITH RNI NO. 36669/82 PAGES : 16 | POSTED AT BANGALORE PSO BG 560026 Every Tuesday | Publishing Date : 13.4.2025

# ಗೆಳೆಯ ಧನ್ವೀರ್‌ನ 'ವಾಮನ' ಚಿತ್ರ ವೀಕ್ಷಿಸಿದ ನಟ ದರ್ಶನ್

ಚಿತ್ರದುರ್ಗ ಮೂಲದ ರೇಣುಕಾಸ್ವಾಮಿ ಹತ್ಯೆ ಪ್ರಕರಣದಲ್ಲಿ ಜೈಲುಪಾಲಾದ ನಟ ದರ್ಶನ್‌ಗೆ ಷರತ್ತುಬದ್ಧ ಜಾಮೀನು ಸಿಕ್ಕಿ ಬಿಡುಗಡೆಯಾಗಿ ಈಗ ಡೆವಿಲ್ ಶೂಟಿಂಗ್‌ನಲ್ಲಿ ಬ್ಯುಸಿಯಾಗಿದ್ದಾರೆ. ಈ ಮಧ್ಯೆ ಕಳೆದ 10 ತಿಂಗಳಿಂದ ಮಾಧ್ಯಮಗಳಿಂದ ದೂರವಿದ್ದ ದರ್ಶನ್ ಬೆಂಗಳೂರಿನ ಜಿಟಿ ಮಾಲ್‌ನಲ್ಲಿ ತನ್ನ ಸ್ನೇಹಿತ, ನಟ ಧನ್ವೀರ್ ಅಭಿನಯದ ಇಂದು ತೆರೆಕಂಡ ವಾಮನ ಸಿನಿಮಾ ವೀಕ್ಷಿಸಿದ್ದಾರೆ.

ಸಿನಿಮಾ ವೀಕ್ಷಿಸಿದ ಬಳಿಕ ದರ್ಶನ್ ಮಾಧ್ಯಮ ಪ್ರತಿನಿಧಿಗಳಿಗೆ ಪ್ರತಿಕ್ರಿಯೆ ನೀಡಿದ್ದಾರೆ. ಚಿತ್ರದಿಂದ ಚಿತ್ರಕ್ಕೆ ಧನ್ವೀರ್ ನಟನೆಯಲ್ಲಿ ಪಕ್ವತೆ ಕಾಣುತ್ತಿದೆ. 'ವಾಮನ' ಸಿನಿಮಾ ಬಹಳ ಚೆನ್ನಾಗಿದೆ. ಟ್ರೈಲರ್ ನೀಡಿದರೆ ಬರೀ ಆಕ್ಷನ್ ಎನಿಸುತ್ತದೆ. ಆದರೆ ಚಿತ್ರದಲ್ಲಿ ಮದರ್ ಸೆಂಟಿಮೆಂಟ್ ಇದೆ. ಆಕ್ಷನ್ ಸನ್ನಿವೇಶಗಳಲ್ಲಿ ಧನ್ವೀರ್ ಪರ್ಫಾರ್ಮೆನ್ಸ್ ಚೆನ್ನಾಗಿದೆ.



ವಾಮನ ಬಲಿ ಚಕ್ರವರ್ತಿಯ ಬಳಿ ಬಂದು ಮೂರು ಹೆಜ್ಜೆಗಳನ್ನಿಡಲು ಜಾಗ ಕೇಳುತ್ತಾನೆ. ಅದೇ ರೀತಿ ಧನ್ವೀರ್ ಕನ್ನಡ ಪ್ರೇಕ್ಷಕರ ಬಳಿ ಈ ಸಿನಿಮಾ ಗೆಲುವನ್ನು ಕೇಳುತ್ತಿದ್ದಾರೆ, ಅವರನ್ನು ಹರಸಿ ಹಾರೈಸಿ ಬೆಳೆಯಲು ಅವಕಾಶ ಕೊಡಿ ಎಂದು ಕೇಳಿಕೊಂಡರು.

ನಾವು ಮಾಡುತ್ತಿರುವುದು ಕನ್ನಡ ಸಿನಿಮಾ. ಪ್ಯಾನ್ ಇಂಡಿಯಾ ಸಿನಿಮಾ ಅಲ್ಲ, ಕರ್ನಾಟಕ ಜನತೆಗೆ ಇಲ್ಲಿರುವ ಪ್ರೇಕ್ಷಕರಿಗಾಗಿ ಸಿನಿಮಾ ಮಾಡ್ತೀವಿ. ಒಳ್ಳೆ ನಿರ್ದೇಶಕರು, ಒಳ್ಳೆ ಕಥೆ ಸಿಕ್ಕರೆ ಖಂಡಿತ ಧನ್ವೀರ್ ಜೊತೆ ನಟಿಸುತ್ತೇನೆ ಎಂದರು.

ಇನ್ನು ದರ್ಶನ್, ರೇಣುಕಾಸ್ವಾಮಿ ಹತ್ಯೆ ಪ್ರಕರಣದ ಸಾಕ್ಷಿ ನಟ ಚಿಕ್ಕಣ್ಣ ಜೊತೆ ಸಿನಿಮಾ ವೀಕ್ಷಿಸಿದ್ದಾರೆ. ರೇಣುಕಾಸ್ವಾಮಿ ಪ್ರಕರಣದ ಸಾಕ್ಷಿ ಆಗಿರುವ ಚಿಕ್ಕಣ್ಣನ ಜೊತೆಗೆ ದರ್ಶನ್ ಕಾಣಿಸಿಕೊಂಡು ಒಟ್ಟಿಗೆ ಸಿನಿಮಾ ವೀಕ್ಷಿಸಿದ್ದು, ಸಹಜವಾಗಿಯೇ ಚರ್ಚೆಗೆ ಗ್ರಾಸವಾಗಿದೆ. ಜಾಮೀನು ಪಡೆದು ಹೊರಬಂದ ಆರೋಪಿಗಳು ಪ್ರಕರಣದ ಸಾಕ್ಷಿಗಳನ್ನು ಭೇಟಿ ಮಾಡುವಂತಿಲ್ಲ, ಆರೋಪಿ ಸಾಕ್ಷಿಯ ಮೇಲೆ ಪ್ರಭಾವ ಬೀರಬಹುದು ಎನ್ನುವ ಕಾರಣಕ್ಕೆ ಈ ನಿಯಮ ಇದೆ.




ರೇಣುಕಾಸ್ವಾಮಿ ಹತ್ಯೆ ನಡೆದ ದಿನ ದರ್ಶನ್ ಪಟ್ಟಣಗೆರೆ ಶೆಡ್‌ಗೆ ಹೋಗುವ ಮುನ್ನ ರೆಸ್ಟೋರೆಂಟ್‌ನಲ್ಲಿ ಪಾರ್ಟಿ ಮಾಡಿದ್ದರು. ಈ ಪಾರ್ಟಿಯಲ್ಲಿ ಹಾಸ್ಯನಟ ಚಿಕ್ಕಣ್ಣ ಕೂಡ ಭಾಗಿ ಆಗಿದ್ದರು. ಹಾಗಾಗಿ ಅವರನ್ನು ಸಾಕ್ಷಿ ಆಗಿ ಪರಿಗಣಿಸಿ ನೋಟಿಸ್ ನೀಡಿ ಪೊಲೀಸರು ವಿಚಾರಣೆ ನಡೆಸಿದ್ದರು. ಆದರೆ ಆಗಸ್ಟ್‌ನಲ್ಲಿ ಪರಪ್ಪನ ಅಗ್ರಹಾರ ಜೈಲಿಗೆ ಭೇಟಿ ನೀಡಿ ದರ್ಶನ್ ಅವರನ್ನು ಚಿಕ್ಕಣ್ಣ ಭೇಟಿ ಮಾಡಿದ್ದು ಭಾರೀ ಚರ್ಚೆಗೆ ಕಾರಣವಾಗಿತ್ತು.

ಅನಾರೋಗ್ಯ ಕಾರಣ ನೀಡಿ ಮೊನ್ನೆ ಕೋರ್ಟ್‌ಗೆ ವಿಚಾರಣೆಗೆ ಗೈರಾಗಿದ್ದ ದರ್ಶನ್ ವಿರುದ್ಧ ನ್ಯಾಯಾಧೀಶರು ಗರಂ ಆಗಿದ್ದರು ಎಂದು ಸುದ್ದಿಯಾಗಿತ್ತು. ಇದೀಗ ದರ್ಶನ್ ಜೊತೆ ಚಿಕ್ಕಣ್ಣ ಕಾಣಿಸಿರುವುದು, ಸಿನಿಮಾ ವೀಕ್ಷಣೆಗೆ ದರ್ಶನ್ ಹಾಜರಾಗಿರುವುದರ ವಿರುದ್ಧ ಬೆಂಗಳೂರು ಪೊಲೀಸರು ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸುತ್ತಾರೆಯೇ ಎಂದು ನೋಡಬೇಕಿದೆ. ☯

# ನನಗೂ ಒಬ್ಬ ಗೆಳೆಯ ಬೇಕು!

ಟಾಲಿವುಡ್ ನಟ ಪವನ್ ಕಲ್ಯಾಣ್ ಮಾಜಿ ಪತ್ನಿ ರೇಣು ದೇಸಾಯಿ ಅವರು ತಾವ್ಯಾಕೆ ಎರಡನೇ ಮದುವೆಯಾಗಿಲ್ಲ ಎಂಬುದರ ಬಗ್ಗೆ ಸಂದರ್ಶನವೊಂದರಲ್ಲಿ ಮುಕ್ತವಾಗಿ ಮಾತನಾಡಿದ್ದಾರೆ.

2000ದ ದಶಕದ ಆರಂಭದಲ್ಲಿ ನಟ-ರಾಜಕಾರಣಿ ಪವನ್ ಕಲ್ಯಾಣ್ ಅವರೊಂದಿಗೆ ಡೀಪ್ ಲವ್‌ನಲ್ಲಿದ್ದು ಆ ನಂತರ ಮದುವೆಯಾಗಿ ದಾಂಪತ್ಯ ಜೀವನ ನಡೆಸಿದ್ದ ನಟಿ ರೇಣು ದೇಸಾಯಿ ಈಗ ಸಿಂಗಲ್ ಮದರ್. ವಿಚ್ಛೇದನದ ನಂತರ ತಮ್ಮ ವೈಯಕ್ತಿಕ ಜೀವನದ ಬಗ್ಗೆ ಗಮನಹರಿಸಿ ಮಕ್ಕಳ ಕಡೆ ತಮ್ಮ ಸಂಪೂರ್ಣ ಗಮನ ನೀಡಿದರು. ನನ್ನ ಮಕ್ಕಳ ಬಗ್ಗೆ ನನಗಿರುವ ಜವಾಬ್ದಾರಿ ನಾನು ಎರಡನೇ ಮದುವೆ ಆಗದಂತೆ ತಡೆಯುತ್ತಿದೆ ಎಂದಿದ್ದಾರೆ.


ಆದರೆ ಈಗ ಅವರ ಹೇಳಿಕೆಯೊಂದು ವೈರಲ್ ಆಗಿದೆ. ಮಗಳಿಗೆ 18 ವರ್ಷ ತುಂಬುವುದನ್ನು ಕಾಯುತ್ತಿದ್ದೇನೆ. ಮಗಳಿಗೆ 18 ವರ್ಷದವಾದರೆ ಮದುವೆಯಾಗುತ್ತೇನೆ. ನನಗೂ ಬಾಯ್‌ಫ್ರೆಂಡ್



ಬೇಕು ಎಂದು ಹೇಳಿರುವ ಮಾತು ಎಲ್ಲೆಡೆ ವೈರಲ್ ಆಗಿದೆ.

ಡಿವೋರ್ಸ್ ನಂತರ ಪವನ್ ಕಲ್ಯಾಣ್ ಅವರು 2013ರಲ್ಲಿ ರಷ್ಯಾದ ನಟಿ ಅನ್ನಾ ಲೆಜ್ನೆವಾ ಅವರನ್ನು ವಿವಾಹವಾದರು. ಆದರೆ ರೇಣು ಮರುಮದುವೆಯಾಗಲು ನಿರ್ಧರಿಸಲಿಲ್ಲ, ನಿಖಿಲ್ ವಿಜಯೇಂದ್ರ ಸಿಂಹ ಪಾಡ್‌ಕ್ಯಾಸ್ಟ್‌ನಲ್ಲಿ ನಡೆದ ನೇರ ಸಂಭಾಷಣೆಯಲ್ಲಿ ನಟಿ ತಾನು ಏಕೆ ಒಂಟಿಯಾಗಿ ಉಳಿದಿದ್ದಾರೆ.

ನಿಮ್ಮ ಜೀವನವನ್ನು ಹಂಚಿಕೊಳ್ಳಲು ಸಂಗಾತಿಯ ಅಗತ್ಯವಿದೆಯೇ ಎಂದು ರೇಣು ಕೇಳಿದಾಗ, ಖಂಡಿತ, ನನಗೂ ಒಬ್ಬ ಸಂಗಾತಿ ಬೇಕು ಅನಿಸುತ್ತದೆ. ಆದರೆ ನನ್ನ ಮಕ್ಕಳ ಬಗ್ಗೆ ನನಗಿರುವ ಜವಾಬ್ದಾರಿಯ ಪ್ರಜ್ಞೆಯೇ ನನ್ನನ್ನು ಹಾಗೆ ಮಾಡದಂತೆ ತಡೆಯುತ್ತದೆ ಎಂದು ಹೇಳಿದ್ದಾರೆ.



ನಾನು ಮರುಮದುವೆ ಎಂಬ ವಿಷಯವನ್ನು ಪ್ರತ್ಯೇಕವಾಗಿ ನೋಡಿದರೆ, ಹೌದು, ನನಗೆ ಒಬ್ಬ ಗೆಳೆಯ ಇರಬೇಕು. ನನಗೆ ಮದುವೆ ಆಗಬೇಕು, ನನಗೆ ಒಂದು ಜೀವನ ಇರಬೇಕು. ಆದರೆ ನಾನು ಅದನ್ನು ಮಕ್ಕಳ ದೃಷ್ಟಿಕೋನದಿಂದ ನೋಡಿದಾಗ ಇದು ಬದಲಾಗುತ್ತದೆ ಎಂದಿದ್ದಾರೆ.

ಅವರು 2018ರ ನಿಶ್ಚಿತಾರ್ಥದ ಬ್ರೇಕಪ್ ಬಗ್ಗೆಯೂ ಮಾತನಾಡಿದರು. ನಾನು ಮತ್ತೆ ಮದುವೆಯಾಗಲು ಪ್ರಯತ್ನಿಸಿದೆ. ನಾನು ನಿಶ್ಚಿತಾರ್ಥ ಮಾಡಿಕೊಂಡೆ. ಅದು ಒಂದು ವ್ಯವಸ್ಥಿತ ವಿಷಯವಾಗಿತ್ತು. ಆದರೆ ಮದುವೆಯಾದರೆ ಆ ಹೊಸ ಸಂಬಂಧಕ್ಕೆ ಅಥವಾ ಮಕ್ಕಳಿಗೆ ನಾನು ನ್ಯಾಯ ಒದಗಿಸಲು ಸಾಧ್ಯವಾಗುವುದಿಲ್ಲ ಎಂದು ನಾನು ಅರಿತುಕೊಂಡೆ ಎಂದಿದ್ದಾರೆ.

ಈ ಜೋಡಿ 2009ರಲ್ಲಿ ವಿವಾಹವಾದರು. 2004 ರಲ್ಲಿ ಅಕಿರಾ ನಂದನ್ ಮತ್ತು 2010ರಲ್ಲಿ ಆದ್ಯಾ ಎಂಬ ಇಬ್ಬರು ಮಕ್ಕಳನ್ನು ಪಡೆದರು. ನಂತರ 2011ರಲ್ಲಿ ವಿಚ್ಛೇದನಕ್ಕೆ ಅರ್ಜಿ ಸಲ್ಲಿಸಿದರು. 2012 ರಲ್ಲಿ ಡಿವೋರ್ಸ್ ಫೈನಲ್ ಆಯಿತು. ☯



# ಹಸೆಮಣೆ ಏರಲು ಆ್ಯಂಕರ್ ಅನುಶ್ರೀ ಸಜ್ಜು!

ಕನ್ನಡ ಕಿರುತೆರೆಯ ಖ್ಯಾತ ನಿರೂಪಕಿ ಅನುಶ್ರೀ ಹಸೆಮಣೆ ಏರಲು ಸಜ್ಜಾಗಿದ್ದು, ಹುಡುಗನ ಕುರಿತು ಮಾತನಾಡಿದ್ದಾರೆ. ಸೋಷಿಯಲ್ ಮಿಡಿಯಾ ಲೈವ್‌ಗೆ ಬಂದಿದ್ದ ಅನುಶ್ರೀ ಅವರಿಗೆ ನಟಿ ಮಲ್ಲೈಕಾ ವಸುಪಾಲ್ ಹಾಗೂ ನಟ ನಾಗಭೂಷಣ್ ಅವರು ನಿಮ್ಮ ಹುಡುಗ ಹೇಗಿರಬೇಕು? ಮದುವೆ ಯಾವಾಗ ಎಂದು ಪ್ರಶ್ನಿಸಿದ್ದಾರೆ. ಈ ವೇಳೆ ಇದೇ 2025ರ ಅಂತ್ಯದೊಳಗೆ ಮದುವೆಯಾಗುವುದಾಗಿ ಅನುಶ್ರೀ ಹೇಳಿದ್ದಾರೆ.

ಅನುಶ್ರೀ ಮಾತಿಗೆ ಮಲ್ಲೈಕಾ ವಸುಪಾಲ್ ಮತ್ತು ನಾಗಭೂಷಣ್ ಹೌದಾ ಎಂದು ಮತ್ತೊಮ್ಮೆ ಕೇಳಿದ್ದು, ಹೌದು. ಈ ವರ್ಷವೇ ಮದುವೆ ಆಗುತ್ತೀನಿ ಎಂದು ಅಧಿಕೃತವಾಗಿ ಹೇಳಿದ್ದಾರೆ. ಇದೇ ವೇಳೆ ತಮ್ಮ ಹುಡುಗ ಹೇಗಿರಬೇಕೆಂದೂ ಮನಬಿಚ್ಚಿ ಮಾತನಾಡಿದ್ದಾರೆ. ನನ್ನ ಹುಡುಗ ತುಂಬ ರೆಸ್ಪಾನ್ಸಿಬಲ್ ಆಗಿರಬೇಕು. ನನ್ನ ಪರವಾಗಿ ಅಲ್ಲ ಅವನ ಲೈಫ್ ಪರವಾಗಿ ರೆಸ್ಪಾನ್ಸಿಬಲ್ ಆಗಿದ್ರೆ ಸಾಕು. ಅವನು ಬದುಕಬೇಕು, ನನ್ನನ್ನು ಬದುಕೋಕೆ ಬಿಡಬೇಕು ಎಂದು ತಿಳಿಸಿದ್ದಾರೆ.

ಅನುಶ್ರೀ ಅವರ ಮದುವೆ ಕುರಿತು ಅನೇಕ ಕಾರ್ಯಕ್ರಮಗಳಲ್ಲಿ ಅವರ ಬಳಿ ಪ್ರಶ್ನೆ ಕೇಳಲಾಗುತ್ತಿತ್ತು. ಈ ವೇಳೆ ನಟಿ ಅಡ್ಡಗೋಡೆ ಮೇಲೆ ದೀಪ ಇಟ್ಟಂತೆಯೇ ಮಾತನಾಡುತ್ತಿದ್ದರು. ಇದೀಗ ವಿವಾಹ ಕುರಿತು ಅಧಿಕೃತವಾಗಿ ಹೇಳಿಕೆ ನೀಡಿದ್ದಾರೆ. ☯

Vol. 40 No. 45 Edited, Printed, Published & Owned by M. RAHUL, Printed by him at Shri Omkar Printers, # 4/1, Mahimappa Industrial Estate, Near PIA Bhavan, 100ft Road, Jalahalli Cross, Chokkasandra, T. Dasarahalli Post, BANGALORE-560 057. ☎ 080-23588510, 9513892666
Email: policenewsreporter@gmail.com